

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 2 ಬುಧವಾರ 2023

ಸಂಪುಟ: 44 | ಸಂಚಿಕೆ: 108 | ಪುಟಗಳು: 10

₹4



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಭರ್ಜರಿ ತಯಾರಿ

ಶೆಟ್ಟರ್, ಸವದಿ ಸೇರಿ ಕೆಲವರಿಗೆ ಸಂಪುಟದಲ್ಲಿ ಸ್ಥಾನ

ರಾಜ್ಯದ ಸಿಎಂ, ಡಿಸಿಎಂ, ಕೆಲ ಪ್ರಭಾವಿ ಸಚಿವರು, ಶಾಸಕರು, ಮುಖಂಡರೊಂದಿಗೆ ಇಂದು ಕಾಂಗ್ರೆಸ್ ವರಿಷ್ಠರ ಸಭೆ

ಲೋಕಸಭಾ ಚುನಾವಣೆಗೆ 8 ಪ್ರಭಾವಿ ಸಚಿವರ ಸ್ಪರ್ಧೆಗಿಳಿಸಲು ವರಿಷ್ಠರ ಆಸಕ್ತಿ

ಬೆಂಗಳೂರು, ಆ.1(ಕೆಎಂಶಿ)– ಮುಂಬರುವ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಾಜಿ ಮುಖ್ಯಮಂತ್ರಿ ಜಗದೀಶ್‌ಶೆಟ್ಟರ್, ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಸೇರಿದಂತೆ ಕೆಲವು ಪ್ರಭಾವಿ ಮತ್ತು ವರ್ಚಸ್ವಿ ನಾಯಕರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟಕ್ಕೆ ಸೇರ್ಪಡೆ ಮಾಡಲು ಕಾಂಗ್ರೆಸ್ ವರಿಷ್ಠರು ಆಸಕ್ತಿ ತೋರಿದ್ದಾರೆ.





ಅಲ್ಲದೆ, ಸಿದ್ದರಾಮಯ್ಯ ಸಂಪುಟದಲ್ಲಿರುವ 8 ಪ್ರಭಾವಿ ಸಚಿವರನ್ನು ಮುಂಬರುವ ಲೋಕಸಭಾ ಚುನಾವಣಾ ಕಣಕ್ಕಿಳಿಸಲು ವರಿಷ್ಠರು ಮುಂದಾಗಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜನತೆಗೆ ನೀಡಿರುವ ಭರವಸೆಗಳ ಈಡೇರಿಕೆ ಹಾಗೂ ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಲು ವರಿಷ್ಠರು, ಮುಖ್ಯಮಂತ್ರಿ ಹಾಗೂ ಅವರ ಸಂಪುಟದ ಕೆಲವು ಸಹೋದ್ಯೋಗಿಗಳು, ಜೊತೆಗೆ ಆಯ್ದ ಶಾಸಕರಿಗೆ ಬುಲಾವ್ ನೀಡಿದ್ದಾರೆ. ವರಿಷ್ಠರ ಆದೇಶದಂತೆ ಆಹ್ವಾನಿತರೆಲ್ಲರೂ ಈಗ ದೆಹಲಿ ತಲುಪಿದ್ದು, ಎಐಸಿಸಿಯ ಕೇಂದ್ರ ಕಚೇರಿಯ ವಾರ್ ರೂಂನಲ್ಲಿ ನಾಳೆ ವರಿಷ್ಠರು ಮತ್ತು ರಾಜ್ಯ ನಾಯಕರೊಂದಿಗೆ ಮುಖಾಮುಖಿ ಚರ್ಚೆಯಾಗಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಹಿರಿಯ ನಾಯಕರಾದ ರಾಹುಲ್‌ಗಾಂಧಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಅವರು ರಾಜ್ಯದ ನಾಯಕರೊಂದಿಗೆ ಚರ್ಚೆ ಮಾಡಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲವೆ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಚಿವರಿಗೆ ಮತ್ತು ಹಿರಿಯ ಮುಖಂಡರಿಗೆ ಕೆಲವು ಸಲಹೆ–ಸೂಚನೆಗಳನ್ನು ನೀಡಲು ಸಾಧ್ಯವಾಗುವುದಿಲ್ಲ.

ಇವರು ಹೇಳಬೇಕಾಗಿರುವುದನ್ನು ವರಿಷ್ಠರು ನೇರವಾಗಿ ಸಚಿವರ ಗಮನಕ್ಕೆ ತರಲಿದ್ದಾರೆ. ಲೋಕಸಭೆ ಚುನಾವಣೆಗೆ ಕೆಲವು ಮಂತ್ರಿಗಳು ಕಣಕ್ಕಿಳಿಯಬೇಕಾಗಿರುವುದು ಅನಿವಾರ್ಯ. ಯಾರು ಸ್ಪರ್ಧೆ ಮಾಡಬೇಕು ಎಂಬುದನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇವೆ. ಎನ್‌ಡಿಎ ಅಧಿಕಾರದಿಂದ ಕೆಳಗಿಳಿಸಿ ಇಂಡಿಯಾ ಅಧಿಕಾರಕ್ಕೆ ಬರಲು ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗಳಿಸಬೇಕು. ಇದಕ್ಕೆ ನಿಮ್ಮ ಸಹಕಾರ ಹಾಗೂ ತ್ಯಾಗದ ಅಗತ್ಯವಿದೆ ಎಂಬ ಸಂದೇಶ ನೀಡಲಿದ್ದಾರೆ. ಶೆಟ್ಟರ್ ಹಾಗೂ ಸವದಿ ಅವರು ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರಿಂದ ಉತ್ತರ ▶ 6ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಬೈಕ್, ಆಟೋ, ಟ್ರಾಕ್ಟರ್‌ಗಿಲ್ಲ ಪ್ರವೇಶ

ಹೈವೇಗಿಳಿದ ದ್ವಿಚಕ್ರ ವಾಹನ ಸವಾರರಿಗೆ ಮೊದಲ ದಿನವೇ ದಂಡದ ಬರೆ

ಮೈಸೂರು, ಆ.1(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಇಂದಿನಿಂದ ದ್ವಿಚಕ್ರ ವಾಹನ, ಆಟೋ, ಟ್ರಾಕ್ಟರ್ ಸೇರಿದಂತೆ ಹಲವು ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಆದರೂ, ಎಕ್ಸ್‌ಪ್ರೆಸ್ ವೇನಲ್ಲಿ ಸಾಗಿದ ಬೈಕ್ ಸವಾರರಿಗೆ ಪೊಲೀಸರು ದಂಡಾಸ್ತ್ರ ಪ್ರಯೋಗಿಸಿ, ಎಚ್ಚರಿಕೆ ಸಂದೇಶ ರವಾನಿಸಿದರು.



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿದ್ದವು. ಮೋಜಿಗಾಗಿ ಅತೀ ವೇಗದ ಚಾಲನೆ ಮಾಡಿದ ದ್ವಿಚಕ್ರ ವಾಹನ ಸವಾರರು ಸಾವಿನ ಮನೆ ಸೇರಿದ್ದರು. ಅಷ್ಟೇ ಅಲ್ಲದೆ ಇತರೆ ವಾಹನಗಳ ಅಪಘಾತಕ್ಕೂ ಕಾರಣರಾಗಿದ್ದರು.

ಈ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳನ್ನು ತಡೆಗಟ್ಟಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಅತೀ ವೇಗದಲ್ಲಿ ವಾಹನ ಚಾಲನೆ ಮಾಡುವ ಸವಾರರಿಗೆ ಒಂದು ಸಾವಿರ ದಂಡ ವಿಧಿಸುತ್ತಿದ್ದಾರೆ.

ಇದರ ಜೊತೆಗೆ ಇಂದಿನಿಂದ ಎಕ್ಸ್‌ಪ್ರೆಸ್ ಹೈವೆಯಲ್ಲಿ ಬೈಕ್, ಆಟೋ, ಟ್ರಾಕ್ಟರ್ ಹಾಗೂ ಮೋಟಾರ್‌ರಹಿತ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ಈ ಸಂಬಂಧ ಕಳೆದ ಒಂದು ವಾರದಿಂದ ಪೊಲೀಸರು ಜಾಗೃತಿ ಮೂಡಿಸಿದ್ದರು. ಆದರೆ, ನಿಯಮ ಜಾರಿಯಾದ ಮೊದಲ ದಿನವೇ ಬಹಳಷ್ಟು ದ್ವಿಚಕ್ರ ವಾಹನ ಸವಾರರು ಎಕ್ಸ್‌ಪ್ರೆಸ್ ವೇನಲ್ಲೇ ನುಗ್ಗಿದರು. ಇಂತಹವರ ಮೇಲೆ ಸಂಚಾರಿ ಪೊಲೀಸರು ದಂಡಾಸ್ತ್ರ ಪ್ರಯೋಗಿಸಿದ್ದಾರೆ. ರಾಮನಗರದ ಸಂಗಬಸವನದೊಡ್ಡಿ ಬಳಿ ದ್ವಿಚಕ್ರ ವಾಹನ ಸವಾರರನ್ನು ತಡೆದ ಸಂಚಾರಿ ಪೊಲೀಸರು ಸ್ಥಳದಲ್ಲೇ 500 ರೂ. ದಂಡ ವಿಧಿಸಿದ್ದಾರೆ. ಆದರೆ ಮೈಸೂರು ಸಂಚಾರಿ ಪೊಲೀಸರು ಮೊದಲ ದಿನ ಯಾರಿಗೂ ದಂಡ ವಿಧಿಸಿಲ್ಲ. ನರಸಿಂಹರಾಜ ಸಂಚಾರಿ ಪೊಲೀಸ್ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ಹಾಗೂ ಸಿಬ್ಬಂದಿ ಕೊಲಂಬಿಯಾ ಏಷಿಯಾ ರಿಂಗ್ ರಸ್ತೆ ಜಂಕ್ಷನ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ನಟರಾಜ್ ಕಳಸ್ತವಾಡಿ ಬಳಿ ನಿಂತು ಎಕ್ಸ್‌ಪ್ರೆಸ್ ವೇನಲ್ಲಿ ಹೋಗದಂತೆ ಬೈಕ್ ಸವಾರರಿಗೆ ಸೂಚನೆ ನೀಡಿದರು.

ಒಟ್ಟಾರೆ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಪಘಾತ ತಡೆಗಟ್ಟಲು ಪೊಲೀಸರು ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಈ ಕಾರಣದಿಂದ ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತಗಳಿಗೆ ಬ್ರೇಕ್ ಬೀಳುವ ಸಾಧ್ಯತೆಗಳಿವೆ. ಪೊಲೀಸರು ಇದೇ ಮುಂಜಾಗ್ರತಾ ಕ್ರಮವನ್ನು ಆರಂಭದಲ್ಲೇ ಕೈಗೊಂಡಿದ್ದರೆ ನೂರಾರು ಅಮಾಯಕರ ಪ್ರಾಣ ಉಳಿಯುತ್ತಿತ್ತು.

ಮೊದಲ ಬಾರಿ ನಾಳೆ ಮೋದಿ–ಸಿದ್ದರಾಮಯ್ಯ ಭೇಟಿ



(ಸಂಗ್ರಹ ಚಿತ್ರ)

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ 3ರಂದು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೆಲವು ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದಾರೆ. ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿಜಯ ಸಾಧಿಸಿ, ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯದಲ್ಲಿ ಸರ್ಕಾರ ರಚಿಸಿದ ನಂತರ ಇದು ಪ್ರಧಾನಿಯೊಂದಿಗಿನ ಅವರ ಮೊದಲ ಭೇಟಿಯಾಗಿದೆ ಸಿದ್ದರಾಮಯ್ಯ ಆಗಸ್ಟ್ 3ರಂದು ▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಉಪ ಪೊಲೀಸ್ ಠಾಣೆ

ಶಾಸಕ ಜಿ.ಟಿ.ದೇವೇಗೌಡರ ಮನವಿಗೆ ತಕ್ಷಣ ಸ್ಪಂದಿಸಿದ ಗೃಹಸಚಿವ ಡಾ.ಜಿ.ಪರಮೇಶ್ವರ್

- ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮ, ಬಡಾವಣೆಗಳ ಸಮೀಪದ ಪೊಲೀಸ್ ಠಾಣೆಗಳ ಸರಹದ್ದಿಗೆ ಸೇರಿಸಲು ಒತ್ತಾಯ
- ಕೈಗಾರಿಕಾ ಪ್ರದೇಶದಲ್ಲಿ ಔಟ್ ಪೋಸ್ಟ್ ಸ್ಥಾಪನೆ, ಬೆಟ್ಟದಲ್ಲಿ ಆಸ್ಪತ್ರೆ, ಆಂಬ್ಯುಲೆನ್ಸ್‌ಗೂ ಸಿಎಂಗೆ ಮನವಿ



ಬೆಂಗಳೂರು, ಆ.1 (ಕೆಎಂಶಿ)– ಮೈಸೂರಿನ ಚಾಮುಂಡೇಶ್ವರಿ ಬೆಟ್ಟದಲ್ಲಿ ಉಪ ಪೊಲೀಸ್ ಠಾಣೆ(ಔಟ್ ಪೋಸ್ಟ್)ಯನ್ನು ಕೂಡಲೇ ತೆರೆಯುವಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆದೇಶಿಸಿದ್ದಾರೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮನವಿಗೆ ತಕ್ಷಣವೇ ಸ್ಪಂದಿಸಿದ ಸಚಿವರು, ಚಾಮುಂಡಿ ಬೆಟ್ಟದಲ್ಲಿ ಉಪ ಪೊಲೀಸ್ ಠಾಣೆ ತೆರೆಯಲು ಆದೇಶಿಸುವುದರ ಜೊತೆಗೆ ಮೈಸೂರು ನಗರದ ಹೊರವಲಯದಲ್ಲಿ ಜನಸಂಖ್ಯೆ ಮತ್ತು ದಾಖಲಾದ ಪ್ರಕರಣಗಳ ಸಂಖ್ಯೆ ಆಧರಿಸಿ ಠಾಣೆಗಳ ಸರಹದ್ದನ್ನು ಮಾರ್ಪಡಿಸುವುದಾಗಿ ಭರವಸೆ ನೀಡಿದ್ದಾರೆ.



ನಾಡದೇವತೆ ಚಾಮುಂಡೇಶ್ವರಿ ನೆಲೆವೀಡಾದ ಚಾಮುಂಡಿಬೆಟ್ಟಕ್ಕೆ ನಿತ್ಯ ಸಾವಿರಾರು ಭಕ್ತರು ಭೇಟಿ ನೀಡುತ್ತಾರೆ. ಆಷಾಢ ಮಾಸ ಹಾಗೂ ನವರಾತ್ರಿ ಸಂದರ್ಭದಲ್ಲಿ ದೇಶ–ವಿದೇಶಗಳಿಂದಲೂ ಅಪಾರ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಲಕ್ಷಾಂತರ ಭಕ್ತರು ನೆರೆಯುತ್ತಾರೆ. ಆ ವೇಳೆ ತೀವ್ರ ಜನದಟ್ಟಣೆಯುಂಟಾಗಿ ಸುಗಮವಾಗಿ ದೇವಿಯ ದರ್ಶನ ಪಡೆಯಲಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವಿಶ್ವವಿಖ್ಯಾತ ದಸರಾ ಮಹೋತ್ಸವದ ಸಮೀಪಿಸುತ್ತಿದ್ದು, ಶಕ್ತಿ ಯೋಜನೆಯಡಿ ಹೆಚ್ಚು ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರೂ ಬರುತ್ತಾರೆ. ಭದ್ರತೆ, ಸುರಕ್ಷತೆ ಹಾಗೂ ಜನದಟ್ಟಣೆ ನಿರ್ವಹಣೆ ದೃಷ್ಟಿಯಿಂದ ಚಾಮುಂಡಿಬೆಟ್ಟದಲ್ಲಿ ಉಪ ಪೊಲೀಸ್ ಠಾಣೆ ಆರಂಭಿಸಬೇಕು. ಆಸ್ಪತ್ರೆ ಹಾಗೂ ಆಂಬುಲೆನ್ಸ್ ಸೇವೆಯನ್ನು ತ್ವರಿತವಾಗಿ ಕಲ್ಪಿಸಬೇಕು ಎಂದು ಜಿ.ಟಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯ ▶ 8ನೇ ಪುಟಕ್ಕೆ

ಅನಧಿಕೃತ ನಿವೇಶನ, ನಿರ್ಮಾಣಗಳಿಗೆ ನಮೂನೆ–3 ವಿತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ

ಮೈಸೂರು, ಆ.1(ಎಸ್‌ಬಿಡಿ)– ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಅನಧಿಕೃತ ನಿವೇಶನ ಹಾಗೂ ನಿರ್ಮಾಣಗಳಿಗೆ ಸಮರ್ಪಕವಾಗಿ ನಮೂನೆ–3 ವಿತರಿಸಲು ಸೂಕ್ತ ಕ್ರಮ ವಹಿಸುವಂತೆ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ಮನವಿ ಮಾಡಿದ್ದಾರೆ. ಈ ಸಂಬಂಧ ಸಾರ್ವಜನಿಕರಿಂದ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಬೋಗಾದಿ ಪಟ್ಟಣ ಪಂಚಾಯ್ತಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂದರ್ಭದಲ್ಲಿ ನಮೂನೆ–3 ವಿತರಿಸಲು ಹಿಂದಿನ ಸರ್ಕಾರ ಆದೇಶಿಸಿತ್ತಾದರೂ ತಾಂತ್ರಿಕ ಕಾರಣಗಳಿಂದ ಸಾಧ್ಯವಾಗುತ್ತಿಲ್ಲ ಎಂದು ಶಾಸಕರಿಗೆ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರದ ಮುಖ್ಯಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯನ್ನು ಭೇಟಿ ಮಾಡಿದ ಜಿಟಿಡಿ, ನಮೂನೆ–3 ▶ 8ನೇ ಪುಟಕ್ಕೆ



ಆಗಸ್ಟ್ 5ಕ್ಕೆ ಕಲಬುರಗಿಯಲ್ಲಿ 'ಗೃಹ ಜ್ಯೋತಿ'ಗೆ ಸಿಎಂ ಚಾಲನೆ

- ಐದು ಗ್ಯಾರಂಟಿಗಳಲ್ಲಿ ಇದೂ ಒಂದು
- 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಪ್ರಮುಖರ ಉಪಸ್ಥಿತಿ



ಬೆಂಗಳೂರು, ಆ.1(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ಆಗಸ್ಟ್ 5ರಂದು ಕಲಬುರಗಿಯ ಎನ್‌ವಿ ಮೈದಾನದಲ್ಲಿ ಬಹುನಿರೀಕ್ಷಿತ ಗೃಹ ಜ್ಯೋತಿ ಯೋಜನೆಗೆ ಚಾಲನೆ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಇಂಧನ ಸಚಿವ ಕೆ.ಜೆ. ಜಾರ್ಜ್, ಕರ್ನಾಟಕ ಸರ್ಕಾರದ ಐದು ಪ್ರಮುಖ ಭರವಸೆಗಳ ಪೈಕಿ ಒಂದಾದ ಗೃಹ ಜ್ಯೋತಿ ಯೋಜನೆಗೆ ಮುಖ್ಯಮಂತ್ರಿಯವರು ಕಲಬುರಗಿಯಲ್ಲಿ ಚಾಲನೆ ನೀಡಲಿದ್ದಾರೆ. ರಾಜ್ಯಸಭೆಯ ಪ್ರತಿ ಪಕ್ಷದ ನಾಯಕರೂ ಆದ ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಐಟಿ ಬಿಟಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಿರಿಯ ಸಚಿವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದರು.

ಮಧ್ಯಮ ವರ್ಗದ ಜನರ ಜೀವನ ಸುಧಾರಣೆ ಮಾಡುವ ಮಹಾತ್ವಾಕಾಂಕ್ಷಿ ಯೋಜನೆ ಇದು. 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುವ ಯೋಜನೆಗೆ ಕೇವಲ ವಿದ್ಯುತ್ ಶುಲ್ಕದ ಕಡಿಮೆ ಮಾಡುತ್ತಿಲ್ಲ. ಬದಲಾಗಿ ಕುಟುಂಬದ ಆರ್ಥಿಕ ಪ್ರಗತಿಯ ಮೂಲಕ ಸಾಮಾಜಿಕ ಭದ್ರತೆ ನೀಡಲಿದೆ ಎಂದು ವಿವರಿಸಿದರು. ಗೃಹ ಜ್ಯೋತಿ ಯೋಜನೆಯ ಅನುಷ್ಠಾನದ ಮೊದಲ ತಿಂಗಳಿನಲ್ಲೇ ಸುಮಾರು 1.42 ಕೋಟಿ ಕುಟುಂಬಗಳು ಇದರ ಪ್ರಯೋಜನ ಪಡೆಯಲಿವೆ.



ಜುಲೈ 27ರ ಮೊದಲು ಅರ್ಜಿ ಸಲ್ಲಿಸಿದವರು ಮಾತ್ರ ಜುಲೈ ತಿಂಗಳು ಫ್ರೀ ವಿದ್ಯುತ್ ಪಡೆಯಲು ಅರ್ಹರಾಗಿರುತ್ತಾರೆ. ಜುಲೈ 27ರ ನಂತರ ಅರ್ಜಿ ಸಲ್ಲಿಸಿದವರು ಆಗಸ್ಟ್‌ನಲ್ಲಿ ಅವರ ಬಳಕೆಯ ಆಧಾರದ ಮೇಲೆ ಸೆಪ್ಟೆಂಬರ್‌ನ ಬಿಲ್ಲಿಂಗ್‌ನಲ್ಲಿ ಪ್ರಯೋಜನ ಪಡೆಯುತ್ತಾರೆ ಎಂದರು. ಯೋಜನೆಗೆ ನೋಂದಾಯಿಸಿಕೊಳ್ಳಲು ಯಾವುದೇ ಅಂತಿಮ ದಿನಾಂಕ ಘೋಷಿಸಿಲ್ಲ. ಯಾವುದೇ ಸಮಯದಲ್ಲಿ ನೋಂದಾಯಿಸಿಕೊಂಡರೂ ಅದರ ನಂತರದ ತಿಂಗಳಿನಿಂದ ಪ್ರಯೋಜನ ಪಡೆಯಬಹುದು. 1.42 ಕೋಟಿ ಅರ್ಜಿದಾರರ ಪೈಕಿ ಸುಮಾರು 18 ಲಕ್ಷ ಮಂದಿ ಭಾಗ್ಯ ಜ್ಯೋತಿ, ▶ 8ನೇ ಪುಟಕ್ಕೆ

22 ಕ್ಯಾರೆಟ್ ಚಿನ್ನದ ದರ @ ತೊಳಸಿ



ಆಶೋಕ ರಸ್ತೆ ಮೈಸೂರು. ಫೋ: 0821-2521926, ದೇವಸ್ಥಾನ ರಸ್ತೆ ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821-2411926 ಎಂಜಿಎಸ್ ರಸ್ತೆ ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221-300926

DGF JEWELLERS
NO Wastage ₹ 5350 Making Charges
916 Hall Mark
ಚಿನ್ನದ ಒಡವೆಗಳನ್ನು ಖರೀದಿಸಿಕೊಳ್ಳಿ
8884171888

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, ಮಹಿಳೆ ಮತ್ತು ಪುರುಷರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
ಸಮಯ: 6-2 ಮತ್ತು 2-10 ರವರೆಗೆ ಶಿಫ್ಟ್‌ನಲ್ಲಿ ಕೆಲಸ.
ಸಂಬಳ:15,000-16,000
9743000798

SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884304444

ಮೈಸೂರಲ್ಲಿ 3 ದಿನ ಅಗ್ನಿವೀರ್ ಸೇನಾ ನೇಮಕಾತಿ

- ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ 1,723 ಪುರುಷ ಅಭ್ಯರ್ಥಿಗಳು ರ್‍ಯಾಲಿಯಲ್ಲಿ ಭಾಗವಹಿಸಲು ಅರ್ಹರು
- ಮೊದಲ ದಿನ 559 ಅಭ್ಯರ್ಥಿಗಳ ಪೈಕಿ 492 ಮಂದಿ ಭಾಗಿ

ಮೈಸೂರು,ಆ.1(ಪಿಎಂ)– ಭಾರತೀಯ ಸೇನೆಯ ಅಗ್ನಿಪಥ್ ಯೋಜನೆಯಡಿ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿ ಮೈಸೂರಿನಲ್ಲಿ ಮಂಗಳವಾರದಿಂದ ಆರಂಭಗೊಂಡಿತು. ನಜರ್‌ಬಾದಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮೂರು ದಿನಗಳ ಕಾಲ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿ ನಡೆಯಲಿದೆ.

ಆ.3ರವರೆಗೆ ರ್‍ಯಾಲಿ ನಡೆಯಲಿದ್ದು, ಇದೇ ಮಾರ್ಚ್‌ನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ರಾಜ್ಯದ 14 ಜಿಲ್ಲೆಗಳ ಒಟ್ಟು 1,723 ಪುರುಷ ಅಭ್ಯರ್ಥಿಗಳು ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ. ಇವರಿಗೆ ದೈಹಿಕ ಸಾಮರ್ಥ್ಯ ಹಾಗೂ ವೈದ್ಯಕೀಯ ಪರೀಕ್ಷೆ ನಡೆಯಲಿವೆ.

ಸೇನಾ ನೇಮಕಾತಿ ರ್‍ಯಾಲಿ ಅಧಿಕಾರಿ ಕರ್ನಲ್ ಗೌರವ್ ಥಪ್ಪಾ ಅವರ ನೇತೃತ್ವದಲ್ಲಿ ರ್‍ಯಾಲಿ ನಡೆಯಲಿದ್ದು, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಡಿಸಿಪಿ ಎಂ.ಮುತ್ತುರಾಜ್ ಮಂಗಳವಾರ ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿ ರ್‍ಯಾಲಿಗೆ ಒದಗಿಸಿರುವ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದರು.

ಭಾರತೀಯ ಸೇನಾ ನೇಮಕಾತಿಯ ಬೆಂಗಳೂರು ಕೇಂದ್ರ ಕಚೇರಿ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಾದ ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು, ಮಂಡ್ಯ, ಮೈಸೂರು, ಬಳ್ಳಾರಿ, ಚಾಮರಾಜನಗರ, ರಾಮನಗರ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ ಹಾಗೂ ವಿಜಯನಗರ ಜಿಲ್ಲೆಗಳ ಅಭ್ಯರ್ಥಿಗಳು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದಾರೆ.



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಅಭ್ಯರ್ಥಿಯೊಬ್ಬರ ದೈಹಿಕ ಸಾಮರ್ಥ್ಯದ ಪರೀಕ್ಷೆ ನಡೆಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ರ್‍ಯಾಲಿ ನೋಡಲ್ ಅಧಿಕಾರಿಗಳೂ ಆದ ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆ ಮೈಸೂರು ಜಂಟಿ ನಿರ್ದೇಶಕ ಮೇಜರ್ (ನಿವೃತ್ತ) ಡಾ.ಬಾಲಸುಬ್ರಹ್ಮಣ್ಯಂ, ಸೇನಾ ನೇಮಕಾತಿಯ ಬೆಂಗಳೂರು ಕೇಂದ್ರ ಕಚೇರಿ ಆದೇಶದಂತೆ ರ್‍ಯಾಲಿ ಆಯೋಜಿಸಲಾಗಿದೆ. ಲಿಖಿತ ಪರೀಕ್ಷೆ ಬರೆದು ಉತ್ತೀರ್ಣರಾದವರು ರ್‍ಯಾಲಿಯಲ್ಲಿ ದೈಹಿಕ ಸಾಮರ್ಥ್ಯ ಹಾಗೂ ವೈದ್ಯಕೀಯ ಪರೀಕ್ಷೆ ಎದುರಿಸಲಿದ್ದಾರೆ ಎಂದರು.

ಈ ಎಲ್ಲಾ ಅಭ್ಯರ್ಥಿಗಳಿಗೆ ನಂಜರಾಜ ಬಹದ್ದೂರ್ ಛತ್ರದಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ. ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ ಹಾಗೂ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ವತಿಯಿಂದ ಅಭ್ಯರ್ಥಿಗಳಿಗೆ ಊಟ ಮತ್ತು ತಿಂಡಿ ವ್ಯವಸ್ಥೆ ಮಾಡಲಾಗಿದೆ. ವಸತಿ ಸ್ಥಳದಿಂದ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಅಭ್ಯರ್ಥಿಗಳನ್ನು ಕರೆತರಲು ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ. 1,723 ಅಭ್ಯರ್ಥಿಗಳ ಪೈಕಿ ಮಂಗಳವಾರ ರ್‍ಯಾಲಿಯಲ್ಲಿ ಭಾಗವಹಿಸಲು 559 ಮಂದಿಗೆ ಆಹ್ವಾನ ನೀಡಲಾಗಿತ್ತು. ಅದರಲ್ಲಿ 492 ಮಂದಿ ಆಗಮಿಸಿದ್ದಾರೆ ಎಂದು ತಿಳಿಸಿದರು.

ಬುಧವಾರ ರ್‍ಯಾಲಿಯಲ್ಲಿ ಭಾಗವಹಿಸಲು 700 ಅಭ್ಯರ್ಥಿಗಳಿಗೆ ಆಹ್ವಾನಿಸಿದ್ದು, ಉಳಿದ ಅಭ್ಯರ್ಥಿಗಳಿಗೆ ಆ.3ರಂದು ಪಾಲ್ಗೊಳ್ಳಲು ತಿಳಿಸಲಾಗಿದೆ. ಅಗತ್ಯವಿದ್ದರೆ ಆ.4ರವರೆಗೂ ರ್‍ಯಾಲಿ ವಿಸ್ತರಣೆಯಾಗಲಿದೆ. ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ 1,600 ಮೀ. (1.6 ಕಿ.ಮೀ.) ಓಟ, ಪುಲ್‌ಅಪ್ಸ್, ಜಿಗ್‌ಜ್ಯಾಗ್ ಬ್ಯಾಲೆನ್ಸ್ ಬೀಮ್, 9 ಅಡಿ ಉದ್ದದ ಕಂದಕ ಜಿಗಿತ ಇರಲಿದೆ. ಜೊತೆಗೆ ತೂಕ, ಎದೆಯ ಸುತ್ತಳತೆ ಹಾಗೂ ಎತ್ತರವನ್ನು ಅಳೆಯಲಾಗುವುದು. ಇದರಲ್ಲಿ ಅರ್ಹತೆ ಪಡೆದವರಿಗೆ ವೈದ್ಯಕೀಯ ಪರೀಕ್ಷೆಯೂ ನಡೆಯಲಿದೆ ಎಂದರು.

ರ್‍ಯಾಲಿಯಲ್ಲಿ ನಡೆಸುವ ಎಲ್ಲಾ ಪರೀಕ್ಷೆಗಳ ವಿವರಗಳನ್ನು ನೇಮಕಾತಿ ತಂಡವು ಬೆಂಗಳೂರು ಕೇಂದ್ರ ಕಚೇರಿಗೆ ವರದಿ ಮಾಡಲಿದೆ. ಅಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದಲ್ಲಿ ಆಯ್ಕೆ ಪ್ರಕ್ರಿಯೆ ಅಂತಿಮಗೊಳ್ಳಲಿದೆ ಎಂದು ಹೇಳಿದರು.

ಮೈಸೂರನ್ನು ಫ್ಲೆಕ್ಸ್, ಪ್ಲಾಸ್ಟಿಕ್ ಮುಕ್ತಗೊಳಿಸಲು ಆದ್ಯತೆ

ಎಂಡಿಜೆಎ ನಿಯೋಗಕ್ಕೆ ಪಾಲಿಕೆ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಭರವಸೆ



ನಗರಪಾಲಿಕೆ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದ ಪದಾಧಿಕಾರಿಗಳು ಮಂಗಳವಾರ ಅಭಿನಂದಿಸಿದರು.

ಮೈಸೂರು, ಆ.1(ಆರ್‌ಕೆ)–ಸಾಂಸ್ಕೃತಿಕ ನಗರಿ ಮೈಸೂರನ್ನು ಫ್ಲೆಕ್ಸ್ ಮುಕ್ತವಾಗಿಸಲು ಆದ್ಯತೆ ನೀಡಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಇಂದಿಲ್ಲಿ ತಿಳಿಸಿದ್ದಾರೆ.

ಪಾಲಿಕೆ ಕಚೇರಿಯಲ್ಲಿ ತಮ್ಮನ್ನು ಅಭಿನಂದಿಸಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪದಾಧಿಕಾರಿಗಳೊಂದಿಗೆ ಔಪಚಾರಿಕವಾಗಿ ಮಾತನಾಡಿದ ಅವರು, ಮೈಸೂರು ಸಾಂಸ್ಕೃತಿಕ ತವರೂರು. ಇಲ್ಲಿನ ಪರಂಪರೆ, ಸಂಪ್ರದಾಯ, ನಿಸರ್ಗತಾಣ, ಸ್ವಚ್ಛತೆಗೆ ಎಂದೂ ಕುಂದು ಬರದಂತೆ ನೋಡಿಕೊಳ್ಳಬೇಕಾದ ಅಗತ್ಯವಿದೆ. ಅದಕ್ಕಾಗಿ ಫ್ಲೆಕ್ಸ್ ಹಾಗೂ ಪ್ಲಾಸ್ಟಿಕ್ ಮುಕ್ತ ಮಾಡಲು ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ನಮ್ಮದಾಗಿದೆ ಎಂದರು.

ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ಕಾರ್ಯವೈಖರಿ ಸುಧಾರಿಸಿ, ಜನಸಾಮಾನ್ಯರಿಗೆ ಉತ್ತಮ ಸೇವೆ ಸಲ್ಲಿಸುವುದು, ಕುಡಿಯುವ ನೀರು, ಒಳಚರಂಡಿ, ರಸ್ತೆ, ಪಾರ್ಕು, ಬೀದಿದೀಪಗಳಂತಹ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ನಾಗರಿಕರಿಗೆ ಅತ್ಯುತ್ತಮ ಸೇವೆ ಒದಗಿಸುವಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಫುಟ್‌ಪಾತ್ ತೆರವು ಕಾರ್ಯಾಚರಣೆ ಮುಂದುವರೆಸಿ ಪಾದಚಾರಿಗಳು ಮುಕ್ತವಾಗಿ ಓಡಾಡಲು ಅನುವು ಮಾಡಿಕೊಡುವುದು, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ನಿರ್ವಹಣೆ, ವಿವಿಧ ತೆರಿಗೆ ಸಂಗ್ರಹಿಸಿ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಿ, ಮೂಲ ಸೌಲಭ್ಯಗಳಿಗೆ ಆದ್ಯತೆ ಮೇಲೆ ವ್ಯಯ ಮಾಡಲಾಗುವುದು ಎಂದರು.

ಪತ್ರಕರ್ತರ ಆರೋಗ್ಯ ಸುರಕ್ಷತೆಗಾಗಿ ಬಜೆಟ್‌ನಲ್ಲಿ ಮೀಸಲಿರಿಸಿರುವ 50 ಲಕ್ಷ ರೂ. ಅನುದಾನವನ್ನು ಅವರ ಕುಟುಂಬದ ಸದಸ್ಯರಿಗೂ ಬಳಸಲು ಅವಕಾಶ ಕಲ್ಪಿಸುವಂತೆ ಪದಾಧಿಕಾರಿಗಳು ಮಾಡಿಕೊಂಡ ಮನವಿಗೆ ಪೂರಕವಾಗಿ ಸ್ಪಂದಿಸಿದ ಆಯುಕ್ತರು, ಮೇಯರ್, ಆರೋಗ್ಯ ಸ್ಥಾಯಿ ಸಮಿತಿ ಸದಸ್ಯರೊಂದಿಗೆ ಚರ್ಚಿಸಿ ಕೌನ್ಸಿಲ್ ಸಭೆಯ ಒಪ್ಪಿಗೆ ಪಡೆದು ಸೌಲಭ್ಯ ವಿಸ್ತರಿಸುವುದಾಗಿ ಭರವಸೆ ನೀಡಿದರಲ್ಲದೆ, ಪಾಲಿಕೆಯಲ್ಲಿ ಅದನ್ನು ಪಾಲಿಸಿಯನ್ನಾಗಿ ಮಾಡಿ ಮುಂದೆ ಶಾಶ್ವತವಾಗಿ ಈ ಯೋಜನೆ ಪತ್ರಕರ್ತರು ಹಾಗೂ ಕುಟುಂಬದ ಸದಸ್ಯರು ಬಳಸಿಕೊಳ್ಳುವಂತೆ ಮಾಡುವುದಾಗಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಖಜಾಂಚಿ ನಾಗೇಶ್ ಪಾಣತ್ತಲೆ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಈ ಸಂದರ್ಭ ಉಪಸ್ಥಿತರಿದ್ದರು.

ಆ.5, ಚಂಪಕ ರಾಷ್ಟ್ರೀಯ ಕಲಾ ಉತ್ಸವ

ಮೈಸೂರು,ಆ.1–ಮೈಸೂರಿನ ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ಭಾರತೀಯ ಪ್ರದರ್ಶಕ ಕಲೆಗಳ ಕಲಾವಿದರಿಗೆ ಪ್ರೋತ್ಸಾಹ ನೀಡಲು ಚಂಪಕ ರಾಷ್ಟ್ರೀಯ ಕಲಾ ಉತ್ಸವ ಮಾಸಿಕ ಕಾರ್ಯಕ್ರಮಗಳನ್ನು ರಾಮಕೃಷ್ಣನಗರದ ಚಂಪಕ ಅಕಾಡೆಮಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಆ.5ರಂದು ಸಂಜೆ 4.30 ಗಂಟೆಗೆ ಮೂರು ಭರತನಾಟ್ಯ ಕಾರ್ಯಕ್ರಮಗಳ ಪ್ರದರ್ಶನವಿರುತ್ತದೆ. ಮೈಸೂರಿನ ಹಿರಿಯ ಗುರುಗಳಲ್ಲಿ ಒಬ್ಬರಾದ ಕರ್ನಾಟಕ ಕಲಾಶ್ರೀ ಡಾ.ತುಳಸಿ ರಾಮಚಂದ್ರ ಅವರ ಶಿಷ್ಯರು 'ಮಾಧುರ್ಯ ಮಾರ್ಗ' ಕರ್ನಾಟಕದ ನೃತ್ಯ ಪರಂಪರೆ ಪ್ರತಿಬಿಂಬಿಸುವ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ.

ಬೆಂಗಳೂರಿನ ಲಾಸ್ಯವರ್ಧನ ಲಲಿತ ಕಲಾ ಸಂಸ್ಥೆಯ ಸಂಸ್ಥಾಪಕರಾದ ಗುರು ಡಾ.ಮಾಲಿನಿ ರವಿಶಂಕರ್ ಅವರ ಮಗಳು ಹಾಗೂ ಶಿಷ್ಯೆ ಕುಮಾರಿ ಲಾಸ್ಯ ಪ್ರಿಯಾ ಸಂಗೀತ ಗಾನ, ನೃತ್ಯ ಯಾನ ಪ್ರದರ್ಶನ ನೀಡಲಿದ್ದು, ಅವರಿಗೆ ಪ್ರವರ್ಧನ್ (ಸಂಗೀತ), ಕೇಶವ ಪ್ರಸಾದ್ (ವಯೋಲಿನ್) ಹಾಗೂ ಕಾರ್ತಿಕ್ ಪ್ರಣವ್ (ಮೃದಂಗ) ಸಹಕಾರ ನೀಡಲಿದ್ದಾರೆ.

ಚಂಪಕ ಅಕಾಡೆಮಿ ಸಂಸ್ಥಾಪಕಿ ವಿದುಷಿ ನಾಗಲಕ್ಷ್ಮಿ ನಾಗರಾಜನ್ ಅವರ ಕಿರಿಯ ಶಿಷ್ಯರು ಕೂಡ ಪ್ರದರ್ಶನವನ್ನು ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಚಿತ್ರಾಸ್ ಹಾಸ್ಪಿಟಲ್ ಸಂಸ್ಥಾಪಕರಾದ ಡಾ. ಚಿತ್ರಲೇಖಾ ಹಾಗೂ ಡಾ. ಮಹೇಶ್ ಕುಮಾರ್ ಭಾಗವಹಿಸಲಿದ್ದಾರೆ.



ಮೈಸೂರಿನ ಎಲೆತೋಟ ವೃತ್ತದಲ್ಲಿ ಕೃಷ್ಣರಾಜ ಯುವ ಬಳಗ ಹಾಗೂ ಅಹಿಂದ ಸಂಘಟನೆ ವತಿಯಿಂದ ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ ಅವರ ಜನ್ಮದಿನವನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೇಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ರಾಜೇಶ್ (ಪಳನಿ), ವರುಣ ಮಹದೇವ್, ಲೋಕೇಶ್, ಕನಕಮೂರ್ತಿ, ಮಹದೇವ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ ಉಚಿತ ವೃತ್ತಿ ಮೇಳ

ಮೈಸೂರು,ಆ.1–ಮೈಸೂರಿನ ಇನ್ಫೋಸಿಸ್ ಫೌಂಡೇಷನ್, ನಿರ್ಮಾಣ್ ಸಂಸ್ಥೆ ಸಹಯೋಗದೊಂದಿಗೆ ಆ.3ರಂದು ಬೆಳಗ್ಗೆ 11ರಿಂದ ವಿಮೆನ್ ಇನ್ ಟೆಕ್ನಾಲಜಿ ಕಾರ್ಯಕ್ರಮದ ಭಾಗವಾಗಿ ಉಚಿತ ವೃತ್ತಿ ಮೇಳ ಆಯೋಜಿಸಿದೆ. ಇದು 18ರಿಂದ 30 ವರ್ಷದೊಳಗಿನ ಮಹಿಳೆಯರಿಗೆ ಪ್ರತ್ಯೇಕವಾಗಿ ಒಂದು ಉತ್ತೇಜಕ ಅವಕಾಶವಾಗಿದೆ. ಮೇಳವು ಎಂಎಸ್ ಎಕ್ಸೆಲ್, ಎಂಎಸ್ ಆಫೀಸ್, ಗೂಗಲ್ ಅಪ್ಲಿಕೇಷನ್‌ಗಳ ಬಳಕೆ, ಇಂಟರ್‌ನೆಟ್ ಪರಿಕಲ್ಪನೆಗಳು, ಚಾಟ್‌ಜಿಪಿಟಿ, ಪ್ರೊಫೈಲ್ ಇನ್ನಿತರ ಡಿಜಿಟಲ್ ಕೌಶಲ್ಯಗಳು ಸೇರಿವೆ. ಮಾಹಿತಿಗೆ ಮೊ.7619499117, 9446595064 ಸಂಪರ್ಕಿಸಬಹುದು.

ಗ್ರಾಹಕ ಪಂಚಾಯತ್ ಸದಸ್ಯರಾಗಲು ಸಲಹೆ



ಮೈಸೂರು,ಆ.1–ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಸದಸ್ಯತ್ವ ಅಭಿಯಾನವು ಆ.1ರಿಂದ 31ರವರೆಗೆ ನಡೆಯಲಿದ್ದು, ಸದಸ್ಯತ್ವ ಅಭಿಯಾನವು ಚಾಮುಂಡಿಪುರಂನಲ್ಲಿ ಗ್ರಾಹಕರನ್ನು ಗ್ರಾಹಕ ಪಂಚಾಯಿತಿಗೆ ಸದಸ್ಯತ್ವ ಪಡೆಯುವ ಮೂಲಕ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಚಂದ್ರಶೇಖರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಅಖಿಲ ಭಾರತೀಯ ಗ್ರಾಹಕ ಪಂಚಾಯಿತಿನ ಸ್ವರ್ಣ ಜಯಂತಿ ಸುಸಂದರ್ಭದಲ್ಲಿ ವಾರ್ಷಿಕ ಸದಸ್ಯತ್ವ ಅಭಿಯಾನವನ್ನು ಆ.1ರಿಂದ 31ರವರೆಗೆ ನಡೆಯಲಿದೆ. ಅದಕ್ಕಾಗಿ ಒಬ್ಬೊಬ್ಬರು ಕನಿಷ್ಠ 10 ಸದಸ್ಯತ್ವವನ್ನು ಮಾಡಲೇಬೇಕೆಂದು ಸಂಕಲ್ಪ ಮಾಡಿ ಸದಸ್ಯತ್ವ ಅಭಿಯಾನದಲ್ಲಿ ಭಾಗವಹಿಸಬೇಕಿದೆ. ಗ್ರಾಹಕ ಪಂಚಾಯಿತಿ ಸದ್ಯಸರಾಗಲು ಇಚ್ಛಿಸುವವರು ಮಾಹಿತಿ ಪಡೆಯಲು 9880019400 ಸಂಪರ್ಕಿಸಬಹುದು ಎಂದರು. ಇದೇ ವೇಳೆ ಸಂಘಟನಾ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸಹ ಕಾರ್ಯದರ್ಶಿ ಆನಂದ್, ರಮೇಶ್, ಖಜಾಂಚಿ ಶ್ರೀಧರಮೂರ್ತಿ, ಹೋಟೆಲ್ ಉದ್ಯಮಿ ಜೈರಾಮ್, ಕೇಬಲ್ ಮಹೇಶ್, ಅಜಯ್‌ಶಾಸ್ತ್ರಿ, ಮೈಲಾ ವಿಜಯ್ ಕುಮಾರ್, ಭೈರತಿ ಲಿಂಗರಾಜು, ರಾಜೇಶ್, ಸುಚೇಂದ್ರ, ರಾಕೇಶ್, ಕೆಂಗೇಗೌಡ, ಶ್ರೀನಿವಾಸ್ ಇನ್ನಿತರರು ಭಾಗವಹಿಸಿದ್ದರು.

2024ರ ಲೋಕಸಭಾ ಚುನಾವಣಾ ಸಿದ್ಧತೆ

ಮೈಸೂರಲ್ಲಿ ಇವಿಎಂಗಳ ತಪಾಸಣೆ ಆರಂಭ

ಮೈಸೂರು, ಆ.1(ಆರ್‌ಕೆ)–2024ರ ಲೋಕಸಭಾ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ಮೈಸೂರು ಜಿಲ್ಲಾಡಳಿತವು, ಸಿದ್ಧಾರ್ಥನಗರದ ಬಳಿ ಇರುವ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣದ ಬಳಿಯ ಉಗ್ರಾಣದಲ್ಲಿ ಹೊಸ ವಿದ್ಯುನ್ಮಾನ ಮತಯಂತ್ರ, ವಿವಿ ಪ್ಯಾಟ್‌ಗಳ ಮೊದಲ ಹಂತದ ತಪಾಸಣಾ ಕಾರ್ಯವನ್ನು ಇಂದಿನಿಂದ ಆರಂಭಿಸಿದೆ.



ಇತ್ತೀಚೆಗಷ್ಟೇ ಹೈದರಾಬಾದ್‌ನಿಂದ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ECIL)ನ 150 ಹೊಸ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಮೈಸೂರಿಗೆ ತಂದು ಉಗ್ರಾಣದಲ್ಲಿ ಭಾರೀ ಭದ್ರತೆಯೊಂದಿಗೆ ಇರಿಸಲಾಗಿದೆ. ಇವಿಎಂ ನೋಡಲ್ ಅಧಿಕಾರಿಯಾದ ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಹಾಗೂ ಅಡಿಷನಲ್ ಡಿಸಿ ಕವಿತಾ ರಾಜಾರಾಂ ಅವರ ನೇತೃತ್ವದಲ್ಲಿ ಇಂದಿನಿಂದ ವಿದ್ಯುನ್ಮಾನ ಮತಯಂತ್ರಗಳ ತಪಾಸಣಾ ಕಾರ್ಯ ಆರಂಭವಾಯಿತು.

ಹೈದರಾಬಾದ್‌ನ ಇಸಿಐಎಲ್ ಕಂಪನಿಯ 50 ಮಂದಿ ಇಂಜಿನಿಯರ್‌ಗಳು ಮೊದಲ ಹಂತದ ತಪಾಸಣಾ (FLC) ಕಾರ್ಯದಲ್ಲಿ ಪಾಲ್ಗೊಂಡಿದ್ದು, ಸೀಲ್ಡ್ ಪ್ಯಾಕ್‌ನಲ್ಲಿರುವ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಹೊರ ತೆಗೆದು ಕ್ರಮ ಸಂಖ್ಯೆಗನುಸಾರ ಗೋದಾಮಿನ ನಿಗದಿತ ಸ್ಥಳದಲ್ಲಿರಿಸಿ ಪ್ರತಿಯೊಂದಕ್ಕೂ ಯೂನಿಕ್ ಕೋಡ್ ನೀಡಿ ದಾಖಲಿಸಲಾಗುತ್ತಿದೆ. ನಂತರ ಅವುಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ ಲೋಪ–ದೋಷಗಳಿರುವ ಮತಯಂತ್ರಗಳನ್ನು ಪ್ರತ್ಯೇಕವಾಗಿರಿಸಿ, ಇಡೀ ಪ್ರಕ್ರಿಯೆಯನ್ನು ವಿಡಿಯೋ ರೆಕಾರ್ಡಿಂಗ್ ಮಾಡುತ್ತಿದ್ದು, ಪ್ರತೀ ನಿತ್ಯ ಪ್ರಕ್ರಿಯೆ ವರದಿಯನ್ನು ನೋಡಲ್ ಅಧಿಕಾರಿ ದಿನೇಶ್ ಕುಮಾರ್ ಭಾರತ ಚುನಾವಣಾ ಆಯೋಗಕ್ಕೆ ನೀಡುವರು.

ಕಂದಾಯ ಇಲಾಖೆ, ಜಿಲ್ಲಾ ಚುನಾವಣಾ ಶಾಖೆ, ಮುಡಾ, ಪಾಲಿಕೆ ಸಿಬ್ಬಂದಿಗಳನ್ನು ನೆರವಿಗೆ ಪಡೆಯಲಾಗಿದ್ದು, ನಿಯೋಜಿತ ಅಧಿಕೃತ ಅಧಿಕಾರಿಗಳು, ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರೂ ಉಗ್ರಾಣಕ್ಕೆ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ. ಮೊಬೈಲ್ ಅಥವಾ ಇನ್ನಿತರ ಎಲೆಕ್ಟ್ರಾನಿಕ್ ವಸ್ತುಗಳನ್ನು ಇವಿಎಂ ತಪಾಸಣಾ ಸ್ಥಳಕ್ಕೆ ಕೊಂಡೊಯ್ಯದಂತೆ ನಿರ್ಬಂಧಿಸಲಾಗಿದ್ದು, ಪ್ರವೇಶ ದ್ವಾರದಲ್ಲೇ ಮೆಟಲ್ ಡೋರ್ ಡಿಟೆಕ್ಟರ್ ಅಳವಡಿಸಿ ಪರಿಶೀಲಿಸಲಾಗುತ್ತಿದೆ.

ಆಗಸ್ಟ್ 15ರವರೆಗೆ ಪ್ರತೀದಿನ ಬೆಳಗ್ಗೆ 9.30ರಿಂದ ಸಂಜೆ 4 ಗಂಟೆವರೆಗೆ ತಪಾಸಣೆ ನಡೆಯಲಿದ್ದು, ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜೀವನ್ ನೇತೃತ್ವದಲ್ಲಿ ಇವಿಎಂ ಉಗ್ರಾಣಕ್ಕೆ ಭಾರೀ ಭದ್ರತೆ ಒದಗಿಸಲಾಗಿದೆ. ಕಳೆದ ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಬಳಸಿದ್ದ ಇವಿಎಂ ಮತ್ತು ವಿವಿ ಪ್ಯಾಟ್‌ಗಳ ಪೈಕಿ ನ್ಯಾಯಾಲಯದಲ್ಲಿ ವ್ಯಕ್ತಿಯೊಬ್ಬರ ದೂರು ಅರ್ಜಿ ವಿಚಾರಣೆ ಹಂತದಲ್ಲಿರುವ ಕಾರಣ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಬಳಸಿದ್ದ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು 2024ರ ಲೋಕಸಭಾ ಚುನಾವಣೆಗೆ ಬಳಸಲಾಗುತ್ತಿಲ್ಲ. ಅದೇ ಕಾರಣದಿಂದ ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಮುಂದಿನ ಲೋಕಸಭಾ ಸಾರ್ವತ್ರಿಕ ಚುನಾವಣೆಗಾಗಿ ಹೊಸದಾಗಿ 1500 ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮೈಸೂರು ಜಿಲ್ಲೆಗೆ ತರಿಸಲಾಗಿದೆ.

ಮೈಸೂರಲ್ಲಿ ಕೆಎಸ್‌ಆರ್‌ಟಿಸಿ 62ನೇ ಸಂಸ್ಥಾಪನಾ ದಿನಾಚರಣೆ

ಸಾರಿಗೆ ಬಸ್‌ಗೆ ಪೂಜೆ, ಪ್ರಯಾಣಿಕರಿಗೆ ಸಿಹಿ ವಿತರಣೆ; ನಿವೃತ್ತ ಡಿಸಿ ಮರೀಗೌಡರಿಗೆ ಅಭಿನಂದನೆ



ಮೈಸೂರು, ಆ.1(ಆರ್‌ಕೆ) –62 ವಸಂತ ಪೂರೈಸಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ)ದ ಅಧಿಕಾರಿಗಳು ಹಾಗೂ ಸಿಬ್ಬಂದಿ ಇಂದು ಸಂಸ್ಥಾಪನಾ ದಿನವನ್ನು ಆಚರಿಸಿದರು.

ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸಾರಿಗೆ ಬಸ್ಸಿಗೆ ಪುಷ್ಪಾಲಂಕಾರ ಮಾಡಿ, ಪೂಜೆ ಸಲ್ಲಿಸಿದ ಚಾಲಕರು, ನಿರ್ವಾಹಕರು, ಪ್ರಯಾಣಿಕರಿಗೆ ಸಿಹಿ ವಿತರಿಸಿ ಸಂಭ್ರಮಿಸಿದರು. ಇದೇ ವೇಳೆ ನಿನ್ನೆಯಷ್ಟೇ ನಿವೃತ್ತರಾದ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಮರೀಗೌಡರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು.

ಸಬರ್ಬನ್ ಬಸ್ ನಿಲ್ದಾಣದ ಡಿಟಿಓ ಸಿ.ಹೇಮಂತಕುಮಾರ್, ಕಾರ್ಮಿಕರ ಕಲ್ಯಾಣ ಅಧಿಕಾರಿಗಳು, ಲೆಕ್ಕಾಧಿಕಾರಿಗಳು, ಡಿಪೋ ಮ್ಯಾನೇಜರ್‌ಗಳು ಸೇರಿದಂತೆ ಸಂಸ್ಥೆಯ ಅಧಿಕಾರಿ, ಸಿಬ್ಬಂದಿ ವರ್ಗ 6ನೇ ಸಂಸ್ಥಾಪನಾ ದಿನ ಆಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

1948ರ ಸೆಪ್ಟೆಂಬರ್ 12ರಂದು ಬೆಂಗಳೂರು ನಗರದಲ್ಲಿ ಮೈಸೂರು ಸರ್ಕಾರದ ರಸ್ತೆ ಸಾರಿಗೆ ಇಲಾಖೆ (MGRTD) ಆರಂಭವಾಯಿತು. ಕೇವಲ 120 ಬಸ್‌ಗಳನ್ನು ಹೊಂದಿದ್ದ ಇಲಾಖೆಯು 1961ರ ಜನವರಿ 1ರಂದು ಮೈಸೂರು ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ (MSRTC) ಆಗಿ ಬದಲಾಯಿತು. ಅಂದಿನಿಂದ ಪ್ರತೀ ವರ್ಷ ಆ.1ರಂದು ಕೆಎಸ್‌ಆರ್‌ಟಿಸಿ ಸಂಸ್ಥಾಪನಾ ದಿನವನ್ನಾಗಿ ಆಚರಿಸುತ್ತಾ ಬಂದಿದೆ.

ನಂತರ 1973ರಲ್ಲಿ ಕೆಎಸ್‌ಆರ್‌ಟಿಸಿಯಾಗಿ ಮರುನಾಮಕರಣ ಮಾಡಲಾಯಿತು. 1997ರ ಆಗಸ್ಟ್ 15ರಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಾಗಿ, 1997ರ ನವೆಂಬರ್ 1ರಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಕೆಎಸ್‌ಅರ್‌ಟಿಸಿಯಿಂದ ಬೇರ್ಪಟ್ಟಿತು. 2000ದ ಅಕ್ಟೋಬರ್ 1ರಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಾಗಿ ಇದೀಗ 4 ಪ್ರತ್ಯೇಕ ನಿಗಮಗಳಾಗಿ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ಸಾಮಾನ್ಯ ಸಾರಿಗೆ, ಸೆಮಿ ಲಕ್ಸುರಿ, ಸೂಪರ್ ಡಿಲಕ್ಸ್, ರಾಜಹಂಸ, ನಾನ್ ಎಸಿ ಸ್ಲೀಪರ್, ವಜ್ರ, ಐರಾವತ, ಐರಾವತ ಗೋಲ್ಡ್ ಕ್ಲಾಸ್, ಅಂಬಾರಿ, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ, ಫ್ಲೈ ಬಸ್, ಪವರ್ ಪ್ಲಸ್ ಎಲೆಕ್ಟ್ರಿಕ್ ಬಸ್‌ನಂತಹ ಅದ್ಧೂರಿ ಬಸ್ಸುಗಳನ್ನು ಹೊಂದಿರುವ ಸಾರಿಗೆ ಸಂಸ್ಥೆಯು ಕರ್ನಾಟಕ ರಾಜ್ಯವಲ್ಲದೇ ನೆರೆ ರಾಜ್ಯಗಳಲ್ಲೂ ಸಾರಿಗೆ ಸೇವೆ ಒದಗಿಸುತ್ತಿದೆ.

ಕೊಡಗು ಗೌಡ ಸಮಾಜದಿಂದ ಆ.6, ಆಟಿ ಗೌಜಿ ಆಹಾರ ಮೇಳ

ಮೈಸೂರು,ಆ.1–ಮೈಸೂರಿನ ಕೊಡಗು ಗೌಡ ಸಮಾಜ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಮಹಿಳಾ ಸಮಾಜದ ಸಹಯೋಗದಲ್ಲಿ ಮೈಸೂರಿನ ವಿಜಯನಗರದ 2ನೇ ಹಂತದಲ್ಲಿರುವ ಕೊಡಗು ಗೌಡ ಸಮಾಜದ ಸಭಾ ಭವನದಲ್ಲಿ ಆ.6ರಂದು ಬೆಳಗ್ಗೆ 10.30ರಿಂದ ಜನಾಂಗದ ಬಾಂಧವರಿಗೆ ಆಟಿ ಗೌಜಿ ಆಹಾರ ಮೇಳ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಸಮಾಜದ ಮಹಿಳೆಯರು ತಯಾರಿಸಿದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮಳೆಗಾಲದ ಅದರಲ್ಲೂ ವಿಶೇಷವಾಗಿ ಆಟಿ ತಿಂಗಳಲ್ಲಿ ಸೇವಿಸುವ ಸಾಂಪ್ರದಾಯಿಕ ಖಾದ್ಯಗಳ ಪ್ರದರ್ಶನ ಮತ್ತು ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಕಾರ್ಯದರ್ಶಿ ಗಣಪತಿ ಕುಂಟಿಕಾನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ತಾಲೂಕು ಜಯಪುರ ಹೋಬಳಿಯ ಗೋಪಾಲಪುರ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಜಿ.ಕೆ.ಬಸವೇಗೌಡ, ಉಪಾಧ್ಯಕ್ಷರಾಗಿ ಭಾಗ್ಯ ಮಹದೇವನಾಯಕ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಶಿಶು ಅಭಿವೃದ್ಧಿ ಇಲಾಖೆ ಯೋಜನಾಧಿಕಾರಿ ಡಿ.ತಿಬ್ಬಯ್ಯ ಕಾರ್ಯನಿರ್ವಹಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ರಾಮಲಿಂಗಾಚಾರಿ, ಮಹದೇವನಾಯಕ, ಮಾಧುರಿ ನಾಗರಾಜ್, ಸಿದ್ದಯ್ಯ, ಶಿಲ್ಪಾ, ಗಾಯತ್ರಿ ರಾಮಲಿಂಗು, ಸಣ್ಣತಾಯಮ್ಮ, ಪವಿತ್ರ ಮಲ್ಲೇಶ್, ದಳಪತಿ ಮಹದೇವು, ಜೆಡಿಎಸ್ ಮುಖಂಡರಾದ ದೇವರಾಜು, ಜೆ.ಡಿ.ರಾಜು, ವಿಶ್ವನಾಥ್, ಮಂಜು, ಸ್ವಾಮಿಗೌಡ, ಜಯರಾಮೇಗೌಡ, ಸುರೇಶ್, ಪ್ರದೀಪ್‌ಗೌಡ, ರಾಮಚಂದ್ರ, ಮರೀಗೌಡ, ಮಹೇಶ್, ಗೋವಿಂದೇಗೌಡ, ರವಿಶೆಟ್ಟಿ, ಚಿಕ್ಕಣನಾಯಕ, ಯೋಗೇಶ್ ಇನ್ನಿತರರಿದ್ದರು.

ಮುಕ್ತ ವಿವಿಯಲ್ಲಿ ಶೈಕ್ಷಣಿಕ ಪ್ರಚಾರ ಪ್ರವಾಸಕ್ಕೆ ಚಾಲನೆ

ಮೈಸೂರು, ಆ. 1– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶ್ರವ್ಯ ಮತ್ತು ದೃಶ್ಯ ಸ್ಟುಡಿಯೋ ವತಿಯಿಂದ 2023–24ನೇ ಸಾಲಿನ ಶೈಕ್ಷಣಿಕ ಪ್ರಚಾರ ಪ್ರವಾಸಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಮುಂಭಾಗದಲ್ಲಿ ಚಾಲನೆ ನೀಡಲಾಯಿತು.



ಚಲನಚಿತ್ರ ನಟ ಮಂಡ್ಯ ರಮೇಶ್ ಮಾತನಾಡಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ದೇಶದಲ್ಲಿಯೇ ಮಾದರಿ ವಿಶ್ವವಿದ್ಯಾನಿಲಯವಾಗಿದೆ. ಮುಕ್ತ ವಿವಿಯಲ್ಲಿ ಊಹೆಗೂ ನಿಲುಕದ ಶೈಕ್ಷಣಿಕ ಪರಿಸರ, ನಿರ್ವಹಣೆ, ಆಡಳಿತಗಾರರ ಇಚ್ಛಾಶಕ್ತಿಯಿಂದ ಅತ್ಯುತ್ತಮವಾಗಿದೆ. ಇದಕ್ಕಾಗಿ ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆ ಅವರನ್ನು ಅಭಿನಂದಿಸುತ್ತೇನೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ ಕೆ.ಎಲ್.ಎನ್.ಮೂರ್ತಿ ಮಾತನಾಡಿ, ಒಂದು ಲಕ್ಷ ವಿದ್ಯಾರ್ಥಿಗಳನ್ನು ಜುಲೈ ಆವೃತ್ತಿಯಲ್ಲಿ ದಾಖಲು ಮಾಡಿಕೊಳ್ಳಲು ರಾಜ್ಯಾದ್ಯಂತ ಪ್ರಚಾರ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡೀನ್‌ಗಳಾದ ಪ್ರೊ. ಲಕ್ಷ್ಮಿ, ಪ್ರೊ.ರಾಮನಾಥಂ ನಾಯ್ಡು, ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಬಿ.ಪ್ರವೀಣ, ರಂಗಾಯಣ ಕಲಾವಿದರಾದ ಶ್ರೀಮತಿ ಸರೋಜಾ ಹೆಗಡೆ, ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ವಿಷುವಲ್ ಸ್ಟುಡಿಯೋನ ಸಂಯೋಜನಾಧಿಕಾರಿ ಡಾ.ಸುಮತಿ ರಾಮಕೃಷ್ಣೇಗೌಡ, ಕರಾಮುವಿ ದೃಶ್ಯ ಸ್ಟುಡಿಯೋ ಯೋಜನಾ ನಿರ್ದೇಶಕ ಸಿದ್ದೇಗೌಡ, ಸಂಪನ್ಮೂಲ ವ್ಯಕ್ತಿಗಳಾದ ಎಸ್.ಡಿ. ದಯಾನಂದ, ಎಂ.ಟಿ.ನಟರಾಜ್, ಸಂಕಲನಕಾರರಾದ ಸುಜೇತ್‌ಕುಮಾರ್, ಡಿ.ಎಸ್.ಶಿವಶಂಕರ, ತಾಂತ್ರಿಕ ಸಹಾಯಕರಾದ ಉಲ್ಲಾಸ್, ಡಿಬಿಆರ್ ಮಿಥಿಲ್, ಕ್ಯಾಮರಾ ನಿರ್ವಾಹಕರಾದ ಬಿ.ಪಿ. ವಿಜಯ, ರಾಮು ನರಹಳ್ಳಿ, ಶಂಭುಲಿಂಗೇಗೌಡ, ಸಹಾಯಕರಾದ ಗುರುರಾಜು, ಟಿ.ಆರ್.ವಿದ್ಯಾಶ್ರೀ, ಯೋಗೇಶ್ ಇದ್ದರು. ಪ್ರಚಾರ ಪ್ರವಾಸ ವಾಹನವು ಮೈಸೂರಿನಿಂದ ಹೊರಟು ಚಾಮರಾಜನಗರದಿಂದ ಬೀದರ್‌ವರೆಗೆ ರಾಜ್ಯಾದ್ಯಂತ ಶೈಕ್ಷಣಿಕ ವಿಷಯ ಕುರಿತ ವಿಡಿಯೋಗಳನ್ನು ಒಳಗೊಂಡ ಎಲ್‌ಇಡಿ wall ನಲ್ಲಿ ಸಂಪೂರ್ಣ ಮಾಹಿತಿ ನೀಡಲಿದೆ.

ಆ.3ರಂದು ವಿಶೇಷ ಪವಮಾನ ಹೋಮ

ಮೈಸೂರು.ಆ.1–ನಗರದ ಯಾದವಗಿರಿಯ ಕೆಆರ್‌ಎಸ್ ರಸ್ತೆ, ಸಿಎಫ್‌ಟಿಆರ್‌ಐ ಪಕ್ಕ (ರೈಲ್ವೆ ಮ್ಯೂಸಿಯಂ ಎದುರು) ಇರುವ ಶ್ರೀ ಉತ್ತರಾದಿ ಮಠದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪಂಡಿತ್ ಶ್ರೀ ಆದ್ಯಾ ಗೋವಿಂದಾಚಾರ್ಯರ ನೇತೃತ್ವದಲ್ಲಿ ಲೋಕ ಕಲ್ಯಾಣಾರ್ಥವಾಗಿ ವಿಶೇಷ ಸಾಮೂಹಿಕ ಪವಮಾನ ಹೋಮ ಸೇವೆಯನ್ನು ಆ.3ರಂದು ಗುರುವಾರ ಬೆಳಿಗ್ಗೆ ಏರ್ಪಡಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮಠದ ಪ್ರಧಾನ ವ್ಯವಸ್ಥಾಪಕ ಪಂಡಿತ್ ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9686978861, 9448147459 ಸಂಪರ್ಕಿಸುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.8.2023 ಬುಧವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ. ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಸಂಗಮೇಶ್ ಸವದತ್ತಿ ಮಠ, 7.15 ಅರ್ಚನ ಉಡುಪ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ಮನೋನಂದನ–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಲಿಟಿ ಮೈಸೂರು ಪ್ರಾಯೋಜಿತ ಕಾರ್ಯಕ್ರಮ, ವಿಷಯ–ಪ್ರಸವ ಪೂರ್ವ ಆರೈಕೆ ಮತ್ತು ಗರ್ಭಿಣಿಯರಲ್ಲಿ ಇರುವ ತಪ್ಪು ಕಲ್ಪನೆಗಳು. ಭಾಗವಹಿಸುವವರು ಡಾ. ಮಾಧುರಿ ಎನ್. ಗೈನಕಾಲಜಿಸ್ಟ್, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ, ರಾಜೀವ್ ತಾರಾನಾಥ್–ಸರೋಡ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ಜಯಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಎ.ಜೆ. ದಿವ್ಯಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯ ಕ್ರಮ, 3.00 ಲಯಸಂಭ್ರಮ, ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ, 4.45 ಹಿಂದಿ ಪಾಠ–ಡಾ. ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಸಾವಯವ ಸಂಪದ, ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ. ಸಾವಯವ ಕೃಷಿಯಲ್ಲಿ ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶಗಳ ನಿರ್ವಹಣೆ ಕುರಿತು ಡಾ.ಎಸ್.ಎಸ್.ಪ್ರಕಾಶ್ ಅವರೊಂದಿಗೆ ಸಂದರ್ಶನ, ಪರಿಕಲ್ಪನೆ ಹಾಗೂ ನಿರ್ಮಾಣ–ಎನ್. ಕೇಶವಮೂರ್ತಿ, 8.00 ಸಂಸದ್ ಸಮೀಕ್ಷಾ, 9.30 ಹಿಂದೂಸ್ಥಾನಿ ಸಂಗೀತ –ಶ್ರೀಮತಿ ಧೋಂಡುತಾಯ್ ಕುಲಕರ್ಣಿ–ಗಾಯನ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

- **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಜನಚೈತನ್ಯ ಫೌಂಡೇಷನ್ :** ಹಾಡೊಂದು ನಾ ಹಾಡುವೆನು ಕರೋಕೆ ಗಾಯನ ಕಾರ್ಯಕ್ರಮ, ಉದ್ಘಾಟನೆ : ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರಾದ ಡಾ. ರೇಖಾ ಅರುಣ್, ಅಧ್ಯಕ್ಷತೆ : ಮನೋವಿಜ್ಞಾನಿ ಡಾ. ರೇಖಾ ಮನಃಶಾಂತಿ, ಮುಖ್ಯ ಅತಿಥಿಗಳು : ಸಹಾಯಕ ಕಾರ್ಯಪಾಲಕ ಅಭಿಯಂತರ ಎನ್. ಶ್ರೀನಿವಾಸಲು, ಕಿರಿಯ ಅಭಿಯಂತರ ಅಜುರುದ್ದೀನ್, ಹಿರಿಯ ವಕೀಲ ಕೆ.ಪಿ. ಶೆಟ್ಟಿ, ಪ್ರಾಸ್ತಾವಿಕ ನುಡಿ : ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮಧ್ಯಾಹ್ನ 3 ರಿಂದ.
- **ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ :** ಗುರುವಂದನಾ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಪ್ರಾಸ್ತಾವಿಕ ನುಡಿ: ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷ ಎಸ್.ನಂದೀಶ್, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಪ್ರೊ. ಕೆ.ಸಿ.ಮಹದೇಶ್, ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್, ಉಪಸ್ಥಿತರು : ಜೆಎಸ್‌ಎಸ್ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಅಧ್ಯಕ್ಷತೆ : ಎಬಿಆರ್‌ಎಸ್‌ಎಂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ, ಸ್ಥಳ: ಗೋಪಾಲಸ್ವಾಮಿ ಕಾಲೇಜು, ಸಂಜೆ 6ಕ್ಕೆ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ ಅವರಿಂದ ಅರಣ್ಯಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಅವರಣ, ಕೃಷ್ಣಮೂರ್ತಿಪುರಂ. ಸಂಜೆ 6 ರಿಂದ 7ರವರೆಗೆ.
- **ಶ್ರೀ ಕೃಷ್ಣ ಗಾನಸಭಾ:** ಡಾ.ಎಂ.ಆರ್.ಕೃಷ್ಣಮೂರ್ತಿ, ಶ್ರೀಮತಿ ಲಲಿತಾ ರಮೇಶ್ ಮತ್ತು ಶ್ರೀಮತಿ ನೀತಾ ದೇಶಪಾಂಡೆ ಅವರ ಶಿಷ್ಯರಾದ ವಿಂದ್ಯಾ, ಶ್ರೀಮತಿ ಅಮೃತವರ್ಷಿಣಿ, ಶ್ರೀಮತಿ ನೇಹ, ಅರುಶಿ, ಸಂಜನ, ವಿಶಾಕ, ವಿದ್ಯಾ ಅವರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6.30ಕ್ಕೆ.

ಶಾಸಕ ತನ್ವೀರ್ ಸೇಠ್ ವಿರುದ್ಧ ಆರೋಪ; ಸಂಸದ ಮುನಿಸ್ವಾಮಿ ವಿರುದ್ಧ ಪೊಲೀಸರಿಗೆ ದೂರು



ಮೈಸೂರು,ಆ.1(ಎಂಕೆ)–ಶಾಸಕ ತನ್ವೀರ್ ಸೇಠ್ ಅವರನ್ನು ಉಗ್ರಗಾಮಿ ಸಂಘಟನೆ ಮುಖ್ಯಸ್ಥ ಎಂದಿರುವ ಕೋಲಾರ ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮೈಸೂರು ಕಾಂಗ್ರೆಸ್ ವತಿಯಿಂದ ನಗರ ಪೊಲೀಸ್ ಆಯುಕ್ತರಿಗೆ ಮಂಗಳವಾರ ದೂರು ಸಲ್ಲಿಸಲಾಯಿತು.

ಬೆಂಗಳೂರಿನ ಡಿಜೆ ಹಳ್ಳಿ, ಕೆಜಿ ಹಳ್ಳಿ, ಶಿವಮೊಗ್ಗ, ಹುಬ್ಬಳ್ಳಿಯ ಗಲಭೆಗಳ ಸಂಬಂಧ ಪರಿಶೀಲಿಸಿ ಅಮಾಯಕರನ್ನು ಬಿಡುಗಡೆ ಮಾಡುವಂತೆ ಕೋರಿ ಶಾಸಕ ತನ್ವೀರ್‌ಸೇಠ್ ಗೃಹ ಸಚಿವರಿಗೆ ಪತ್ರ ಬರೆದಿದ್ದಾರೆಯೇ ಹೊರತು ಗಲಭೆಗಳಲ್ಲಿ ಭಾಗಿಯಾದವರನ್ನು ಬಿಡುಗಡೆ ಮಾಡುವಂತೆ ಹೇಳಿಲ್ಲ. ಆದರೆ ಅವರನ್ನು ಉಗ್ರಗಾಮಿ ಸಂಘಟನೆ ಮುಖ್ಯಸ್ಥ ಎಂದು ಮುನಿಸ್ವಾಮಿಯವರು ಟೀಕಿಸುವ ಮೂಲಕ ತನ್ವೀರ್ ಸೇಠ್ ಅವರ ತೇಜೋವಧೆ ಮಾಡಿದ್ದಾರೆ. ಆದ್ದರಿಂದ ಮುನಿಸ್ವಾಮಿ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಮನವಿ ಮಾಡಲಾಗಿದೆ.

ಇದಕ್ಕೂ ಮುನ್ನ ಎನ್.ಆರ್. ಪೊಲೀಸ್ ಠಾಣೆಗೆ ತೆರಳಿ ದೂರು ನೀಡಲಾಯಿತು. ಈ ವೇಳೆ ವಕ್ತಾರ ರಾಜೇಶ್, ಕಾರ್ಪೊರೇಟರ್‌ಗಳಾದ ಅಯಾಜ್ ಪಾಷಾ ಪಾಂಡು, ಶ್ರೀಧರ, ಸತ್ಯರಾಜು, ಪ್ರದೀಪ್ ಚಂದ್ರ, ಕಾಂಗ್ರೆಸ್ ಹಿಂದುಳಿಗ ವರ್ಗ ವಿಭಾಗದ ಜಿಲ್ಲಾಧ್ಯಕ್ಷ ನಾಗೇಶ್, ಸೇವಾದಳ ಅಧ್ಯಕ್ಷ ಅಶೋಕ, ಎಸ್‌ಸಿ/ಎಸ್‌ಟಿ ವಿಭಾಗದ ಅಧ್ಯಕ್ಷ ರೋಹಿತ್, ರಮೇಶ್, ರಸೂಲ್, ಪ್ರಕಾಶ್, ರಾಮಣ್ಣ, ಡಿ.ಗೋಪಾಲ್ ಮತ್ತಿತರರಿದ್ದರು.

ಮೈಸೂರು ಪಶ್ಚಿಮ ಆರ್‌ಟಿಓ ಕಚೇರಿಯಲ್ಲಿ ವಂಚನೆ; 35 ಮಂದಿ ವಿರುದ್ಧ ಎಫ್‌ಐಆರ್

ಮೈಸೂರು, ಆ.1(ಎಂಕೆ)– ಮೈಸೂರು ಪಶ್ಚಿಮ ಆರ್‌ಟಿಓ ಕಚೇರಿಯಲ್ಲಿ ಸರ್ಕಾರಿ ಅಧಿಕಾರಿ ಮತ್ತು ನೌಕರರಂತೆ ವರ್ತಿಸುವ ಅನಧಿಕೃತ ವ್ಯಕ್ತಿಗಳು ಹಾಗೂ ಅವರಿಗೆ ಸಹಕರಿಸುತ್ತಿರುವ ಸಾರಿಗೆ ಅಧಿಕಾರಿಗಳು ಸೇರಿದಂತೆ 35 ಮಂದಿ ವಿರುದ್ಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ನಗರದ ಬಲ್ಲಾಳ ವೃತ್ತದ ಸಮೀಪದಲ್ಲಿರುವ ಪಶ್ಚಿಮ ಆರ್‌ಟಿಓ ಕಚೇರಿಯಲ್ಲಿ ಸರ್ಕಾರಿ ಅಧಿಕಾರಿ ಮತ್ತು ನೌಕರರಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ವಂಚಿಸಲಾಗುತ್ತಿದೆ. ಹಾಗೆಯೇ ಇಂತಹ ಅನಧಿಕೃತ ವ್ಯಕ್ತಿಗಳಿಗೆ ಅಧಿಕಾರಿಗಳು ಸಹಕರಿಸುತ್ತಿದ್ದಾರೆ ಎಂದು ಪ್ರದೀಪ್‌ಕುಮಾರ್ ಎಂಬುವರು ದೂರು ನೀಡಿದ್ದಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಅನಧಿಕೃತ ವ್ಯಕ್ತಿಗಳ ವಿರುದ್ಧ ಐಪಿಸಿ ಸೆಕ್ಷನ್ 409, 419, 420, 468 ಮತ್ತು 149 ಅಡಿ ಪ್ರಕರಣ ದಾಖಲಾಗಿದೆ.

ಎಸ್.ಟಿ.ಜವರೇಗೌಡ ಮೈಸೂರು ನೂತನ ಡಿಡಿಪಿಐ



ಮೈಸೂರು, ಆ.1(ಎಸ್‌ಪಿಎನ್)– ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆ ಸೇರಿದಂತೆ ಇತರೆ ಜಿಲ್ಲೆಗಳ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಮತ್ತು ತತ್ಸಮಾನ ವೃಂದದ ಅಧಿಕಾರಿಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಮಂಗಳವಾರ ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ.

ಮೈಸೂರು ಡಿಡಿಪಿಐ(ಆಡಳಿತ) ಹೆಚ್.ಕೆ. ಪಾಂಡು ಅವರನ್ನು ಹಾಸನಕ್ಕೆ ವರ್ಗಾವಣೆ ಮಾಡಿ, ಈ ಸ್ಥಾನಕ್ಕೆ ಎಸ್.ಟಿ. ಜವರೇಗೌಡ, ಚಾಮರಾಜನಗರ ಜಿಲ್ಲೆ ಡಿಡಿಪಿಐ (ಆಡಳಿತ) ಆಗಿ ರಾಮಚಂದ್ರರಾಜೇ ಅರಸ್, ಕೊಡಗು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲರಾಗಿ ದಯಾವತಿ, ಮಂಡ್ಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಾಗಿ ಪುರುಷೋತ್ತಮ್, ಮೈಸೂರು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಚಕರಾಗಿ ವೇದಮೂರ್ತಿ ಹಾಗೂ ಕೊಡಗು ಡಿಡಿಪಿಐ(ಆಡಳಿತ) ರಂಗಧಾಮಯ್ಯ ಅವರನ್ನು ತುಮಕೂರಿಗೆ ವರ್ಗಾವಣೆಗೊಳಿಸಿದೆ. ಇದೇ ರೀತಿ ಒಟ್ಟು 30 ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಿಗೆ ವರ್ಗಾವಣೆ ಮಾಡಿ ಶಾಲಾ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಮಚಂದ್ರಪ್ಪ ಆದೇಶಿಸಿದ್ದಾರೆ.

ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ದಿಢೀರ್ ಸಿಬಿಎಸ್‌ಇ ಪಠ್ಯ ಪರಿಚಯ; ವಿದ್ಯಾರ್ಥಿಗಳಲ್ಲಿ ಆತಂಕ, ಪೋಷಕರಿಗೂ ಕಳವಳ

ಮೈಸೂರು, ಆ.1(ಎಂಕೆ)– ಶಿಕ್ಷಕರ ಪಾಠ ಅರ್ಥವಾಗುತ್ತಿಲ್ಲ... ಕಲಿಕೆ ಕಷ್ಟವಾಗುತ್ತಿದೆ... ಉತ್ತಮ ಫಲಿತಾಂಶ ಪಡೆಯುವುದೇಗೆ ಎಂಬುದು ಮಕ್ಕಳ ಆತಂಕವಾದರೆ, ಕಳಪೆ ಫಲಿತಾಂಶ ಬಂದರೆ ಮಕ್ಕಳ ಭವಿಷ್ಯವೇನು ಎಂಬುದು ಪೋಷಕರ ಚಿಂತೆಯಾಗಿದೆ...

ಮೈಸೂರು ತಾಲೂಕಿನ ದೊಡ್ಡಕಾನ್ಯದಲ್ಲಿರುವ ಅಲ್ಪಸಂಖ್ಯಾತರ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲಾ ಸಂಕೀರ್ಣ)ಯಲ್ಲಿ ಸಿಬಿಎಸ್‌ಇ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್) ಪಠ್ಯಕ್ರಮ ಅಳವಡಿಕೆ ಹಿನ್ನೆಲೆಯಲ್ಲಿ ಮಕ್ಕಳ ಕಲಿಕೆಯಲ್ಲಿ ಕುಂಠಿತವಾಗುವ ಸಾಧ್ಯತೆ ಹೆಚ್ಚಾಗಿದೆ.

6ರಿಂದ 10ನೇ ತರಗತಿವರೆಗಿನ ವಸತಿ ಶಾಲೆ ಇದಾಗಿದ್ದು, ಸುಮಾರು 250ಕ್ಕೂ ಅಧಿಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಳೆದ ವರ್ಷ 6ರಿಂದ 9ನೇ ತರಗತಿವರೆಗೆ ಸಿಬಿಎಸ್‌ಸಿ ಪಠ್ಯಕ್ರಮ ಅಳವಡಿಸಿಕೊಳ್ಳಲಾಗಿದ್ದು, ಪ್ರಸಕ್ತ ವರ್ಷದಿಂದ 10ನೇ ತರಗತಿವರೆಗೆ ವಿಸ್ತರಿಸಲಾಗಿದೆ. ರಾಜ್ಯ ಪಠ್ಯಕ್ರಮದಿಂದ ಸಿಬಿಎಸ್‌ಸಿ ಪಠ್ಯಕ್ರಮ ಅಭ್ಯಾಸ ಮಾಡುವುದು ಕಷ್ಟವಾಗಿದೆ. ಶಿಕ್ಷಕರು ಮಾಡುವ ಪಾಠವೇ ಸರಿಯಾಗಿ ಅರ್ಥವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಶಾಲೆಗೆ ಹೊಸದಾಗಿ ಸೇರಿದ ವಿದ್ಯಾರ್ಥಿಗಳಲ್ಲಿ ಹಲವರು ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿದ್ದರು. ಈಗ ಏಕಾಏಕಿ ಇಂಗ್ಲಿಷ್ ಮಾಧ್ಯಮವಾಗಿರುವುದರಿಂದ ಹೆಚ್ಚಿನ ಅಂಕಗಳನ್ನು ಪಡೆಯುವುದು ಕಷ್ಟವಾಗುತ್ತದೆ. 10ನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಅಲ್ಲದೆ 10ನೇ ತರಗತಿ ನಂತರ ಒಳ್ಳೆಯ ಕಾಲೇಜುಗಳಲ್ಲಿ ಸೀಟ್ ಸಿಗುತ್ತೋ–ಇಲ್ಲವೋ ಎನ್ನುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಕಡಿಮೆ ಮಾರ್ಕ್ಸ್ ಬಂದರೆ ಕೇಳುವಂತಿಲ್ಲ: ಸಾಧ್ಯವಾದಷ್ಟು ಓದುತ್ತೇವೆ. ಆದರೆ ಕಡಿಮೆ ಮಾರ್ಕ್ಸ್ ಬಂದರೆ ನಮ್ಮನ್ನು ಕೇಳುವಂತಿಲ್ಲ. ಮೊದಲ ವರ್ಷ ಸಿಬಿಎಸ್‌ಸಿ ಪಠ್ಯಕ್ರಮ ಓದುತ್ತಿರುವುದರಿಂದ ಪಾಠ ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದೆ ಎಂದು ಮಕ್ಕಳು ಹೇಳುತ್ತಿದ್ದಾರೆ. ಸಿಬಿಎಸ್‌ಸಿ ಪಠ್ಯಕ್ರಮ ಅಳವಡಿಸಿರುವುದು ಒಳ್ಳೆಯದೇ ಆಗಿದ್ದರೂ ಅದು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಿರಬೇಕು ಎಂದು ಕೆಲ ಪೋಷಕರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ನಮಗೂ ಕಷ್ಟವಾಗಿದೆ; ಆದರೂ ಪ್ರಯತ್ನಿಸುತ್ತಿದ್ದೇವೆ

ಮೊದಲ ವರ್ಷ 10ನೇ ತರಗತಿ ವಿದ್ಯಾರ್ಥಿಗಳಿಗೆ ಸಿಬಿಎಸ್‌ಇ ಪಠ್ಯಕ್ರಮ ಕುರಿತು ಪಾಠ ಮಾಡುವುದು ನಮಗೂ ಕಷ್ಟವಾಗುತ್ತಿದೆ. ಆದರೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಪ್ರಯತ್ನಿಸುತ್ತಿದ್ದೇವೆ. ನಮಗೂ ಪರಿಣಿತರಿಂದ ಒಂದಷ್ಟು ತರಬೇತಿ ನೀಡುವ ಕೆಲಸಗಳಾದರೆ ಅನುಕೂಲವಾಗುತ್ತದೆ ಎಂದು ಶಾಲೆ ಕೆಲ ಶಿಕ್ಷಕರು ತಿಳಿಸಿದ್ದಾರೆ.



ಕೇಂದ್ರಿಯ ವಿದ್ಯಾಲಯ ಮಾದರಿ ಅಭಿವೃದ್ಧಿ...

ಅಲ್ಪಸಂಖ್ಯಾತರ ಇಲಾಖೆಯಡಿ ಜಿಲ್ಲೆಯಲ್ಲಿರುವ ಏಕೈಕ ವಸತಿ ಶಾಲೆ ಇದಾಗಿದ್ದು, ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಶಾಲೆಯನ್ನು ಅಭಿವೃದ್ಧಿ ಮಾಡಬೇಕು ಎಂಬ ಸದುದ್ದೇಶದಿಂದ ಸಿಬಿಎಸ್‌ಇ ಪಠ್ಯಕ್ರಮ ಅಳವಡಿಸಿಕೊಳ್ಳಲಾಗಿದೆ. ಆರಂಭದಲ್ಲಿ ಕಷ್ಟವಾಗುತ್ತಿತ್ತು. ನಂತರ ದಿನಗಳಲ್ಲಿ ಶಿಕ್ಷಕರು ಕೂಡ ಶ್ರಮ ವಹಿಸುತ್ತಿದ್ದಾರೆ. ಬಹುತೇಕ ವಿದ್ಯಾರ್ಥಿಗಳು ಕೂಡ ಸಿಬಿಎಸ್‌ಇ ಪಠ್ಯಕ್ರಮಕ್ಕೆ ಹೊಂದಾಣಿಕೆಯಾಗುತ್ತಿದ್ದಾರೆ ಎಂದು ಅಲ್ಪಸಂಖ್ಯಾತರ ಇಲಾಖೆ ಜಿಲ್ಲಾ ಅಧಿಕಾರಿ ಕೃಷ್ಣಮೂರ್ತಿ ತಿಳಿಸಿದರು.

ಈಗಾಗಲೇ ಪೋಷಕರೊಂದಿಗೆ ಸಭೆ ನಡೆಸಿದ್ದು, ಒಪ್ಪಿಸುವ ಪ್ರಯತ್ನ ಮಾಡಲಾಗಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಸಿಬಿಎಸ್‌ಇ ಪಠ್ಯಕ್ರಮ ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ ಅಳವಡಿಸಿಕೊಳ್ಳುವ ಮೊದಲೇ ಸರ್ವೆ ನಡೆಸಲಾಗಿತ್ತು. ಹಾಗೆಯೇ ಶಿಕ್ಷಕರಿಗೂ ತರಬೇತಿ ನೀಡಿದ್ದು, ಉತ್ತಮ ಫಲಿತಾಂಶದತ್ತ ಗಮನಹರಿಸುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ಶಿಕ್ಷಕರಿಗೆ ವಿಶೇಷ ತರಬೇತಿ ಅವಶ್ಯ: ಇಷ್ಟು ವರ್ಷ ರಾಜ್ಯ ಪಠ್ಯಕ್ರಮ ಪಾಠ ಮಾಡುತ್ತಿದ್ದ ಶಿಕ್ಷಕರಿಗೂ ಸಿಬಿಎಸ್‌ಇ ಪಠ್ಯಕ್ರಮ ಅನುಸಾರ ಪಾಠ ಮಾಡುವುದು ಕಷ್ಟವಾಗುತ್ತಿದೆ. ಆದ್ದರಿಂದ ಮೊದಲು ಶಿಕ್ಷಕರಿಗೆ ವಿಶೇಷ ತರಬೇತಿಯಾಗಬೇಕು. ಇಲ್ಲವಾದರೆ ಮಕ್ಕಳ ಭವಿಷ್ಯ ಹಾಳಾಗುತ್ತದೆ. ತರಬೇತಿ ನೀಡಲು ಸಾಧ್ಯವಾಗದಿದ್ದರೆ ಸಿಬಿಎಸ್‌ಇ ಪಠ್ಯಕ್ರಮ ತೆರವುಗೊಳಿಸಿ ಎಂದು ಆಗ್ರಹಿಸಿದ್ದಾರೆ.

ಮೈಸೂರು ಕೋರ್ಟ್‌ನ ಸರ್ಕಾರಿ ಅಭಿಯೋಜಕ ಹೆಚ್.ಇ.ಚಿನ್ನಪ್ಪ ನಿವೃತ್ತಿ; ನ್ಯಾಯಾಂಗ ಅಧಿಕಾರಿಗಳಿಂದ ಆತ್ಮೀಯ ಬೀಳ್ಕೊಡುಗೆ

ಮೈಸೂರು,ಆ.1(ಎಸ್‌ಬಿಡಿ)– ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾಗಿ ನಿವೃತ್ತಿ ಹೊಂದಿದ ಹೆಚ್.ಇ.ಚಿನ್ನಪ್ಪ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಅಭಿಯೋಜಕರಾಗಿ 30 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿರುವ ಹೆಚ್.ಇ.ಚಿನ್ನಪ್ಪ ಅವರು ಜು.31 ರಂದು ವಯೋನಿವೃತ್ತಿ ಹೊಂದಿದ್ದು, ಮೈಸೂರಿನ ಸರ್ಕಾರಿ ಅಭಿಯೋಜಕರ ಕಚೇರಿಗಳ ಸಂಕೀರ್ಣದಲ್ಲಿ ಅವರನ್ನು ಅಭಿಯೋಜನ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಮೈಸೂರು ನ್ಯಾಯಾಂಗ ಅಧಿಕಾರಿಗಳು ಪ್ರತ್ಯೇಕವಾಗಿ ಅಭಿನಂದಿಸಿ, ಬೀಳ್ಕೊಟ್ಟರು.



ಹೃದಯಸ್ಪರ್ಶಿ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಹಾಗೂ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಎಸ್. ಸಂಗ್ರೇಶಿ ಅವರು, ಹೆಚ್.ಇ.ಚಿನ್ನಪ್ಪನವರ ದಕ್ಷ, ಪ್ರಾಮಾಣಿಕ, ಸಮಾಜಮುಖಿ ಸೇವೆಯನ್ನು ಮುಕ್ತಕಂಠದಿಂದ ಬಣ್ಣಿಸಿದರು.

ಇದೇ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ದಂಪತಿ ಹಾಗೂ ಹೆಚ್.ಇ.ಚಿನ್ನಪ್ಪ ದಂಪತಿಗಳನ್ನು ನ್ಯಾಯಾಂಗ ಅಧಿಕಾರಿಗಳು ಅಭಿನಂದಿಸಿದರು. ನಿವೃತ್ತ ಅಭಿಯೋಜಕರಾದ ಪರಶೆಟ್ಟಿ, ಕಾಳಿಂಗಪ್ಪ ಶಿವರುದ್ರಸ್ವಾಮಿ, ಕಾನೂನು ಅಧಿಕಾರಿ ಮಂಜುಳಾ, ಪ್ರಧಾನ ಸರ್ಕಾರಿ ಅಭಿಯೋಜಕರಾದ ಲೋಲಾಕ್ಷಿ, ಹಿರಿಯ ಸಹಾಯಕ ಸರಕಾರಿ ಅಭಿಯೋಜಕ ಸಿ.ಬಿ. ಗಿರೀಶ್ ಸೇರಿದಂತೆ ಹಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಆ.13, ಒಕ್ಕಲಿಗ ವಧು–ವರರ ಸಮಾವೇಶ

ಮೈಸೂರು,ಆ.1–ನೇಗಿಲಯೋಗಿ ಮರುಳೇಶ್ವರ ಒಕ್ಕಲಿಗ ವಧು–ವರರ ವೇದಿಕೆ ವತಿಯಿಂದ ಒಕ್ಕಲಿಗ ವಧು–ವರರ ಸಮಾವೇಶವನ್ನು ಆ.13ರ ಭಾನುವಾರದಂದು ಬೆಳಗ್ಗೆ 9 ಗಂಟೆಗೆ ನೇಗಿಲಯೋಗಿ ಮರುಳೇಶ್ವರ ಸೇವಾಭವನ, ಹೊಸ ನ್ಯಾಯಾಲಯದ ಎದುರು, ಕೆ.ಜಿ.ಕೊಪ್ಪಲು, ಜಯನಗರ, ಮೈಸೂರು–570014 ಇಲ್ಲಿ ಆಯೋಜಿಸಲಾಗಿದೆ. ಆಸಕ್ತರು ಸಮಾವೇಶದ ಪ್ರಯೋಜನ ಪಡೆದುಕೊಳ್ಳಲು ಕೋರಲಾಗಿದೆ. ಈಗಾಗಲೇ ನೋಂದಾಯಿಸಿ ಕೊಂಡಿರುವವರು ಹಾಗೂ ಸ್ಥಳದಲ್ಲೇ ನೋಂದಾಯಿಸಿಕೊಳ್ಳಲು ಇಚ್ಛಿಸುವವರು ಸಮಾವೇಶದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೊ: 9483453005, 9900629393, 9113201893, 9448392488 ಸಂಪರ್ಕಿಸಬಹುದು.

ಜ್ಞಾನಬುತ್ತಿ ಸಂಸ್ಥೆಯಿಂದ ಪರೀಕ್ಷೆಗಳಿಗೆ ತರಬೇತಿ

ಮೈಸೂರು,ಆ.1(ಬಿಎಲ್‌ಯು)– ಐಬಿಪಿಎಸ್, ಎಸ್‌ಎಸ್‌ಸಿ ಹಾಗೂ ಆರ್‌ಆರ್‌ಬಿ ಅಧಿಕಾರಿಗಳ ಹಾಗೂ ಗುಮಾಸ್ತರ ಹುದ್ದೆಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮೈಸೂರಿನ ಜ್ಞಾನಬುತ್ತಿ ಸಂಸ್ಥೆ 45 ದಿನಗಳ ಉಚಿತ ತರಬೇತಿ ಆಯೋಜಿಸಿದೆ. ಆಸಕ್ತರು ಆ.10ರೊಳಗೆ ಮೈಸೂರಿನ ಲಕ್ಷ್ಮಿಪುರಂನ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ತಿಳಿಸಿದ್ದಾರೆ. ವಿವರಗಳಿಗೆ ಸಂಸ್ಥೆಯ ಸಂಯೋಜಕರಾದ ಸಿ.ಕೆ.ಕಿರಣ್ ಕೌಶಿಕ್ ಹಾಗೂ ಕಿವೈ ನಾಗೇಂದ್ರ ಅವರನ್ನು ಸಂಪರ್ಕಿಸಬಹುದು.

ಗುರುವಂದನೆ, ಸಂಗೀತ ಸಂಜೆ

ಮೈಸೂರು,ಆ.1–ಮೈಸೂರಿನ ವಿ.ವಿ. ಮೊಹಲ್ಲಾದಲ್ಲಿರುವ ಭಾರತೀ ಸ್ತ್ರೀ ಸಮಾಜ ಪ್ರಾಥಮಿಕ ಶಾಲೆಯ 1969ರಿಂದ 1975ರವರೆಗೆ ವಿದ್ಯಾಭ್ಯಾಸ ಮಾಡಿದ ಹಳೆಯ ವಿದ್ಯಾರ್ಥಿ ವೃಂದದವರಿಂದ ಆ.5ರಂದು ಸಂಜೆ 6ಕ್ಕೆ ಜಗನ್ಮೋಹನ ಅರಮನೆಯಲ್ಲಿ ಅಂದಿನ ಶಿಕ್ಷಕರಿಗೆ ಗುರುವಂದನೆ ಹಾಗೂ ಎ.ಡಿ.ಶ್ರೀನಿವಾಸನ್ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತದಲ್ಲಿ ಶೇ.27ರಷ್ಟು ಮಾದಕ ವ್ಯಸನಿಗಳಿದ್ದಾರೆ

ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಆತಂಕ

ಮೈಸೂರು,ಆ.1(ಬಿಎಲ್‌ಯು)–ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.27ರಷ್ಟು ಜನರು ಒಂದಲ್ಲಾ ಒಂದು ಮಾದಕ ವ್ಯಸನಕ್ಕೊಳಗಾಗಿದ್ದಾರೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆದ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಂಬಾಕು, ತಂಬಾಕು ಉತ್ಪನ್ನಗಳು, ಮದ್ಯಪಾನ, ಗಾಂಜಾವನ್ನು ಹೆಚ್ಚಾಗಿ ಸೇವಿಸುತ್ತಾರೆ. ಇದರಿಂದ ಆರ್ಥಿಕವಾಗಿ ದಿವಾಳಿಯಾಗುತ್ತಾರೆ ಎಂದರು.

ಆರಂಭದಲ್ಲಿ ಮೋಜು ಹಾಗೂ ತಮಾಷೆಗಾಗಿ ಮಾದಕ ವಸ್ತುಗಳನ್ನು ಸೇವನೆ ಮಾಡುತ್ತಾರೆ. ಆದರೆ ದಿನ ಕಳೆದಂತೆ ಮಾದಕ ವಸ್ತುಗಳ ಚಟಕ್ಕೆ ದಾಸರಾಗುತ್ತಾರೆ. ಇದು ದೇಹದ ಅಂಗಾಗಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಜೊತೆಗೆ ಮಾನಸಿಕ ಆರೋಗ್ಯ ಹದಗೆಡುತ್ತದೆ. ಆದ ಕಾರಣ ಮಾದಕ ವಸ್ತುಗಳ ದುಷ್ಪರಿಣಾಮಗಳನ್ನು ಅರಿತು ಅದನ್ನು ತ್ಯಜಿಸಬೇಕು ಎಂದು ಸಲಹೆ ನೀಡಿದರು.



ದೈಹಿಕ, ಮಾನಸಿಕ, ಸಾಮಾಜಿಕ, ಆರ್ಥಿಕವಾಗಿ ಉತ್ತಮ ಪರಿಸ್ಥಿತಿ ಕಾಯ್ದುಕೊಳ್ಳುವುದನ್ನು ಆರೋಗ್ಯ ಎಂದು ವ್ಯಾಖ್ಯಾನಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಇದನ್ನು ಕಾಪಾಡಿಕೊಂಡು ಆರೋಗ್ಯವಂತರಾಗಬೇಕು ಎಂದರು.

ಮೈಸೂರು ಜಿಲ್ಲೆಯಲ್ಲಿ 1,500 ಆಶಾ ಕಾರ್ಯಕರ್ತೆಯರು ಸೇರಿದಂತೆ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರಿಂದ ವ್ಯಸನ ಮುಕ್ತಗೊಳಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇವರು ಪ್ರತಿ ಮನೆಗಳಿಗೆ ಭೇಟಿ ನೀಡಿ ತಂಬಾಕು, ತಂಬಾಕು ಉತ್ಪನ್ನ ಹಾಗೂ ಮದ್ಯ ಸೇವನೆ ಮಾಡದಂತೆ ಅರಿವು ಮೂಡಿಸಲಾಗುತ್ತದೆ. ವ್ಯಸನಿಗಳಿಗೆ ಚಿಕಿತ್ಸೆ ಕೂಡ ನೀಡಲಾಗುತ್ತಿದೆ. ಮೈಸೂರು ಜಿಲ್ಲೆಯನ್ನು ವ್ಯಸನ ಮುಕ್ತ ಮಾಡಲು ಎಲ್ಲರೂ ಸಹಕಾರ ನೀಡಬೇಕು ಎಂದು ಡಾ.ಕುಮಾರಸ್ವಾಮಿ ಮನವಿ ಮಾಡಿದರು.

ಮದ್ಯಪಾನ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಮುಕ್ತವಾದರೆ ಮಾತ್ರ ಉತ್ತಮ ಹಾದಿಯಲ್ಲಿ ಸಾಗಲು ಸಾಧ್ಯ. ಆದರೆ ಇತ್ತೀಚೆಗೆ ಹೆಚ್ಚಿನ ವಿದ್ಯಾರ್ಥಿಗಳು ಮಾದಕ ವಸ್ತುಗಳಿಗೆ ಮಾರುಹೋಗುತ್ತಿದ್ದಾರೆ ಎಂದು ತಹಶೀಲ್ದಾರ್ ವಿಷಾದ ವ್ಯಕ್ತಪಡಿಸಿದರು. ಮಾದಕ ವಸ್ತುಗಳು, ಮದ್ಯಪಾನ, ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತಂತೆ ಮನೋವೈದ್ಯಡಾ. ಸುಧಾರಾಣಿ ಉಪನ್ಯಾಸ ನೀಡಿದರು.

ಇದೇ ವೇಳೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಅಶೋಕ್‌ಕುಮಾರ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವಪ್ರಸಾದ್, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಅಕಾಡೆಮಿಕ್ ಡೀನ್ ಡಾ.ಮನೋಜ್ ಕುಮಾರ್, ಎಸ್‌ಜೆಸಿಇ ಕಾಲೇಜಿನ ಕ್ಷೇಮ ಪಾಲನಾ ನಿರ್ದೇಶಕ ಸುನಿಲ್‌ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಸರಾ ವೇಳೆ ನಗರದ ಅಭಿವೃದ್ಧಿಗೆ 26 ಕೋಟಿ ಅನುದಾನ ನೀಡುವಂತೆ ಸಿಎಂಗೆ ಮೇಯರ್ ಮನವಿ



ಮೈಸೂರು,ಆ.1(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ವೇಳೆ ನಗರವನ್ನು ಗುಂಡಿ ಮುಕ್ತಗೊಳಿಸಿ, ರಾಜಮಾರ್ಗ ಸೌಂದರ್ಯೀಕರಣಗೊಳಿಸಲು 26 ಕೋಟಿ ರೂ. ಅನುದಾನ ನೀಡುವಂತೆ ಮೇಯರ್ ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಈ ಸಂಬಂಧ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಶಿವಕುಮಾರ್, ದಸರಾ ಜಂಬೂ ಸವಾರಿ ಮೆರವಣಿಗೆ ಹಾದು ಹೋಗುವ ರಾಜಮಾರ್ಗ ಹಾಗೂ ಇತರೆ ಪ್ರವಾಸಿ ತಾಣಗಳ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳನ್ನು ಗುಂಡಿ ಮುಕ್ತ ಮಾಡಬೇಕಿದೆ. ಸೌಂದರ್ಯೀಕರಣ, ಬೀದಿ ದೀಪಗಳ ನಿರ್ವಹಣೆ ಸೇರಿದಂತೆ ರಸ್ತೆಗಳ ಅಭಿವೃದ್ಧಿ ಮಾಡಬೇಕಿದೆ ಎಂದು ತಿಳಿಸಿದ್ದಾರೆ.

ಜೊತೆಗೆ ಪ್ರತಿ ವಾರ್ಡ್ ನಲ್ಲಿ ಮನೆ ಮನೆ ದಸರಾ, ತೋಟಗಾರಿಕೆ ಕಾಮಗಾರಿ, ಆರೋಗ್ಯ ಶಾಖೆ ಕಾಮಗಾರಿ, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯನ್ನು ಅವಶ್ಯವಾಗಿ ಮಾಡಬೇಕಾಗಿದೆ ಎಂದು ಅವರು ಹೇಳಿದ್ದಾರೆ. ಈ ಎಲ್ಲಾ ಕಾಮಗಾರಿಗಳನ್ನು ಮಾಡಲು 26 ಕೋಟಿ ರೂಪಾಯಿಗಳ ಅನುದಾನ ನೀಡುವಂತೆ ಶಿವಕುಮಾರ್ ಅವರು ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಬಿಎಂಶ್ರೀನಗರದ ರಾಜೇಂದ್ರ ನಿಧನ



ಮೈಸೂರು,ಆ.1–ಮೈಸೂರಿನ ಬಿ.ಎಂ.ಶ್ರೀನಗರ, 3ನೇ ಮುಖ್ಯರಸ್ತೆ ನಿವಾಸಿ ರಾಜೇಂದ್ರ(58) ಅವರು ಮಂಗಳವಾರ ನಿಧನರಾದರು. ಮೃತರು ಮೂಲತಃ ಪಿರಿಯಾಪಟ್ಟಣ ತಾಲೂಕು, ರಾವಂದೂರು ಎಸ್.ಕೊಪ್ಪಲು ಗ್ರಾಮದ ಚನ್ನವೀರಾಚಾರ್ ಅವರ ಪುತ್ರ. ಮೃತರು ಪತ್ನಿ ಪೂರ್ಣಿಮಾ, ಪುತ್ರಿ ಅಭಿಲಾಷ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೇಟಗಳ್ಳಿ ಈಶ್ವರ ದೇವಾಲಯದ ಬಳಿಯ ರುದ್ರಭೂಮಿಯಲ್ಲಿ ಬುಧವಾರ ಬೆಳಗ್ಗೆ 11.30ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೌಜನ್ಯ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಆ.3ಕ್ಕೆ ಒಕ್ಕಲಿಗರ ಸಂಘದ ವತಿಯಿಂದ ಮೌನ ಮೆರವಣಿಗೆ



ಮೈಸೂರು,ಆ.1(ಜಿಎ)–ಸೌಜನ್ಯ ಹತ್ಯೆ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಒಕ್ಕಲಿಗರ ಸಂಘದ ವತಿಯಿಂದ ಆ.3ರಂದು ಮೌನ ಮೆರವಣಿಗೆ ನಡೆಸುವುದಾಗಿ ಎಂದು ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6 ಗಂಟೆಗೆ ಮೈಸೂರು ಅರಮನೆ ಮುಂಭಾಗದಿಂದ ಮೇಣದ ಬತ್ತಿ ಹಿಡಿದು ಮೌನ ಮೆರವಣಿಗೆ ಮೂಲಕ ಸಾಗಿ ಗಾಂಧಿ ವೃತ್ತದ ಬಳಿ ಸಮಾವೇಶಗೊಂಡು, ಮರು ತನಿಖೆಗೆ ಆಗ್ರಹಿಸುತ್ತೇವೆ ಎಂದರು.

2012ರ ಅಕ್ಟೋಬರ್ 9ರಂದು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ನೇತ್ರಾವತಿ ನದಿ ದಡದ ಅರಣ್ಯ ಪ್ರದೇಶದಲ್ಲಿ ಅತ್ಯಾಚಾರವೆಸಗಿ, ಹತ್ಯೆ ಮಾಡಲಾದ ಕುಮಾರಿ ಸೌಜನ್ಯಳ ಪ್ರಕರಣ ಇಂದು ರಾಷ್ಟ್ರವ್ಯಾಪಿ ಸುದ್ದಿ ಮಾಡುತ್ತಿದೆ. ಸೌಜನ್ಯಳ ಪೋಷಕರು ಪೊಲೀಸರು ಪ್ರಕರಣದಲ್ಲಿ ಆರೋಪಿ ಎಂದು ಬಂಧಿಸಿದ ಸಂತೋಷ್‌ರಾವ್ ಅಮಾಯಕ. ಆರೋಪಿಗಳು ಬೇರೆಯೇ ಇದ್ದಾರೆ ಎಂದು ಹೇಳಿದಾಗಿಯೂ ಪ್ರಕರಣವನ್ನು ಸಂತೋಷ್‌ರಾವ್ ಮೇಲೆ ಕೇಂದ್ರೀಕರಿಸಿ ತನಿಖೆ ನಡೆಸಲಾಯಿತು.

ಕೊನೆಗೆ ಸಿಬಿಐ ತನಿಖೆಯೂ ಆಯಿತು. ಅಂತಿಮವಾಗಿ ನ್ಯಾಯಾಲಯ ಸಂತೋಷರಾವ್ ನಿರಪರಾಧಿ, ಈ ಕೃತ್ಯಕ್ಕೂ ಆತನಿಗೂ ಸಂಬಂಧವಿಲ್ಲ ಎಂದು ಹೇಳಿದೆ. ಹಾಗಾದರೆ ನಿಜವಾದ ಅಪರಾಧಿ ಯಾರು? ಹಾಗಾಗಿ ಸೌಜನ್ಯಳ ಹತ್ಯೆಯ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸಬೇಕು. ನಿಜವಾದ ಅಪರಾಧಿಗೆ ಶಿಕ್ಷೆ ಆಗಬೇಕು. ಬರ್ಬರವಾಗಿ ಹತ್ಯೆಯಾದ 17 ವರ್ಷದ ಕುಮಾರಿ ಸೌಜನ್ಯ ಆತ್ಮಕ್ಕೆ ಶಾಂತಿ ದೊರಕಬೇಕು ಎಂಬುದೇ ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು.

ನಮ್ಮ ಹೋರಾಟಕ್ಕೆ ರಾಜ್ಯ ಒಕ್ಕಲಿಗರ ಸಂಘ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್, ಮೈಸೂರು ತಾಲೂಕು ಒಕ್ಕಲಿಗರ ಸಂಘ, ಜಿಲ್ಲಾ ಒಕ್ಕಲಿಗರ ಯುವ ವೇದಿಕೆ, ರಾಜ್ಯ ಒಕ್ಕಲಿಗರ ಯುವ ಪಡೆ, ಚುಂಚಾದ್ರಿ ಮಹಿಳಾ ವೇದಿಕೆ, ಸಿದ್ದಾರ್ಥನಗರ ಒಕ್ಕಲಿಗರ ಸಂಘ, ಮೈಸೂರು ಮಹಿಳಾ ಒಕ್ಕಲಿಗರ ಸಂಘ, ಚುಂಚಶ್ರೀ ಗೌಡತಿಯರ ಬಳಗ ಕುವೆಂಪುನಗರ, ಭಾರತಿ ಮಹಿಳಾ ಸಮಾಜ, ಸನ್ಮತಿ ಮಹಿಳಾ ಬಳಗ, ಸಮನ್ವಯ ಮಹಿಳಾ ಬಳಗ, ಬೈರವಿ ಮಹಿಳಾ ಸಂಘ ವಿಜಯನಗರ, ಶುಭೋದಯ ಮಹಿಳಾ ಕ್ಲಬ್ ಸಹಕಾರ ನೀಡಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ಚುಂಚಾದ್ರಿ ಮಹಿಳಾ ಬಳಗದ ಅಧ್ಯಕ್ಷೆ ವಸಂತ ಮನೀಶ್, ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ರಾಜ್‌ಕುಮಾರ್, ಸಂಘದ ನಿರ್ದೇಶಕಿ ಸುಶೀಲಾ ನಂಜಪ್ಪ ಉಪಸ್ಥಿತರಿದ್ದರು.

PUBLIC NOTICE

Notice is hereby given that Sri. Cheppudira S. Machaiah @ C.S. Arun Machaiah, son of Late Cheppudira M. Somaiah and Smt. Chandini Machaiah, wife of C.S. Arun Machaiah, are desirous to sell the Schedule Property hereunder written, to my client and any person or persons claiming any interest on the under mentioned Schedule Property or any part thereof, is hereby required to communicate the same to me, with documentary evidence at my office, situated at Door No.2765/1A D13/A1, "KEY-ANS", 5th Main Road, V.V. Puram (V.V. Mohalla), Mysore – 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY: The following Land totally measuring 13 Acres 09 Cents, situated in B. Shettigeri Village, Ponnampet Hobli, Virajpet Taluk, Kodagu District.

Item No.	Land	Sy. No.	Extent		Boundaries			
			Acres	Cents	East	West	North	South
1	Sagu	60/19	1	01	Sy.No.60/4 60/97 (old 60/7) and 60/8	Sy.No.60/34, 60/47, 60/23 & 60/21	Sy.No.60/97 (old No.60/7	Sy.No.60/44 & 60/4
2		60/12	0	25				
3		60/46	2	60				
4		60/9	3	06				
5	Sagu Bane	60/44	2	09	Sy.No.79 & 60/4	Sy.No.60/34 & Thodu	Sy.No.60/34 & 60/19	Thodu
6	Sagu Hithlu	60/45	1	00				
7	Sagu Bane	60/97 (old)60/7	2	80	Road	Sy.No.60/37 & 60/8	Sy.No.60/25 & Road	Sy.No.60/46 & 60/27
8		60/98 (old)60/24	0	28				
		Total	13	09				

Date: 01.08.2023
Place: Mysore

Sd/- Dhirendra Kumar R. Mehta
Advocate, Key-Ans Law Solutions

ನಕ್ಕರೆ ಅದೇ ಸ್ವರ್ಗ

ಹುಡುಗಿ : ಚೆನ್ನೈ ಎಕ್ಸ್‌ಪ್ರೆಸ್ ಯಾವಾಗ ಬರುತ್ತೆ?
ಟೀಸಿ : ಐದು ಗಂಟೆಗೆ
ಹುಡುಗಿ : ಲೋಕಲ್ ಯಾವಾಗ ಬರುತ್ತೆ?
ಟೀಸಿ : ಒಂಬತ್ತು ಗಂಟೆಗೆ
ಹುಡುಗಿ : ಮತ್ತೆ ಗೂಡ್ಸ್?
ಟೀಸಿ : ಒಂದು ಗಂಟೆಗೆ, ಹೌದು ನೀನು ಎಲ್ಲಿಗೆ ಹೋಗಬೇಕು?
ಹುಡುಗಿ : ಹಳಿ ಮೇಲೆ ನಿಂತು ಸೆಲ್ಫಿ ತಗೋಬೇಕು!

ಮೈಸೂರು ಮಿತ್ರ

ಬುಧವಾರ, 2 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ತಾಳ್ಮೆಯಿಂದ ಪರ್ವತವನ್ನೇ ದಾಟಬಹುದು. –ಎಮರ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾನೆದ್ದು ಮಾಡದೆ ಬದುಕಿಲ್ಲ, ಬಾಣೆದ್ದು ಹುಯ್ಯದೆ ಮಳೆಯಿಲ್ಲ.

ನಿಮ್ಮ ಪತ್ರಗಳು

ಅವೈಜ್ಞಾನಿಕ, ಕಳಪೆ ಗುಣಮಟ್ಟ ಕಾಣುತ್ತಿಲ್ಲವೆ?

ಮಾನ್ಯರೆ,

ಹಿರಿಯ ಅಧಿಕಾರಿಗಳೇ ಈ ಅಕ್ರಮ ಹಾಗೂ ಅವೈಜ್ಞಾನಿಕ ಕಾಮಗಾರಿ ತಮ್ಮ ಕಣ್ಣಿಗೆ ಕಾಣಿಸುತ್ತಾ ಇಲ್ಲವೇ?

ಮೈಸೂರಿನ ಪ್ರತಿಷ್ಠಿತ ರಸ್ತೆಗಳಲ್ಲಿ ಒಂದಾದ ಡಿ.ದೇವರಾಜ ಅರಸು ರಸ್ತೆಯಲ್ಲಿ ನಡೆಯುತ್ತಿರುವ ಕಳಪೆ ಮತ್ತು ಅವೈಜ್ಞಾನಿಕ ಕಾಮಗಾರಿ ವಿರುದ್ಧ ಕ್ರಮ ಕೈಗೊಳ್ಳಲು ಹಿರಿಯ ಅಧಿಕಾರಿಗಳು, ನಗರ ಪಾಲಿಕಾ ಸದಸ್ಯರು, ಮೈಸೂರಿನ ಮಹಾಪೌರರು, ಶಾಸಕರು, ಸಂಸದರು ಮುಂದಾಗುತ್ತಿಲ್ಲವೇಕೆ? ಈ ಹಿಂದಿನ ಮಾಜಿ ಶಾಸಕರು ಡಿ.ದೇವರಾಜ ಅರಸು ರಸ್ತೆಯನ್ನು ಅಂತಾರಾಷ್ಟ್ರೀಯ ಮಟ್ಟದ ದರ್ಜೆ ರಸ್ತೆಯನ್ನಾಗಿ ಮಾಡುವುದಾಗಿ ಘೋಷಣೆ ಮಾಡಿದ್ದರು. ಆದರೆ ಇಂದು ನಡೆಯುತ್ತಿರುವ ಕಾಮಗಾರಿಯು ಅವೈಜ್ಞಾನಿಕ ಮತ್ತು ಕಳಪೆ ಗುಣಮಟ್ಟದ್ದಾಗಿದೆ.

ಸುಮಾರು 50 ವರ್ಷಗಳ ಹಿಂದೆ ಅಂದರೆ ನೇರ ರಸ್ತೆ ನಿರ್ಮಾಣದ ಸಮಯದಲ್ಲಿ ಮಾಡಿದ್ದ ಚರಂಡಿಯು ಹೆಗ್ಗಣಗಳ ಹಾವಳಿಯಿಂದ ಕುಸಿದಿದೆ. ಆದರೆ ಸಂಬಂಧಿಸಿದವರು ಅದನ್ನು ಸರಿಪಡಿಸದೇ ಕೇವಲ ಫುಟ್‌ಪಾತ್‌ಗೆ ಬಣ್ಣದ ಟೈಲ್ಸ್ ಅಳವಡಿಸಿ ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುತ್ತಿದ್ದಾರೆ. ಇದೇ ಫುಟ್‌ಪಾತ್‌ನ ಮತ್ತೊಂದು ಕಡೆ ವಾಣಿವಿಲಾಸ ವಾಟರ್ ವರ್ಕ್ಸ್‌ನ ಮೂರು ಅಡಿ ವ್ಯಾಸದ ದೊಡ್ಡ ನೀರಿನ ಪೈಪ್ ಹಾದು ಹೋಗಿರುತ್ತದೆ. ಹೀಗೆ ಈ ರಸ್ತೆಯಲ್ಲಿ ಇನ್ನೂ ಹತ್ತು ಹಲವು ಸಮಸ್ಯೆಗಳು ಇವೆ. ಆದರೆ ಇದ್ಯಾವುದನ್ನು ಸರಿಪಡಿಸುವ ಗೋಜಿಗೆ ಹೋಗದೇ ಕೋಟಿಗೂ ಮೀರಿ ನಡೆಯುತ್ತಿರುವ ಕಾಮಗಾರಿಯ ವಿವರಣೆ, ಗುತ್ತಿಗೆದಾರ ಅಥವಾ ಕಾಮಗಾರಿ ನಡೆಸುತ್ತಿರುವ ಸಂಸ್ಥೆಯ ವಿವರಗಳೇ ಜನಸಾಮಾನ್ಯರಿಗೆ ತಿಳಿಯದಂತೆ ಗೌಪ್ಯವಾಗಿ ಅಕ್ರಮ ಕಾಮಗಾರಿ ನಡೆಸುತ್ತಿರುವುದೇ ಜೀವಂತ ಸಾಕ್ಷಿಯಾಗಿದೆ. ಆದ್ದರಿಂದ ಈ ಕೂಡಲೇ ಸಂಬಂಧಪಟ್ಟವರು ಈ ಅಕ್ರಮ ಕಾಮಗಾರಿಗಳನ್ನು ನಿಲ್ಲಿಸಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮಕೈಗೊಳ್ಳದಿದ್ದರೆ ಮೈಸೂರು ರಕ್ಷಣಾ ವೇದಿಕೆಯು ಹೋರಾಟದ ಹಾದಿಯನ್ನು ಹಿಡಿಯಬೇಕಾಗುತ್ತದೆ.

–ಎಂ.ಪಿ.ಸಚಿನ್, ಮೈಸೂರು ರಕ್ಷಣಾ ವೇದಿಕೆ, ಮೈಸೂರು.

ಸಹಕಾರ ಸಂಘಗಳಲ್ಲಿ ಠೇವಣಿ ಇಡುವ ಮುನ್ನ ಎಚ್ಚರಿಕೆ

ಮಾನ್ಯರೆ,

ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳಲ್ಲಿ, ಹಿರಿಯ ನಾಗರಿಕರು ಠೇವಣಿ ಇಡುವ ಮುನ್ನ ಇರಲಿ ಎಚ್ಚರಿಕೆ. ರಾಜ್ಯದಲ್ಲಿ ಹಲವಾರು ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳು ಗ್ರಾಹಕರು ಇಡುವ ಠೇವಣಿ ಹಣಕ್ಕೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಹೆಚ್ಚಿನ ಬಡ್ಡಿ ಕೊಡುವುದಾಗಿ ಹೇಳಿ, ಗ್ರಾಹಕರನ್ನು ವಂಚಿಸುತ್ತಿವೆ.

ಇತ್ತೀಚಿನ ಉದಾಹರಣೆಗಳೆಂದರೆ, ಬೆಂಗಳೂರಿನ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಮೈಸೂರು ಸೇರಿದಂತೆ ಹಲವಾರು ಜಿಲ್ಲಾ ಕೇಂದ್ರಗಳಲ್ಲಿ ತನ್ನ ಶಾಖೆಯನ್ನು ಹೊಂದಿರುವ ಬೆಂಗಳೂರು ನ್ಯಾಷನಲ್ ಕೋ ಅಪರೇಟಿವ್ ಬ್ಯಾಂಕ್, ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಹೆಚ್ಚಿನ ಬಡ್ಡಿ ಸಿಗುತ್ತದೆ ಎಂಬ ಆಸೆಯಿಂದ ತಾವು ಜೀವನವಿಡಿ ಕಷ್ಟಪಟ್ಟು ದುಡಿದ ಹಣವನ್ನು ಹಿರಿಯ ನಾಗರಿಕರು ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿದ್ದಾರೆ. (ಇದು ಕೇವಲ ಶೇ. ಅರ್ಧ ಅಥವಾ ಒಂದು ಪರ್ಸೆಂಟ್ ಹೆಚ್ಚಿರುತ್ತದೆ). ಸಹಕಾರಿ ಬ್ಯಾಂಕ್‌ಗಳಲ್ಲಿ ನೀವು ಎಷ್ಟೇ ಮೊತ್ತದ ಹಣವನ್ನು ಠೇವಣಿ ಇರಿಸಿದರೂ ಸಹ ರೂ. ಐದು ಲಕ್ಷದವರೆಗೆ ಮಾತ್ರ ಆರ್‌ಬಿಐ ಗ್ಯಾರಂಟಿ ನೀಡುತ್ತದೆ. ಗ್ರಾಹಕರು ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳಿಂದ ಮೋಸ ಹೋದರೆ, ಆರ್‌ಬಿಐ ತನ್ನ ಪಾತ್ರ ಏನು ಎಂಬುದನ್ನು ಸ್ಪಷ್ಟಪಡಿಸಬೇಕು.

ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದ "ಜೀವನ್ ಅಕ್ಷಯ್" ಅಥವಾ "ಜೀವನ್ ಶಾಂತಿ" ಪಿಂಚಣಿ ಯೋಜನೆಗಳಲ್ಲಿ ಗ್ರಾಹಕ ಒಮ್ಮೆ ಮಾತ್ರ ಠೇವಣಿ ಮಾಡಿ ನಿಶ್ಚಿತ ಬಡ್ಡಿ ಹಣವನ್ನು ತನ್ನ ಜೀವನದುದ್ದಕ್ಕೂ ಮತ್ತು ಆತ ಕಾಲವಾದ ನಂತರವೂ ತನ್ನ ಪತ್ನಿ, ಪತಿ ಅಷ್ಟೇ ಮೊತ್ತದ ಬಡ್ಡಿ ಹಣವನ್ನು ಪಡೆಯುವ ಯೋಜನೆಯಲ್ಲಿ ಹಿರಿಯ ನಾಗರಿಕರು ಹಣ ತೊಡಗಿಸುವುದು ಉತ್ತಮ ಆಯ್ಕೆ ಎನಿಸುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ನಮಗೂ ಕಾವೇರಿ ನೀರು ಕೊಡಿ

ಮಾನ್ಯರೆ,

ಮೈಸೂರು ನಗರದ ವರ್ತುಲ ರಸ್ತೆಯ ನಂತರದ ಹೊಸ ಲೇಔಟ್‌ಗಳಲ್ಲಿ ವಾಸವಿರುವ ಜನರು ಉಪ್ಪು ನೀರಿನ ಸಮಸ್ಯೆಯಿಂದ ಸೊರಗುತ್ತಿದ್ದಾರೆ. ಮುಡಾ ಅನುಮೋದಿತ ಲೇಔಟ್‌ಗಳ ನಿವಾಸಿಗಳಿಗೆ ಇನ್ನೂ ಕಾವೇರಿ ನೀರು ಕುಡಿಯುವ ಯೋಗ ಬಂದಿಲ್ಲ.

ಕಾವೇರಿ ನಗರ, ಹಳ್ಳಿ ಬೋಗಾದಿ, ರಾಜರಾಜೇಶ್ವರಿನಗರ, ಕೇರ್ಗಳ್ಳಿ, ಸೋಮನಾಥನಗರ ಹೀಗೆ ಎಲ್ಲೆಡೆ ಈಗ ಜನ ಬೋರ್ ನೀರು ಕುಡಿದು ಆರೋಗ್ಯ ಹಾಳು ಮಾಡಿಕೊಳ್ಳುವಂತಾಗಿದೆ. ಸ್ಥಳೀಯ ಜನಪ್ರತಿನಿಧಿಗಳೂ ಈ ಬಗ್ಗೆ ಹೆಚ್ಚಿನ ಆಸ್ಥೆ ತೋರುತ್ತಿಲ್ಲ. ವಾಟರ್ ಸಾಫ್ಟ್ನರ್ ಇಲ್ಲದೆ ಬದುಕಲು ಅಸಾಧ್ಯ ಎನ್ನುವ ಪರಿಸ್ಥಿತಿ ಇಲ್ಲಿದೆ.

ಹಳೆ ಉಂಡವಾಡಿ ಕುಡಿಯುವ ನೀರಿನ ಯೋಜನೆ ಕಾಮಗಾರಿ ಆರಂಭವಾಗಿ ಐದು ವರ್ಷ ಕಳೆದಿದೆ. ಆದರೂ ಇನ್ನೂ ಒಂದು ತೊಟ್ಟು ನೀರು ಬಂದಿಲ್ಲ. ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡುತ್ತಿರುವ ಸುದ್ದಿ ಮಾತ್ರ ಕೇಳಿ ಬರುತ್ತಿದೆ. ಅಧಿಕಾರಿಗಳು ಈಗಲಾದರೂ ಈ ಹಣ ಎಲ್ಲಿಗೆ ಖರ್ಚಾಗಿ ಹೋಗುತ್ತಿದೆ ಎಂದು ತಿಳಿಸಿದರೆ ನಾವು ಕೃತಾರ್ಥರಾಗುತ್ತೇವೆ! ಶುದ್ಧ ಕುಡಿಯುವ ನೀರು ಎಲ್ಲರ ಮೂಲ ಹಕ್ಕು. ಸಂಬಂಧಿಸಿದ ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಳ್ಳುವರೇ ಕಾಯ್ದು ನೋಡಬೇಕು.


–ಸುರಭಿ ಭಟ್, ಕೇರ್ಗಳ್ಳಿ, ಮೈಸೂರು

ಸಮುದಾಯವನ್ನು ಮೂಢನಂಬಿಕೆಯಿಂದ ಹೊರತನ್ನಿ

ಮಾನ್ಯರೇ,

ಪ್ರಸ್ತುತ 21ನೇ ಶತಮಾನಕ್ಕೆ ಸಮಾಜ ಕಾಲಿಟ್ಟಿದ್ದರು ಸಹ ಕೆಲವು ಸಮುದಾಯದ ಜನತೆ ಹಲವಾರು ನೀತಿ ನಿಯಮಗಳು, ಕಟ್ಟಳೆಗಳು, ಮೂಢನಂಬಿಕೆಯನ್ನು ಅತಿಯಾಗಿ ದಿನಚರಿಯಂತೆ ಅಳವಡಿಸಿಕೊಂಡಿದ್ದಾರೆ. ಇದರಿಂದಾಗಿ ಯಾವೆಲ್ಲ ಪರಿಣಾಮ ಬೀರಬಹುದು ಎಂಬ ಅರಿವಿಲ್ಲದ ಮುಗ್ದ ಜನರ ಮಧ್ಯ ಸಮಾಜವಿದೆ. ಇದು ಹೆಚ್ಚಾಗಿ ಬುಡಕಟ್ಟು, ಅಲೆಮಾರಿ ಸಮುದಾಯದಲ್ಲಿ ಅಡಕವಾಗಿದೆ. ಇದರ ಪರಿಣಾಮವನ್ನು ಅಲ್ಲಿ ಜನಿಸಿದ ಶಿಶುಗಳು, ಬಾಣಂತಿಯರು, ಗರ್ಭಿಣಿಯರು, ಅನುಭವಿಸುತ್ತಿದ್ದು ಪ್ರಾಣ ಹಾನಿಗೆ ಒಳಗಾಗುತ್ತಿದ್ದಾರೆ. ಇದನ್ನು ಆರೋಗ್ಯ ಇಲಾಖೆಯು ಅರಿತುಕೊಂಡು ಬುಡಕಟ್ಟು ಜನರನ್ನು ಅವರ ವಾಸ ಸ್ಥಳದಿಂದ ಹೊರ ತರುವುದರ ಜೊತೆಗೆ ಅವರ ಮೂಢನಂಬಿಕೆಗಳನ್ನು ಮೊಟಕುಗೊಳಿಸುವಂತಹ ವಾಸ್ತವ ಘಟನೆಗಳನ್ನು ತಿಳಿಯಪಡಿಸುವಲ್ಲಿ ಮುಂದಾಗುವುದು ಅನಿವಾರ್ಯ.

–ಕೆ.ಎನ್.ಅನುಶ್ರೀ, ಮಾನಸಗಂಗೋತ್ರಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ನಾಗಲಕ್ಷ್ಮೀ ಹರಿಹರೇಶ್ವರರ ನೆನಪು



ಈ ಜಗತ್ತಿನಲ್ಲಿ ಎಲ್ಲರೂ ಅಶಾಶ್ವತ. ಜಾತಸ್ಯ ಮರಣಂ ಧ್ರುವಮ್. ಈಗ ನಾಗಲಕ್ಷ್ಮೀ ಮತ್ತು ಹರಿಹರೇಶ್ವರ ದಂಪತಿಗಳು ನಮ್ಮೊಡನೆ ಇಲ್ಲ. ಸಂಸ್ಕೃತಿ ಪ್ರಪಂಚದಲ್ಲಿ, ಸಾಹಿತ್ಯ ಜಗತ್ತಿನಲ್ಲಿ ಪ್ರಕಾಶಮಾನರಾಗಿದ್ದ ಅವರಿಬ್ಬರೂ ಅಸಂಖ್ಯೇಯ ಕನ್ನಡಿಗರ ಹೃದಯಗಳಲ್ಲಿ ಪ್ರತಿಷ್ಠಾಪಿತರಾಗಿದ್ದಾರೆ. ಪ್ರಾತಃಸ್ಮರಣೀಯರಾದ ಆ ಆದರ್ಶ ದಂಪತಿಗಳ ನೆನಪಿಗಾಗಿ ಒಂದು ಕಾರ್ಯಕ್ರಮವನ್ನು ಗಾನಭಾರತೀ ಸಭಾಂಗಣದಲ್ಲಿ ಶನಿವಾರದಂದು (29.7.2023) ಏರ್ಪಡಿಸಲಾಗಿತ್ತು. ಅವರೊಡನೆ ನಿಕಟಸಂಪರ್ಕವಿದ್ದವರು, ಅವರ ಸಾಹಿತ್ಯವನ್ನು ಮೆಚ್ಚಿದವರು, ಅವರ ಪರಿಶುದ್ಧ ಜೀವನದಿಂದ ಪ್ರಭಾವಿತರಾದವರು, ಅವರ ನೆರವಿನಿಂದ ಏಳ್ಗೆಯನ್ನು ಹೊಂದಿದವರು, ಬಂಧುಗಳು, ಮಿತ್ರರು ಬಂದು ಮಾತನಾಡಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಜಯಂತಿ ತೇ ಸುಕೃತಿನೋ
ರಸಸಿದ್ಧಾಃ ಕವೀಶ್ವರಾಃ।
ನಾಸ್ತಿ ತೇಸಾಂ ಯಶಃ ಕಾಯೇ
ಜರಾಮರಣಜಂ ಭಯಮ್॥

(ರಸಸಿದ್ಧರಾದ, ಧನ್ಯತಮರಾದ ಶ್ರೇಷ್ಠ ಕವಿಗಳು ಸದಾ ಜಯಶಾಲಿಗಳು. ಅವರ ಕೀರ್ತಿ ಶರೀರಕ್ಕೆ ಮುಪ್ಪು ಸಾವುಗಳ ಭಯವಿಲ್ಲ) ಎಂಬ ಮಾತು ನಾಗಲಕ್ಷ್ಮೀ ಹರಿಹರೇಶ್ವರರ ವಿಷಯದಲ್ಲಿ ಸತ್ಯವಾಗಿದೆ.

ಕಷ್ಟದ ಹಾದಿ : ಹರಿಹರೇಶ್ವರರಾಗಲಿ ನಾಗಲಕ್ಷ್ಮಿಯವರಾಗಲಿ ಸಿರಿವಂತರ ಮನೆತನದಲ್ಲಿ ಹುಟ್ಟಿದವರಲ್ಲ. ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದವರಲ್ಲ. ಅವರ ಜೀವನ ಚರಿತ್ರೆಗಳನ್ನು ಓದಿದವರಿಗೆ ಚಿಕ್ಕಂದಿನಲ್ಲಿ ಅವರು ಪಟ್ಟ ಕಷ್ಟಗಳ ಪರಿಚಯವಾಗುತ್ತದೆ. ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ– ಎಂಬ ಕವಿವಾಣಿಯಂತೆ ಅವರು ಎಡರು ತೊಡರುಗಳನ್ನು ಎದುರಿಸಿ ವಿದ್ಯಾರ್ಜನೆಯನ್ನು ಮಾಡಿದ ವಿಷಯ ನಮಗೆ ಅರಿವಾಗುತ್ತದೆ. ಹರಿಹರೇಶ್ವರ ಇರಾನಿನಲ್ಲೂ ಅಮೆರಿಕದಲ್ಲೂ ಉದ್ಯೋಗ ಮಾಡಿದರು. ಅಲ್ಲೂ ಅವರದು ಸುಗಮ ಸಂಚಾರವಲ್ಲ. ಹಲವು ಬಾರಿ ಉದ್ಯೋಗವನ್ನು ಕಳೆದುಕೊಂಡರು. ಊರಿಂದ ಊರಿಗೆ ನಿವಾಸವನ್ನು ಬದಲಾಯಿಸಿದರು. ಎಂಥ ಕಷ್ಟ ಬಂದರೂ ಅವರು ಎದೆಗುಂದಲಿಲ್ಲ. ಅವರಿಗೆ ನಾಗಲಕ್ಷ್ಮೀಯವರದೇ ಬೆಂಬಲ. ಅವರು ಆದರ್ಶ ದಂಪತಿಗಳಾಗಿ ಆಪತ್ತುಗಳನ್ನು ದಾಟಿ ಜಯ ಪಡೆದವರು.

ಕನ್ನಡ ಪ್ರೀತಿ

ಹರಿಹರೇಶ್ವರ ಅನೇಕ ಭಾಷೆಗಳನ್ನು ಬಲ್ಲವರಾಗಿದ್ದರು. ಕನ್ನಡ, ಇಂಗ್ಲಿಷ್, ಸಂಸ್ಕೃತ– ಈ ಮೂರು ಭಾಷೆಗಳ ಮೇಲೆ ಅವರಿಗೆ ಪ್ರಭುತ್ವವಿತ್ತು. ಇಂಗ್ಲಿಷ್‌ನಿಂದ, ಸಂಸ್ಕೃತದಿಂದ ಅವರು ಹಲವು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದಲ್ಲೂ ಸ್ವತಂತ್ರವಾಗಿ ಬರೆದಿದ್ದಾರೆ. ನಾಗಲಕ್ಷ್ಮೀ ಹರಿಹರೇಶ್ವರರು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಸೇವೆ ಅನನ್ಯ ಸಾಧಾರಣ. ಹರಿಹರೇಶ್ವರರ ನೆನಪಿಗಾಗಿ 2017ರಲ್ಲಿ ಅವರು ಹರಿ ಎಂಬ ಸಂಸ್ಮರಣ ಗ್ರಂಥವನ್ನೇ ಹೊರತಂದರು. ಹರಿಯ ಕಾಣಿಕೆ ಎಂಬ ಎರಡು ಸಂಪುಟಗಳ ಸಂಚಿಕೆಯನ್ನು ಪ್ರಕಟಿಸಿದರು. ಹರಿಹರೇಶ್ವರರ ಆತ್ಮಕಥೆ 'ಮೌನ ಮಾತನಾಡಿಸಿದಾಗ' ಅಪೂರ್ಣವಾಗಿತ್ತು ಅದನ್ನೂ ಪೂರ್ಣ ಮಾಡಿ 2014ರಲ್ಲಿ ಪ್ರಕಟಿಸಿದರು. ತಮ್ಮ ಆತ್ಮಕಥೆ ಯಾತ್ರಿ ಎಂಬುದನ್ನು ಅನಾರೋಗ್ಯ ಕಾಡುತ್ತಿದ್ದರೂ ಬರೆದು (ಅಥವಾ ಹೇಳಿ ಲಿಪಿಬದ್ಧಗೊಳಿಸಿ) 2020ರಲ್ಲಿ ಪ್ರಕಾಶನ ಮಾಡಿದರು.

ಅಮೆರಿಕನ್ನಡ ಹರಿಹರೇಶ್ವರರ ಸಾಹಸಗಳಲ್ಲೆಲ್ಲ ದೊಡ್ಡದೆಂದರೆ ಅವರು ಅಮೆರಿಕದಲ್ಲಿದ್ದಾಗ ಅಮೆರಿಕನ್ನಡ ಎಂಬ ಪತ್ರಿಕೆಯನ್ನು ನಡೆಸಿದ್ದು ಎನ್ನಬಹುದು. ಅಮೆರಿಕದಲ್ಲಿದ್ದ ನಾನಾ ಕನ್ನಡಿಗರನ್ನು ಸಂಪರ್ಕಿಸಿ ಅವರಿಂದ ಲೇಖನಗಳನ್ನು ಬರೆಯಿಸಿ ವಿದೇಶದಲ್ಲೂ ಮಾತೃಭಾಷೆಯ ಪ್ರೀತಿ ಕುಗ್ಗದಂತೆ, ತಗ್ಗದಂತೆ ನೋಡಿಕೊಂಡದ್ದು ಎನ್ನಬಹುದು. ಈ ಕೆಲಸ ಬೇರೆ ಯಾರೂ ಮಾಡಲು ಶಕ್ಯವಲ್ಲದ್ದು. ಇದಕ್ಕಾಗಿ ಅವರು ಮಾಡಿಕೊಂಡ ಆರ್ಥಿಕ ಹಾನಿ ಅಷ್ಟಿಷ್ಟಲ್ಲ.

ಅನುವಾದ ಕೌಶಲ ಹರಿಹರೇಶ್ವರರು ಅನುವಾದದಲ್ಲಿ ಎತ್ತಿದ ಕೈ. ಭಾಷಾಂತರ ಅವರಿಗೆ ಎಂದೂ ಕಷ್ಟವೆನಿಸಲಿಲ್ಲ. ವೇದ ಮಂತ್ರಗಳಾಗಲೀ, ಇಂಗ್ಲಿಷ್ ಪದ್ಯಗಳೇ ಆಗಲಿ ಅದು ಚೆನ್ನಾಗಿದೆ ಎಂದರೆ ಅದನ್ನು ಕನ್ನಡಿಸಲು ಅವರು ಇಷ್ಟಪಡುತ್ತಿದ್ದರು. ಭಗವದ್ಗೀತೆಯ ಒಂದು ಶ್ಲೋಕ ಆತ್ಮವನ್ನು ಹೀಗೆ ವರ್ಣಿಸಿದೆ–

ನೈನಂ ಛಿಂದಂತಿ ಶಸ್ತ್ರಾಣಿ
ನೈನಂ ದಹತಿ ಪಾವಕಃ।
ನ ಚೈನಂ ಕ್ಲೇದಯಂತ್ಯಾಪೋ
ನ ಶೋಷಯು ಮಾರುತಃ॥

ಇದನ್ನು ಹರಿಹರೇಶ್ವರರು ಇಂತು ಅನುವಾದಿಸಿದ್ದಾರೆ –

ಎಂಥದಿದು ಈ ಆತ್ಮ, ಏನು
ಸೋಜಿಗವಯ್ಯ!
ಶಸ್ತ್ರಗಳು ತುಂಡರಿಸಲಳವಲ್ಲ ಇರಿದು;
ಬೆಂಕಿ ಏನೂ ಸುಡದು' ತೋಯಿಸದು ನೀರು;
ಗಾಳಿ ಒಣಗಿಸದಂಥ ವಸ್ತುವಿದು ಹಿರಿದು।

ಭಗವದ್ಗೀತೆಯ ಇನ್ನೊಂದು ಶ್ಲೋಕ–

ಯದ್ ಯದ್ ವಿಭೂತಿಮತ್
ಸತ್ತ್ವಂ ಶ್ರೀಮದೂರ್ಜಿತಮೇವ ವಾ।
ತತ್ತದೇವಾವಗಚ್ಛ ತ್ವಂ ಮಮ
ತೇಜೋಂಶ ಸಂಭವಮ್॥

ಹರಿಹರೇಶ್ವರರು ಇದರ ಭಾವಾನುವಾದವನ್ನು ಮಾಡಿದ್ದಾರೆ –

ಅಸಾಮಾನ್ಯ ಪ್ರಭೆ,
ಶಕ್ತಿ ಎಲ್ಲೆಲ್ಲಿ ತೋರುವುದೋ
ಎಲ್ಲಿ ಸುಡುಗತ್ತಲನು ತೂರಿ
ಬರುವುದೋ ಬೆಳಕು,
ಸುಖದುಃಖ ನೊರೆ–ಅಲೆಯ
ಈ ಕಡಲ ಒಡಲಿನಲಿ
ಬಿಡುಗಡೆಯ ಆ ಕಡೆಗೆ ನಡೆಯೆ
ಸೇತುವೆಯೊಂದ
ಹೂಡಿ, ಬೆಂಗಾಡಿನ
ನಡುವೆ ಹೆದ್ದಾರಿ ತೋಡುವನೋ
ಅಡ್ಡ ಕಳೆ ಕೊಳೆ ಮುಳಿವನ್ನ
ಕುಟ್ಟಿ ಹುಡಿ ಹುಡಿ ಮಾಡಿ
ಹತ್ತಲೆತ್ತರ ಬೆಟ್ಟ ಮೆಟ್ಟಿಲನು ಕಟ್ಟುವನೊ
ಬೀಸುವುದೊ ಎಲ್ಲಿ ಶಾಂತಿಯ ಕಂಪು,
ನೆಮ್ಮದಿಯ ತಂಪು
ಅಲ್ಲೆಲ್ಲ ದೈವಾಂಶ ತೇಜದ ಬೀಜ
ಮೊಳೆವುದು ಕಾಣ।

ಮೂಲದಲ್ಲಿ ಕಡಲು, ಸೇತುವೆ, ಬೆಂಗಾಡು, ಬೆಟ್ಟ–ಇವು ಯಾವುಗಳನ್ನೂ ವಾಚ್ಯವಾಗಿ ಹೇಳಿಲ್ಲ. ಊರ್ಜಿತಮ್ ಎಂಬ ಪದದಲ್ಲಿ ಅವು ಗೂಢವಾಗಿ ಸೂಚ್ಯವಾಗಿ ನಿಂತಿವೆ. ಅವನ್ನೆಲ್ಲ ಅಭಿವ್ಯಂಜಿಸಿದ್ದಾರೆ ಹರಿಹರೇಶ್ವರರು. ಅನೇಕರು ಕೇಳಬಹುದು–ಅನುವಾದಕರಿಗೆ ಮೂಲ ಗ್ರಂಥವನ್ನು ವಿಸ್ತರಿಸುವ ಸ್ವಾತಂತ್ರ್ಯವಿಲ್ಲ ಎಂದು. ಆದರೆ ಹೀಗೆ ಮೂಲದಲ್ಲಿ ಮುಚ್ಚಿಟ್ಟ ವಿಷಯಗಳನ್ನು ಬಿಚ್ಚಿಡುವ ಅನುವಾದವೇ ನಮಗೆ ಬೇಕು. ಇಂತಹ ಅನುವಾದ ಸಿಕ್ಕಿದರೆ ಆಮೇಲೆ ಭಾಷ್ಯ ಬೇಕಾಗುವುದಿಲ್ಲ. ನಾಗಲಕ್ಷ್ಮೀಯವರ ಕನ್ನಡದ ಬರವಣಿಗೆ ಆಕರ್ಷಕವಾಗಿಯೂ ಸರಳವಾಗಿಯೂ ಮಿನುಗುತ್ತದೆ. ಯಾತ್ರಿ ಎಂಬ ಅವರ ಆತ್ಮಚರಿತೆಯಲ್ಲಿ ಅವರ ಗದ್ಯದ ಶೈಲಿಯನ್ನು ನೋಡಬಹುದು.

"ಕುಬೇರರ ರಾಜ್ಯಕ್ಕೆ ವಲಸೆ"

ಬೆಂಗಳೂರಿಂದ ಮದ್ರಾಸಿಗೆ, ಅಲ್ಲಿಂದ ಲಂಡನ್ನಿಗೆ, ಅನಂತರ ನ್ಯೂಯಾರ್ಕಿಗೆ ತಲುಪಿ ಅಲ್ಲಿಂದ ಓಕ್ಲಹಾಮಾಗೆ ಹೋಗಬೇಕಿತ್ತು. ಇರಾನ್‌ನಿಂದ ಎರಡು ಮೂರು ಸಾರಿ ಭಾರತಕ್ಕೆ ಬಂದು ಹೋಗಿದ್ದ ನನಗೆ ವಿಮಾನ ಪ್ರಯಾಣವು ಹೊಸದೇನಾಗಿರಲಿಲ್ಲ. ಆದರೂ ಏನೋ ಭಯ, ಕಳವಳ. ಒಂಟಿ ಪ್ರಯಾಣ ಮಾಡುತ್ತಿದ್ದೇನೆಂಬ ಅಂಜಿಕೆ. ನೋಡದ ತಾಣವೆಂಬ ಅನಿಸಿಕೆ. ಇದೇ ಗುಂಗಿನಲ್ಲಿ ಓಕ್ಲ ಹಾಮಾ ತಲುಪಿದೆ. ಅಲ್ಲಿ ಹರಿ ಮತ್ತು ಗೆಳೆಯರಾದ ಮಯ್ಯರವರು ನನಗಾಗಿ ಕಾಯುತ್ತಿದ್ದರು. ಅಲ್ಲಿಂದ ತಮ್ಮ ಕಾರಿನಲ್ಲಿ ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮಯ್ಯರವರ ಪತ್ನಿ ಲಿಲೂ ನಮಗಾಗಿ ಅಡುಗೆ ಸಿದ್ಧಪಡಿಸಿಕೊಂಡು ಕಾಯುತ್ತಿದ್ದರು. ಅಲ್ಲೇ ಊಟೋಪಚಾರವಾಯಿತು. ನಂತರ ನಮ್ಮ ಮನೆಗೆ ಹೋದೆವು. ಹೀಗೆ ನಾನು ಅಮೆರಿಕಕ್ಕೆ ಪದಾರ್ಪಣೆ ಮಾಡಿದೆ. (ಪು.53)

ಹೀಗೆ ದಂಪತಿಗಳು ಸಮಾನಾಭಿರುಚಿಯನ್ನು ಹೊಂದಿ ಸಾಹಿತ್ಯ ಸೇವೆಯಲ್ಲಿ ತೊಡಗಿರುವ ಸಂದರ್ಭಗಳು ಅತಿವಿರಳ. 2010ರಲ್ಲಿ ಹರಿಹರೇಶ್ವರು ವಿಧಿವಶರಾದ ಮೇಲೂ ಅವರಿಗೆ ಇಷ್ಟವಾಗಿದ್ದ ಯಾವ ಕೆಲಸಗಳನ್ನೂ ನಿಲ್ಲಿಸದೆ ನಾಗಲಕ್ಷ್ಮಿಯವರು ಮುಂದುವರಿಸಿದುದು ಪ್ರಶಂಸಾರ್ಹ.

ಕನ್ನಡದ ಕಾರ್ಯಗಳಿಗೆ ನೆರವು

ನಾಗಲಕ್ಷ್ಮೀ ಹರಿಹರೇಶ್ವರ ದಂಪತಿಗಳು ಕನ್ನಡದ ಸಮಸ್ತ ಕಾರ್ಯಗಳಿಗೂ ಕಾಯೇನ ವಾಚಾ ಮನಸಾ ನೆರವನ್ನು ನೀಡುತ್ತಿದ್ದರು. ಹೊಳಲ್ಕೆರೆ ರಂಗರಾವ್ ಚಂದ್ರಶೇಖರ್ ಅವರು ಕರ್ಣಾಟಕ ಭಾಗವತವೆಂಬ ಪ್ರಾಚೀನ ಮಹಾಗ್ರಂಥವನ್ನು ಪ್ರಕಟಿಸಲು ಪ್ರಯತ್ನಿಸಿದಾಗ 2005ರಲ್ಲಿ ಅದಕ್ಕಾಗಿ ಸಂಪಾದಕ ಮಂಡಳಿಯನ್ನು ರಚಿಸುವುದಕ್ಕಾಗಿ ಸಭೆಯು ಹರಿಹರೇಶ್ವರರ ಮನೆಯಲ್ಲೇ ಜರುಗಿತು. ಸಾಹಿತ್ಯ ಪ್ರಿಯರ ಅನೇಕ ಕೂಟಗಳೂ ಅವರ ಗೃಹದಲ್ಲೇ ನಡೆದವು. ಕನ್ನಡದ ಕೆಲಸವೆಂದರೆ ಅದು ತಮ್ಮ ಕೆಲಸವೆಂದು ಭಾವಿಸುತ್ತಿದ್ದ ಪುಣ್ಯ ದಂಪತಿಗಳವರು. ಸಾಹಿತಿಗಳನ್ನು ಆದರಿಸುವುದು, ಗೌರವಿಸುವುದು ಅವರಿಗೆ ಸಹಜಗುಣವಾಗಿತ್ತು. ಅವರ ಮನೆಯಲ್ಲಿ ನಡೆದ ಕನ್ನಡ ಕಾರ್ಯಕ್ರಮಗಳು ಎಷ್ಟೆಂದು ಹೇಳಲಾಗದು.

ಹರಿಹರೇಶ್ವರರು ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಕನ್ನಡದಲ್ಲಿ ಬರೆದರು. ಏಳು ಗ್ರಂಥಗಳಿಗೆ ಪ್ರಧಾನ ಸಂಪಾದಕರಾಗಿದ್ದರು. ಅಮೆರಿಕದ ಅಕ್ಕ ವಿಶ್ವ ಕನ್ನಡ ಸಮ್ಮೇಳನದ ನಾಲ್ಕು ಸ್ಮರಣ ಸಂಚಿಕೆಗಳ ಸಹ ಸಂಪಾದಕರಾಗಿದ್ದರು. ನಿಜವಾದ ಕನ್ನಡ ಸೇವೆ ಅಂದರೆ ಇದೇ ಅಲ್ಲವೆ?

ನಾಗಲಕ್ಷ್ಮೀ ಹರಿಹರೇಶ್ವರ ದಂಪತಿಗಳು ಈಗ ಸ್ವರ್ಗದಲ್ಲಿದ್ದಾರೆ. ಅಲ್ಲೂ ಅವರು ಕನ್ನಡದ ಕೆಲಸ ಮಾಡುತ್ತಿದ್ದಾರೆ. ಇಂದ್ರ, ಅಗ್ನಿ ಮುಂತಾದ ದೇವತೆಗಳಿಗೆ ಕನ್ನಡವನ್ನು ಕಲಿಸುತ್ತಿದ್ದಾರೆ ಎಂದು ನನ್ನ ನಂಬಿಕೆ.

ಸಿರಿಗನ್ನಡಂ ಗೆಲ್ಗೆ!

ಮೈಸೂರಿನ ಶಾರದಾದೇವಿನಗರ ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗೆ ಗ್ರಹಣ

- ಆರು ವರ್ಷವಾದರೂ ಪೂರ್ಣಗೊಳ್ಳದ ಕಾಮಗಾರಿ
- 2017ರಲ್ಲಿ ಗುದ್ದಲಿಪೂಜೆ ನೆರವೇರಿಸಿದ್ದ ಸಿಎಂ, ಹೆಚ್‌ಸಿಎಂ
- ಕ್ರೀಡಾಂಗಣ ಜತೆಗೆ ಈಜುಕೊಳ ನಿರ್ಮಿಸಲು ಜನರ ಒತ್ತಡ



ಮೈಸೂರು,ಆ.1(ಎಸ್‌ಪಿಎನ್)– ಮೈಸೂರಿನ ಶಾರದಾದೇವಿನಗರದಲ್ಲಿ ಕಳೆದ ಆರು ವರ್ಷಗಳ ಹಿಂದೆ ಆರಂಭವಾದ ಒಳಾಂಗಣ ಕ್ರೀಡಾಂಗಣ ಕಾಮಗಾರಿ ಆಮೆಗಿಂತಲೂ ಮಂದ ವೇಗದಲ್ಲಿ ಸಾಗುತ್ತಿದೆ.

ಪಿಪಿಪಿ ಮಾದರಿಯಲ್ಲಿ (45ನೇ ವಾರ್ಡ್) ಒಳಾಂಗಣ ಕ್ರೀಡಾಂಗಣಕ್ಕೆ (ಆಕ್ಮಿ ಶಾಲೆ ಪಕ್ಕ) ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಆದರೆ ಪೂಜೆ ನೆರವೇರಿಸಿದರೂ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ.

2017ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಹೆಚ್.ಸಿ.ಮಹದೇವಪ್ಪ ಸುಮಾರು 4.43 ಕೋಟಿ ರೂ. ವೆಚ್ಚದಲ್ಲಿ ಬ್ಯಾಡ್ಮಿಂಟನ್ ಕೋರ್ಟ್, ಈಜುಕೊಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ್ದರು. ಆರು ವರ್ಷಗಳಾದರೂ ಕಾಮಗಾರಿ ಪೂರ್ಣಗೊಳಿಸಲೇ ಇಲ್ಲ. ಈ ಬಗ್ಗೆ ಕೇಳಿದರೆ ತಾಂತ್ರಿಕ ಕಾರಣಗಳ ನೆಪವೊಡ್ಡುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅನುದಾನ ಕೊರತೆಯಿಂದಾಗಿ ಈಜುಕೊಳ ಕಾಮಗಾರಿಯನ್ನು ಕೈಬಿಟ್ಟು ಕೇವಲ ಎರಡು ಕೋಟಿ ರೂ. ವೆಚ್ಚದಲ್ಲಿ ಬ್ಯಾಡ್ಮಿಂಟನ್ ಕೋರ್ಟ್ ಕಾಮಗಾರಿ ಆರಂಭಿಸಲಾಗಿತ್ತು. ತಿಣುಕಾಡಿ, ಕುಂಟುತ್ತಾ ಸಾಗಿ ಈ ಮುಗಿಯುವ ಹಂತಕ್ಕೆ ಬಂದು ನಿಂತಿದೆ. ಆದರೆ ಇಲ್ಲಿ ಈಜುಕೊಳ ಬೇಕೇ ಬೇಕು ಎಂದು ಸಾರ್ವಜನಿಕರು ಒತ್ತಡ ಹಾಕುತ್ತಿದ್ದಾರೆ. ನಗರಪಾಲಿಕೆಯಿಂದ ಇಷ್ಟೊಂದು ಅನುದಾನ ಕಲ್ಪಿಸಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ.

ತ್ಯಾಜ್ಯ ಶೇಖರಣೆ: ಇಲ್ಲಿನ ಕ್ರೀಡಾಂಗಣ ಬಳಕೆಯಾಗದ ಹಿನ್ನೆಲೆಯಲ್ಲಿ ಈ ಜಾಗದಲ್ಲಿ ಗಿಡ–ಗಂಟಿ ಬೆಳೆದು, ಹಾವು–ಚೇಳುಗಳ ಆವಾಸ ಸ್ಥಾನವಾಗಿದೆ. ಇದರಿಂದ ಈ ಭಾಗದ ಮನೆಗಳಿಗೆ ಆಗಾಗ ನುಗ್ಗುತ್ತಿರುತ್ತವೆ. ಆದಷ್ಟು ಬೇಗನೆ ಈ ತ್ಯಾಜ್ಯವನ್ನು ವಿಲೇವಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸಾರ್ವಜನಿಕರು ಮನವಿ ಮಾಡಿದ್ದಾರೆ.





ಈಜುಕೊಳ ಬೇಕೇಬೇಕು: ಮೈಸೂರಿನಲ್ಲಿ ಸರಸ್ವತಿಪುರಂ ಈಜುಕೊಳ (ವಿವಿ ವ್ಯಾಪ್ತಿಯ) ಜೆ.ಪಿ.ನಗರ ಈಜುಕೊಳ (ಪಿಪಿಪಿ ಮಾಡಲ್), ಚಾಮುಂಡಿ ವಿಹಾರ ಸ್ಟೇಡಿಯಂ ಈಜುಕೊಳ ಮಾತ್ರ ಕಾರ್ಯ ನಿರ್ವಹಣೆಯಾಗುತ್ತಿವೆ. ಆದರೆ, ಶಾರದಾದೇವಿನಗರ ಭಾಗದ ಜನರಿಗೆ ಈಜುಕೊಳ ಅವಶ್ಯವಿದೆ. ಪಾಲಿಕೆ ಹಂತದಲ್ಲಿ ಹೋರಾಟ ಮಾಡುತ್ತೇವೆ ಎನ್ನುತ್ತಾರೆ ಜೆಡಿಎಸ್ ಮುಖಂಡ ಹರೀಶ್.

> "ಕಳೆದ ಆರು ವರ್ಷಗಳ ಹಿಂದೆ ಬ್ಯಾಡ್ಮಿಂಟನ್ ಕೋರ್ಟ್ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಇದೀಗ ಈ ಕಾಮಗಾರಿ ಮುಗಿಯುವ ಹಂತ ತಲುಪಿದ್ದು, ಅತಿ ಶೀಘ್ರದಲ್ಲೇ ಈ ಕಟ್ಟಡ ಉದ್ಘಾಟನೆಗೆ ಸಿದ್ಧಗೊಳ್ಳುತ್ತದೆ.
>
> **–ನಿರ್ಮಲ ಹರೀಶ್, ಸದಸ್ಯರು ಮೈಸೂರು ಮಹಾ ನಗರಪಾಲಿಕೆ**

> "ಶಾಂತಲಾ ಟಾಕೀಸ್ ಬಳಿಯ ಈಜುಕೊಳ ನವೀಕರಣ, ನಿವೇದಿತಾ ನಗರ, ಹೆಬ್ಬಾಳದಲ್ಲಿ ಪಿಪಿಪಿ ಮಾಡೆಲ್‌ನಲ್ಲಿ ಈಜುಕೊಳ ಮಾಡಲು 2017ರಲ್ಲೇ ಸಿದ್ಧತೆ ಮಾಡಲಾಗಿತ್ತು. ಕಾರಣಾಂತರಗಳಿಂದ ಈ ಕಾಮಗಾರಿ ನನೆಗುದಿಗೆ ಬಿದ್ದಿದೆ. ಅಲ್ಲದೆ ಒಳಾಂಗಣ ಕ್ರೀಡಾಂಗಣ ಕಾಮಗಾರಿ ಕೈಗೊಳ್ಳಲು 2017ರಲ್ಲಿ ಸಿದ್ದರಾಮಯ್ಯರವರು ಮುಖ್ಯಮಂತ್ರಿಯಾಗಿದ್ದಾಗ ವಿಶೇಷ ಅನುದಾನದಿಂದ ಕೋಟಿ ರೂ. ಬಿಡುಗಡೆ ಮಾಡಿದ್ದರು. ಅದರಲ್ಲಿ ಕಾಂಪೌಂಡ್ ನಿರ್ಮಾಣ ಹಾಗೂ ಉಳಿದ ಅನುದಾನ ದಲ್ಲಿ ಕಟ್ಟಡ ನಿರ್ಮಾಣಕ್ಕೆ ಬಳಕೆಯಾಗಿದೆ.
>
> **–ಜಗದೀಶ್, ಮಾಜಿ ಸದಸ್ಯ, ಮೈಸೂರು ನಗರಪಾಲಿಕೆ**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಬುಧವಾರ 2 ಆಗಸ್ಟ್ 2023

ಮೈಸೂರು ಅರಮನೆ ವೀಕ್ಷಿಸಿದ ಥಿಂಕ್ 20 ಶೃಂಗ ಸಭೆ ಪ್ರತಿನಿಧಿಗಳು

ಇಂದು ಶ್ರೀರಂಗಪಟ್ಟಣ ಪ್ರವಾಸ, ಸಂಜೆ ಮೈಸೂರು ಅರಮನೆ ವಿದ್ಯುತ್ ದೀಪಾಲಂಕಾರ ವೀಕ್ಷಣೆ

ಮೈಸೂರು, ಆ.1(ಆರ್‌ಕೆ)– ಜಿ–20 ಶೃಂಗ ಸಭೆ ಅಂಗವಾಗಿ ಮೈಸೂರಿನಲ್ಲಿ ನಡೆಯುತ್ತಿರುವ ಥಿಂಕ್ 20 ಶೃಂಗ ಸಭೆಯಲ್ಲಿ ಪಾಲ್ಗೊಂಡಿರುವ ವಿದೇಶಿ ಪ್ರತಿನಿಧಿಗಳು ಮಂಗಳವಾರ ಸಂಜೆ ಅಂಬಾವಿಲಾಸ ಅರ ಮನೆಗೆ ಭೇಟಿ ನೀಡಿದರು.

ಸಂಜೆ 4.45 ಗಂಟೆಗೆ ಅರಮನೆಗೆ 5 ಬಸ್ಸುಗಳಲ್ಲಿ ಆಗಮಿಸಿದ 180 ಮಂದಿ ವಿದೇಶಿ ಗಣ್ಯರನ್ನು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ಆತ್ಮೀಯವಾಗಿ ಬರಮಾಡಿಕೊಂಡು ಅಂಬಾವಿಲಾಸ ಅರಮನೆಗೆ ಕರೆದೊಯ್ದು ವೀಕ್ಷಣೆಗೆ ಅನುವು ಮಾಡಿಕೊಟ್ಟರು.

ಅರಮನೆ ಪ್ರವಾಸಿ ಮಾರ್ಗದರ್ಶಿಗಳು ವಿದೇಶಿಗರಿಗೆ ಅವರ ಭಾಷೆಗಳಲ್ಲಿ ಅಂಬಾ ವಿಲಾಸ ಅರಮನೆ ಇತಿಹಾಸ, ಹಿನ್ನೆಲೆ, ಮೈಸೂರು ರಾಜ್ಯವನ್ನು ಆಳಿದ ರಾಜ–ಮಹಾರಾಜರು ನೀಡಿದ ಕೊಡುಗೆ, ವಂಶಪಾರಂಪರ್ಯ ಆಡಳಿತ, ಪ್ರಸ್ತುತ ರಾಜ ಮನೆತನದ ಸದಸ್ಯರ ಪರಿಚಯ ಮಾಡಿಕೊಟ್ಟರು. ನಂತರ ಸಂಜೆ 6.45ಕ್ಕೆ ಎಲ್ಲಾ ಗಣ್ಯರನ್ನು ಬಿಗಿ ಪೊಲೀಸ್ ಭದ್ರತೆಯಲ್ಲಿ ಅವರು ಉಳಿದುಕೊಂಡಿರುವ ರ್‍ಯಾಡಿಸನ್ ಬ್ಲೂ ಪ್ಲಾಜಾ ಹಾಗೂ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲಿಗೆ ಕರೆ ದೊಯ್ಯಲಾಯಿತು. ನಾಳೆ (ಬುಧವಾರ) ಬೆಳಗ್ಗೆ ಶ್ರೀರಂಗಪಟ್ಟಣ ಪ್ರವಾಸ ಕೈಗೊಳ್ಳಲಾಗಿದ್ದು, ಟಿಪ್ಪು ಸುಲ್ತಾನ್, ದರಿಯಾ ದೌಲತ್, ಶ್ರೀರಂಗನಾಥಸ್ವಾಮಿ ದೇವಸ್ಥಾನ, ಕೆಆರ್‌ಎಸ್ ವೀಕ್ಷಿಸಿ ಮೈಸೂರಿಗೆ ಹಿಂದಿರುಗುವ ವಿದೇಶಿ ಅತಿಥಿಗಳು, ರಾತ್ರಿ ಅರಮನೆ ವಿದ್ಯುದ್ದೀಪಾಲಂಕಾರ ವೀಕ್ಷಿಸುವರು.

ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ, ಥಿಂಕ್–20 ಶೃಂಗ ಸಭೆಯ ಪ್ರತಿನಿಧಿಗಳನ್ನು ಪ್ರವಾಸಕ್ಕೆ ಕರೆದೊಯ್ಯುವ ಜವಾಬ್ದಾರಿ ನಿರ್ವಹಿಸುತ್ತಿದ್ದು, ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು ಭದ್ರತಾ ವ್ಯವಸ್ಥೆ ಮಾಡಿದ್ದಾರೆ.





ವಿದೇಶಿ ಗಣ್ಯರನ್ನು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ಆತ್ಮೀಯವಾಗಿ ಬರಮಾಡಿಕೊಂಡು ಅಂಬಾವಿಲಾಸ ಅರಮನೆಗೆ ಕರೆದೊಯ್ದು ಅಲ್ಲಿನ ವೈಶಿಷ್ಟ್ಯತೆಯನ್ನು ವಿವರಿಸಿದರು.

ಶೇ.88ರಷ್ಟು 2,000 ರೂ. ನೋಟುಗಳು ಬ್ಯಾಂಕ್‌ಗಳಿಗೆ ವಾಪಸ್: ಆರ್‌ಬಿಐ

ನವದೆಹಲಿ: ಮೇ ತಿಂಗಳಲ್ಲಿ ಹೆಚ್ಚಿನ ಮೌಲ್ಯದ ರೂ. 2,000 ಕರೆನ್ಸಿ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವುದಾಗಿ ಘೋಷಿಸಿದ ನಂತರ ರೂ 3.14 ಲಕ್ಷ ಕೋಟಿ ಮೌಲ್ಯದ (ಶೇ.88ರಷ್ಟು) ರೂ. 2,000 ನೋಟುಗಳು ಬ್ಯಾಂಕ್‌ಗಳಿಗೆ ವಾಪಸಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಮಂಗಳವಾರ ತಿಳಿಸಿದೆ. ನಿನ್ನೆಯವರೆಗೂ ಚಲಾವಣೆಯಿಂದ ಮರಳಿ ಪಡೆದ 2,000 ರೂಪಾಯಿಗಳ ನೋಟುಗಳ ಒಟ್ಟು ಮೌಲ್ಯ 3.14 ಲಕ್ಷ ಕೋಟಿ ರೂಪಾಯಿ ಎಂದು ಆರ್‌ಬಿಐ ಹೇಳಿದೆ. ಮೇ 19 ರಿಂದ ಈ ನೋಟುಗಳನ್ನು ಹಿಂಪಡೆಯಲಾಗುತ್ತಿದ್ದು, ಸೋಮವಾರ ಬ್ಯಾಂಕ್ ವ್ಯವಹಾರ ಮುಕ್ತಾಯದ ವೇಳೆ ಶೇ.88ರಷ್ಟು ನೋಟುಗಳನ್ನು ಹಿಂಪಡೆಯಲಾಗಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಗಂಟೆಗೆ ಗರಿಷ್ಠ 80 ಕಿಮೀ ವೇಗ ಕಾಯ್ದುಕೊಳ್ಳುವಂತೆ ಚಾಲಕರಿಗೆ ಕೆಎಸ್‌ಆರ್‌ಟಿಸಿ ಸೂಚನೆ

ಬೆಂಗಳೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಆಗಸ್ಟ್ 1ರಿಂದ ದ್ವಿಚಕ್ರ ವಾಹನಗಳು, ಆಟೋಗಳು, ಟ್ರಾಕ್ಟರುಗಳು, ಮೋಟಾರು ರಹಿತ ವಾಹನಗಳು, ಮಲ್ಟಿ ಆಕ್ಸಲ್ ಹೈಡ್ರಾಲಿಕ್ ಟ್ರೈಲರ್ ವಾಹನಗಳು ಮತ್ತು ಕ್ವಾಡ್ರಿ ಸೈಕಲ್‌ಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿಷೇಧ ಹೇರಿದ್ದು, ಈ ನಡುವೆ ಅಪಘಾತ ತಪ್ಪಿಸಲು ಕೆಎಸ್‌ಆರ್‌ಟಿಸಿ ಕೂಡ ಚಾಲಕರಿಗೆ ಕೆಲ ಸೂಚನೆಗಳನ್ನು ನೀಡಿದೆ.



118 ಕಿ.ಮೀ ವ್ಯಾಪ್ತಿಯಲ್ಲಿ ಅಪಘಾತ ತಡೆಯಲು ಮೈಸೂರು ವಿಭಾಗದ ಅಧಿಕಾರಿಗಳು ಕ್ರಮ ಕೈಗೊಂಡಿದ್ದು, ಗರಿಷ್ಠ ವೇಗವನ್ನು ಗಂಟೆಗೆ 80 ಕಿ.ಮೀ. ಕಾಯ್ದುಕೊಳ್ಳುವಂತೆ ಚಾಲಕರಿಗೆ ಸೂಚನೆ ನೀಡಿದೆ. ಎಕ್ಸ್‌ಪ್ರೆಸ್‌ವೇಯಲ್ಲಿ 3ನೇ ಪಥವನ್ನು ಬಿಟ್ಟು, ಮೊದಲ ಮತ್ತು ಎರಡನೇ ಲೇನ್‌ನಲ್ಲಿ ಬಸ್‌ಗಳ ಓಡಿಸುವಂತೆ. ಮುಂಭಾಗದಲ್ಲಿ ಮತ್ತೊಂದು ವಾಹನವನ್ನು ಹಿಂದಿಕ್ಕುವಾಗ ಚಾಲಕರು ಸರಿಯಾದ ಮಾರ್ಗವನ್ನು ಮಾತ್ರ ಬಳಸಬೇಕು.

ಲೇನ್ ಶಿಸ್ತು ಕಾಯ್ದುಕೊಳ್ಳುವುದರ ಜೊತೆಗೆ ಚಾಲಕರು ಸೈಡ್ ಮಿರರ್‌ಗಳನ್ನು ನೋಡುತ್ತಿರಬೇಕು. ಲೇನ್ ಬದಲಾವಣೆಯ ಸಮಯದಲ್ಲಿ ಟರ್ನ್ ಇಂಡಿಕೇಟರ್‌ಗಳನ್ನು ಕಡ್ಡಾಯವಾಗಿ ಬಳಸಬೇಕು. ಎಕ್ಸ್‌ಪ್ರೆಸ್‌ವೇಯಲ್ಲಿ ಗಂಟೆಗೆ ಗರಿಷ್ಠ 80 ಕಿಮೀ ವೇಗವನ್ನು ಕಾಯ್ದುಕೊಳ್ಳುವಂತೆ ಹಾಗೂ ಎಡಿಜಿಪಿ ಅಲೋಕ್‌ಕುಮಾರ್ ಅವರು ಗುರ್ತಿಸಿರುವ 25 ಆಕ್ಸಿಡೆಂಟ್ ಸ್ಪಾಟ್‌ಗಳಲ್ಲಿ ಬಹಳಷ್ಟು ಎಚ್ಚರಿಕೆಯಿಂದಿರುವಂತೆಯೂ ಚಾಲಕರಿಗೆ ಕೆಎಸ್‌ಆರ್‌ಟಿಸಿ ಸೂಚನೆ ನೀಡಿದೆ.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆ

ನವದೆಹಲಿ, ಆ.1– ತೈಲ ಮಾರುಕಟ್ಟೆ ಕಂಪನಿಗಳು ಮಂಗಳವಾರ ಆಗಸ್ಟ್ 1ರಿಂದ ಜಾರಿಗೆ ಬರುವಂತೆ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು 99.75 ರೂಪಾಯಿ ಕಡಿತಗೊಳಿಸಿದೆ.

ಆದರೆ ಗೃಹಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆ ಯಥಾಸ್ಥಿತಿ ಮುಂದುವರಿದಿದೆ. ಬೆಲೆ ಇಳಿಕೆಯ ನಂತರ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆ ಈಗ ರಾಜಧಾನಿ ದೆಹಲಿಯಲ್ಲಿ 1,680 ರೂಪಾಯಿಗಳಾಗಿದೆ. ವ್ಯಾಪಾರಿ, ಹೋಟೆಲ್ ವರ್ಗದವರಿಗೆ ಬೆಲೆ ಇಳಿಕೆ ಕೊಂಚ ಸಮಾಧಾನ ತಂದಿದೆ ಎಂದು ಹೇಳಬಹುದು. ಅದೇ ರೀತಿ ಕೋಲ್ಕತ್ತಾದಲ್ಲಿ 1,802 ರೂಪಾಯಿ, ಮುಂಬೈನಲ್ಲಿ 1,640 ರೂಪಾಯಿ ಮತ್ತು ಚೆನ್ನೈನಲ್ಲಿ 1,852 ರೂಪಾಯಿ ಆಗಿದೆ.

ಮೈಸೂರಲ್ಲಿ ರೇಟ್ ಕೇಳದೇ ಹೋಟೆಲ್‌ನಲ್ಲಿ ಊಟ, ತಿಂಡಿ ಮಾಡದಿರಿ...!

ಬಿಲ್ ಕೈಗಿಟ್ಟಾಗ ನಿಮಗೆ ಶಾಕ್ ಆಗುವುದರಿಂದ ತಪ್ಪಿಸಿಕೊಳ್ಳಿ







ಮೈಸೂರು, ಆ.1(ಬಿಎಲ್‌ಯು)– ಮೈಸೂರಿನ ಹೋಟೆಲ್‌ಗಳಲ್ಲಿ ಊಟ, ತಿಂಡಿ ಮಾಡುವ ಮುನ್ನ ಅವುಗಳ ರೇಟ್ ಕೇಳಿ. ತಿಂಡಿ ತಿನಿಸುಗಳ ಬೆಲೆ ಎಂದಿನಂತೆ ಇದೆ ಎಂದು ಜೇಬಿನಲ್ಲಿ ಹಣ ಹಾಕಿಕೊಂಡು ಊಟ ತಿಂಡಿ ಮಾಡಿದ್ರೆ ಪೀಕಲಾಟಕ್ಕೀಡಾಗಬೇಕಾಗುತ್ತದೆ. ಏಕೆಂದರೆ ಹೋಟೆಲ್ ಊಟ, ತಿಂಡಿ, ಕಾಫಿ–ಟೀ ಬೆಲೆ ಜಾಸ್ತಿಯಾಗಿದೆ.

ನಾವೇಕೆ ಈ ಎಚ್ಚರಿಕೆ ನೀಡುತ್ತಿದ್ದೇವೆ ಎಂದರೆ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರು, ಹೋಟೆಲ್ ತಿಂಡಿ, ಊಟದ ದರವನ್ನು ಆಯಾಯ ಹೋಟೆಲ್‌ನವರೇ ನಿರ್ಧರಿಸುತ್ತಾರೆ. ಅದರಂತೆ ಕೆಲ ಹೋಟೆಲ್‌ನವರು ಈಗಾಗಲೇ ದರ ಏರಿಕೆ ಮಾಡಿದ್ದಾರೆ. ಇದು ಕೆಲವರು ಕಾದು ನೋಡಿ, ನಿರ್ಧಾರ ಕೈಗೊಳ್ಳುತ್ತಾರೆ. ಈ ಬಗ್ಗೆ ನಾವು ಏನನ್ನೂ ಹೇಳಲು ಬರುವುದಿಲ್ಲ ಎಂದಿದ್ದಾರೆ. ಈ ಮಧ್ಯೆ ನಂದಿನಿ ಹಾಲು, ಮೊಸರು, ತುಪ್ಪ ಸೇರಿದಂತೆ ಹಾಲಿನ ಉತ್ಪನ್ನಗಳ ಬೆಲೆಯನ್ನು ಕೆಎಂಎಫ್ ಹೆಚ್ಚಳ ಮಾಡಿದೆ. ಹಾಲು ಹಾಗೂ ಮೊಸರು ಲೀಟರ್‌ಗೆ 3 ರೂಪಾಯಿ ಏರಿಕೆಯಾಗಿದೆ. ಅಲ್ಲದೆ ಹಲವು ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಈ ಕಾರಣದಿಂದ ಮೈಸೂರು ಹೋಟೆಲ್‌ನವರು ಕೂಡ ಊಟ, ತಿಂಡಿ, ಕಾಫಿ, ಟೀ ಬೆಲೆಯನ್ನು ಹೆಚ್ಚಳ ಮಾಡಿದ್ದಾರೆ. ಜನತೆಗೆ ಅರಿವಿಲ್ಲದಂತೆ ಶೇಕಡ 10 ರಿಂದ 15ರಷ್ಟು ಬೆಲೆ ಏರಿಕೆಯಾಗಿದೆ. ಮೈಸೂರಿನ ಶೇ.30ರಷ್ಟು ಹೋಟೆಲ್‌ನವರು ಇಂದಿನಿಂದಲೇ ಬೆಲೆ ಹೆಚ್ಚಳ ಮಾಡಿದ್ದಾರೆ. ಉಳಿದಂತೆ ಶೇಕಡ 70ರಷ್ಟು ಹೋಟೆಲ್‌ನವರು ಒಂದು ವಾರದೊಳಗೆ ಬೆಲೆ ಏರಿಕೆ ಮಾಡಲು ತೀರ್ಮಾನ ಮಾಡಿದ್ದಾರೆ. ಹೋಟೆಲ್ ವ್ಯವಹಾರದಲ್ಲೂ ಪೈಪೋಟಿ ಇರುವ ಕಾರಣ ಅಕ್ಕ–ಪಕ್ಕದ ಹೋಟೆಲ್‌ನವರು ಎಷ್ಟು ಬೆಲೆ ಹೆಚ್ಚಳ ಮಾಡಿದ್ದಾರೆ ಎಂದು ತಿಳಿದು ನಂತರ ವಾರದೊಳಗೆ ಬೆಲೆ ಏರಿಕೆ ಮಾಡಲು ಇತರರು ನಿರ್ಧಾರ ಮಾಡಿದ್ದಾರೆ. ಒಟ್ಟಾರೆ ಎಲ್ಲಾ ಹೋಟೆಲ್‌ನವರು ಬೆಲೆ ಹೆಚ್ಚಳ ಮಾಡುವುದು ನಿಶ್ಚಿತ. ಬಹಳಷ್ಟು ಜನರಿಗೆ ಬೆಲೆ ಏರಿಕೆ ವಿಚಾರ ತಿಳಿದಿರುವುದಿಲ್ಲ. ಕೆಲವರಂತೂ ತಾವು ಸೇವಿಸುವ ಊಟ, ತಿಂಡಿ ಹಾಗೂ ಕಾಫಿ–ಟೀಗೆ ಆಗುವಷ್ಟು ಹಣ ಇಟ್ಟುಕೊಂಡಿರುತ್ತಾರೆ. ಬಿಲ್ ಕೈಗಿಟ್ಟಾಗ ಶಾಕ್ ಆಗಬಹುದು. ಆಗ ಹಣವಿಲ್ಲದೆ ದಿಕ್ಕು ದೋಚದಂತಾಗುತ್ತದೆ. ಹಣ ಇಲ್ಲ ಅಂತ ಸಾಲ ಹೇಳಲು ಸಾಧ್ಯವಾಗದು. ಇದರಿಂದ ಸಂಕಷ್ಟ ಪರಿಸ್ಥಿತಿಗೀಡಾಗಬೇಕಾತ್ತದೆ.

ಈ ಕಾರಣದಿಂದ ಹೋಟೆಲ್‌ನಲ್ಲಿ ಊಟ, ತಿಂಡಿ ಮಾಡುವ ಮುನ್ನ ಈ ವಿಚಾರ ತಿಳಿದುಕೊಂಡಿರಬೇಕಾಗಿದೆ. ಇಲ್ಲದಿದ್ದರೆ ಮುಜುಗರಕ್ಕೊಳಗಾಗಬೇಕಾಗುತ್ತದೆ. ಬೆಂಗಳೂರು ಹೋಟೆಲ್ ಅಸೋಸಿಯೇಷನ್‌ನವರು ಬೆಂಗಳೂರು ನಗರಕ್ಕೆ ಸೀಮಿತವಾಗಿ ಶೇಕಡ 10 ರಷ್ಟು ಬೆಲೆ ಹೆಚ್ಚಳ ಮಾಡಿದ್ದಾರೆ. ಆದರೆ ಮೈಸೂರು ಹೋಟೆಲ್ ಅಸೋಸಿಯೇಷನ್‌ನವರು ಈ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಬೆಲೆ ಹೆಚ್ಚಳ ಮಾಡುವ ವಿಚಾರವನ್ನು ಆಯಾ ಹೋಟೆಲ್‌ನವರ ವಿವೇಚನೆಗೆ ಬಿಟ್ಟಿದ್ದೇವೆ. ಈಗಿನ ಪರಿಸ್ಥಿತಿಯಲ್ಲಿ ಹಾಲು ಸೇರಿದಂತೆ ಎಲ್ಲಾ ಆಹಾರ ಪದಾರ್ಥಗಳ ಬೆಲೆ ಹೆಚ್ಚಳ ಆಗಿರುವ ಕಾರಣ ಶೇಕಡ 5 ರಿಂದ 10 ರಷ್ಟು ಬೆಲೆ ಹೆಚ್ಚಳ ಮಾಡಬಹುದು ಎಂದು ಮೈಸೂರು ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ನಾರಾಯಣಗೌಡ ತಿಳಿಸಿದ್ದಾರೆ.

ಉಡುಪಿ ಕಾಲೇಜು ವಿದ್ಯಾರ್ಥಿನಿ ವಿಡಿಯೋ ಪ್ರಕರಣ ಎಸ್‌ಐಟಿಗೆ ವಹಿಸುವ ಪ್ರಶ್ನೆಯೇ ಇಲ್ಲ: ಸಿಎಂ

ಉಡುಪಿ: ಉಡುಪಿಯ ಪ್ಯಾರಾಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ಶೌಚಾಲಯಕ್ಕೆ ತೆರಳಿದ್ದಾಗ ಸಹಪಾಠಿಗಳು ವೀಡಿಯೊ ಚಿತ್ರೀಕರಣ ಮಾಡಿ ಸುದ್ದಿಯಾಗಿರುವ ಪ್ರಕರಣದ ಬಗ್ಗೆ ಪೊಲೀಸರು ಸ್ವಯಂಪ್ರೇರಿತವಾಗಿ ಕೇಸು ದಾಖಲಿಸಿಕೊಂಡಿದ್ದಾರೆ. ಡಿವೈಎಸ್ಪಿ ಮಟ್ಟದ ಅಧಿಕಾರಿಗಳಿಂದ ತನಿಖೆ ನಡೆಯುತ್ತಿದೆ. ಕೇಂದ್ರ ಮಹಿಳಾ ಆಯೋಗದ ಸದಸ್ಯೆ ಕೂಡ ಬಂದು ಪರಿಶೀಲನೆ ನಡೆಸಿದ್ದಾರೆ. ತನಿಖೆ ನಡೆಯಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉಡುಪಿ ಜಿಲ್ಲೆ ಪ್ರವಾಸದಲ್ಲಿದ್ದ ಸಿಎಂ ಸಿದ್ದರಾಮಯ್ಯನವರು ಇದಕ್ಕೂ ಮುನ್ನ ಬೆಳಗ್ಗೆ ಮಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿ, ಉಡುಪಿ ಕಾಲೇಜೊಂದರಲ್ಲಿ ಮೊಬೈಲ್ ಚಿತ್ರೀಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಎಫ್‌ಐಆರ್ ಆಗಿದೆ.

ತನಿಖೆಯನ್ನು ಡಿವೈಎಸ್ಪಿ ಮಟ್ಟದ ಅಧಿಕಾರಿ ನಡೆಸುತ್ತಿದ್ದು, ಪ್ರಕರಣವನ್ನು ಎಸ್‌ಐಟಿಗೆ ವಹಿಸುವ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಮಹಿಳಾ ಆಯೋಗ ಸದಸ್ಯೆ ಖುಷ್ಬೂ ಅವರು ಬಂದು ಪರಿಶೀಲನೆ ಮಾಡಿ ಶೌಚಾಲಯದಲ್ಲಿ ಕ್ಯಾಮರಾ ಇಟ್ಟಿರಲಿಲ್ಲ ಎಂದು ಹೇಳಿದ್ದಾರೆ. ತನಿಖೆಯಾಗಿ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದರು.

ಮಕ್ಕಳಾಟಿಕೆಯಾದರೆ ಕೇಸು ಹೇಗೆ ದಾಖಲಾಗುತ್ತದೆ: ಕಾಲೇಜಿನಲ್ಲಿ ವಿದ್ಯಾರ್ಥಿಗಳು ಜೊತೆ ಸೇರಿ ಮಕ್ಕಳಾಟವೆಂದು ಈ ರೀತಿ ವೀಡಿಯೊ ಚಿತ್ರೀಕರಣ ಮಾಡಿದ್ದರೆ ಕೇಸು ಹೇಗೆ ದಾಖಲಾಗುತ್ತದೆ. ಗೃಹ ಸಚಿವ ಪರಮೇಶ್ವರ್ ಅವರು ಕಾಲೇಜಿನಲ್ಲಿ ಮಕ್ಕಳು ತಮಾಷೆಗೆ ಈ ರೀತಿ ಮಾಡಿರಬಹುದು ಎಂದು ಹೇಳಿರಬಹುದು. ಆದರೆ ಕೇಸು ದಾಖಲಾಗಿದೆ. ಎಫ್‌ಐಆರ್ ಅನ್ನು ಕೋರ್ಟ್‌ಗೆ ಸಲ್ಲಿಸಲಾಗಿದೆ, ತನಿಖೆ ಮುಂದುವರಿದಿದೆ ಎಂದು ಸ್ಪಷ್ಟಪಡಿಸಿದರು.



ಬೆಲೆ ಏರಿಕೆಯೇ ಕಾಂಗ್ರೆಸ್ ಸರ್ಕಾರದ 6ನೇ ಗ್ಯಾರಂಟಿ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದು ಕಾಂಗ್ರೆಸ್ ಸರ್ಕಾರದ ದುಬಾರಿ ದುನಿಯಾ, 6ನೇ ಗ್ಯಾರಂಟಿ. ಈ ಸರ್ಕಾರಕ್ಕೆ ಜನ ಸಾಮಾನ್ಯರು ಹಿಡಿ ಶಾಪ ಹಾಕುತ್ತಿದ್ದಾರೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಈ ಕುರಿತು ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ವಿದ್ಯುತ್ ದರ ಏರಿಕೆ, ಟೊಮೆಟೋ ಸಮೇತ ಎಲ್ಲ ತರಕಾರಿ ಬೆಲೆ ಏರಿಕೆ, ನಂದಿನಿ ಹಾಲು, ಮೊಸರು, ಮಜ್ಜಿಗೆ ಬೆಲೆ ಏರಿಕೆ, ಹೊಟೆಲ್‌ಗಳಲ್ಲಿ ತಿಂಡಿಗಳ ಬೆಲೆ ಏರಿಕೆ, ಬಜೆಟ್‌ನಲ್ಲಿ ಅಬಕಾರಿ ತೆರಿಗೆ ಹೆಚ್ಚಳ, ಮೋಟಾರ್ ವೆಹಿಕಲ್ ತೆರಿಗೆ ಹೆಚ್ಚಳ, ಸ್ಟ್ಯಾಂಪ್ ಡ್ಯೂಟಿ ಹೆಚ್ಚಳ ಮೂಲಕ ಬರುವಂತ ದಿನಗಳಲ್ಲಿ ಮತ್ತಷ್ಟು ಬೆಲೆ ಏರಿಕೆಯಾಗಲಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ದುನಿಯಾ ದುಬಾರಿಯಾಗಿದ್ದು ಜನತೆ ಹಿಡಿ ಶಾಪ ಹಾಕುತ್ತಿದ್ದಾರೆ ಎಂದು ಕಿಡಿ ಕಾರಿದ್ದಾರೆ.

ದಲಿತರಿಗೆ ದ್ರೋಹ: ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ಗ್ಯಾರಂಟಿ ಯೋಜನೆಗಳನ್ನ ಜಾರಿಗೊಳಿಸಲು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಹೊರಟಿದ್ದು, ರಾಜ್ಯದ ಅಭಿವೃದ್ಧಿಯ ಹಾದಿಯೇ ಅಯೋಮಯವಾಗಲಿದೆ ಎಂದಿದ್ದಾರೆ.

ಎಸ್‌ಸಿಪಿ ಟಿಎಸ್‌ಪಿ ಕಾಯ್ದೆಯಡಿ ಎಸ್ಸಿ–ಎಸ್ಟಿ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನದಲ್ಲಿ ಸುಮಾರು 11 ಸಾವಿರ ಕೋಟಿ ರೂ.ಗಳನ್ನ ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆ ಮಾಡುತ್ತಿದ್ದು, ಎಸ್ಸಿ–ಎಸ್ಟಿ ಸಮುದಾಯದ ಅಭಿವೃದ್ಧಿಗೆ ಮಾರಕವಾಗಲಿದೆ. ರಾಜ್ಯ ಸರ್ಕಾರ ಎಸ್‌ಸಿಪಿ ಟಿಎಸ್‌ಪಿ ಯೋಜನೆಗೆ 34 ಸಾವಿರ ಕೋಟಿ ಕೊಡುವ ಬದಲು ಕೇವಲ 23 ಸಾವಿರ ಕೋಟಿ ರೂ.ಗೆ ಅನುಮೋದನೆ ನೀಡಿದಂತಾಗಿದ್ದು, ಇದು ಎಸ್‌ಸಿಪಿ ಕಾಯ್ದೆಯ ಉಲ್ಲಂಘನೆಯ ಜೊತೆಗೆ ಆ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ದ್ರೋಹವಾಗಿದೆ ಎಂದು ಬೊಮ್ಮಾಯಿ ಆಕ್ರೋಶ ಹೊರ ಹಾಕಿದ್ದಾರೆ. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಅವರು ಮನಸಿಲ್ಲದೇ ಎಸ್ಸಿಪಿ ಟಿಎಸ್ಪಿ ಹಣ ವರ್ಗಾವಣೆಗೆ ಒಪ್ಪಿಕೊಂಡಿರುವುದಾಗಿ ಅಸಹಾಯಕತೆ ತೋರಿಸಿರುವುದು ಸರ್ಕಾರದ ನಡೆಯ ಬಗ್ಗೆ ಎಸ್ಸಿ–ಎಸ್ಟಿ ಸಮುದಾಯಕ್ಕಿರುವ ಅಸಮಾಧಾನ ತೋರಿಸುತ್ತದೆ. ಇನ್ನೊಂದೆಡೆ ಎಸ್ಸಿ–ಎಸ್ಟಿ ಸಮುದಾಯದ ಬಗ್ಗೆ ಕಾಂಗ್ರೆಸ್‌ಗೆ ಇರುವ ನಿರ್ಲಕ್ಷ್ಯ ಧೋರಣೆ ಎತ್ತಿ ತೋರಿಸುತ್ತದೆ ಎಂದು ಆರೋಪಿಸಿದ್ದಾರೆ.

ತಿರುಪತಿಗೆ ನಂದಿನಿ ತುಪ್ಪ ಸ್ಥಗಿತ: ಕೆಎಂಎಫ್ ಆರೋಪ ತಿರಸ್ಕರಿಸಿದ ಟಿಟಿಡಿ

'ವರ್ಷದ ಹಿಂದಿನ ವಿಚಾರ' ಎಂದ ಸಿಎಂ ಸಿದ್ದರಾಮಯ್ಯ



ಬೆಂಗಳೂರು: ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ (ಟಿಟಿಡಿ) ಲಡ್ಡು ತಯಾರಿಕೆಗೆ ತುಪ್ಪ ಪೂರೈಕೆ ಮಾಡಲು ಅನುಮತಿ ನೀಡಿಲ್ಲ ಎಂಬ ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ಅಧ್ಯಕ್ಷ ಹೇಳಿರುವ ಮಾತು ಸತ್ಯಕ್ಕೆ ದೂರವಾದದ್ದು ಎಂದು ಟಿಟಿಡಿ ಮಂಗಳವಾರ ಸ್ಪಷ್ಟಪಡಿಸಿದೆ.

ಈ ಬಗ್ಗೆ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಟಿಟಿಡಿಯ ಧರ್ಮಾರೆಡ್ಡಿ ಅವರು, ಕೆಎಂಎಫ್ ಅಧ್ಯಕ್ಷರು ನೀಡಿರುವ ಹೇಳಿಕೆ ಸರಿಯಲ್ಲ. ತುಪ್ಪವೂ ಸೇರಿ ತನಗೆ ಬೇಕಾದ ಎಲ್ಲಾ ವಸ್ತುಗಳನ್ನು ಟಿಟಿಡಿ ಇ–ಟೆಂಡರ್ ಮೂಲಕ ಸಂಗ್ರಹಿಸುತ್ತದೆ. ಇ–ಟೆಂಡರ್ ಮೂಲಕ ಭಾರತದಾದ್ಯಂತ ಬಿಡ್‌ಗಳನ್ನು ಆಹ್ವಾನಿಸಲಾಗುತ್ತದೆ. ಟೆಂಡರ್ ತೆರೆಯುವವರೆಗೂ ಯಾರೆಲ್ಲಾ ಬಿಡ್ ಸಲ್ಲಿಸಿದ್ದಾರೆ ಎನ್ನುವ ಮಾಹಿತಿಯೂ ನಮಗೆ ಇರುವುದಿಲ್ಲ. ಟಿಟಿಡಿ ಸರ್ಕಾರಿ ಸಂಸ್ಥೆಯಾಗಿರುವುದರಿಂದ ಇ–ಟೆಂಡರ್ ನಿಯಮಗಳ ಪ್ರಕಾರ ನಾವು ಬಿಡ್ ಅಂತಿಮಗೊಳಿಸುತ್ತೇವೆ. ಇ–ಟೆಂಡರ್‌ನಲ್ಲಿ ಯಾರು ಕಡಿಮೆ ಮೊತ್ತಕ್ಕೆ ಗುಣಮಟ್ಟದ ತುಪ್ಪ ಸರಬರಾಜು ಮಾಡಲು ಒಪ್ಪಿಗೆ ನೀಡಿರುತ್ತಾರೆಯೋ ಅವರಿಗೆ ಗುತ್ತಿಗೆ ನೀಡುತ್ತೇವೆ ಎಂದು ರೆಡ್ಡಿ ಹೇಳಿದ್ದಾರೆ.




ಕೆಎಂಎಫ್ ಅಧ್ಯಕ್ಷರ ಸ್ಪಷ್ಟನೆ: ಲಡ್ಡು ತಯಾರಿಕೆಗೆ ಅಗತ್ಯವಿರುವ ತುಪ್ಪ ಪೂರೈಸಲು ಟಿಟಿಡಿ ಟೆಂಡರ್ ಕರೆದಿತ್ತು. ಆದರೆ, ನಮ್ಮ ಉತ್ಪನ್ನದ ಗುಣಮಟ್ಟ ಹಾಗೂ ಅದಕ್ಕೆ ತಕ್ಕಂತೆ ದರ ಹೆಚ್ಚಿರುವುದರಿಂದ ಪಾಲ್ಗೊಂಡಿಲ್ಲ ಎಂದು ಕೆಎಂಎಫ್ ಅಧ್ಯಕ್ಷ ಭೀಮನಾಯ್ಕ ತಿಳಿಸಿದ್ದರು. 2005ರಿಂದಲೂ ಕೆಎಂಎಫ್ ತುಪ್ಪವನ್ನು ಪೂರೈಸುತ್ತಿತ್ತು. ತಿರುಪತಿಯಲ್ಲಿ ತಯಾರಾಗುತ್ತಿದ್ದ ಲಡ್ಡುಗಳಿಗೆ ಶೇ 45ರಷ್ಟು ನಂದಿನಿ ಬ್ರ್ಯಾಂಡ್ ತುಪ್ಪವನ್ನೇ ಬಳಸಲಾಗುತ್ತಿತ್ತು. 2022ರಲ್ಲಿ ಕೋರಿಕೆಯ ಮೇರೆಗೆ ಮಾತ್ರ ಪ್ರತಿ ಕೆ.ಜಿ.ಗೆ 349 ರೂನಂತೆ 345 ಟನ್ ತುಪ್ಪ ಪೂರೈಸಲಾಗಿತ್ತು. ಆದರೆ, ಈ ಬಾರಿ ತುಪ್ಪದ ಬೇಡಿಕೆ ನಮ್ಮ ರಾಜ್ಯದಲ್ಲೇ ಹೆಚ್ಚಾಗಿದ್ದು, ಸಂಗ್ರಹದ ಕೊರತೆಯೂ ಇದೆ. ಜತೆಗೆ, ನಿರೀಕ್ಷೆಗೆ ತಕ್ಕಂತೆ ನಮಗೆ ದರ ದೊರೆತಿಲ್ಲ. ಟಿಟಿಡಿ ಟೆಂಡರ್‌ನಲ್ಲಿ ನಾವು ನಿಗದಿಪಡಿಸಿದ ದರ ಮೂರನೇ ಸ್ಥಾನದಲ್ಲಿದೆ. ಹೀಗಾಗಿ, ಕೆಎಂಎಫ್ ತುಪ್ಪ ಪೂರೈಸುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು.

ವರ್ಷದ ಹಿಂದಿನ ವಿಚಾರ ಎಂದ ಸಿಎಂ ಸಿದ್ದರಾಮಯ್ಯ: ಇನ್ನು ತಿರುಪತಿಗೆ ನಂದಿನಿ ತುಪ್ಪ ಸ್ಥಗಿತವಾದ ವಿಚಾರದ ಕುರಿತು ಬಿಜೆಪಿ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರ ಆರೋಪಕ್ಕೆ ತಿರುಗೇಟು ನೀಡಿರುವ ಸಿಎಂ ಸಿದ್ದರಾಮಯ್ಯ ಅವರು, 'ಆಂಧ್ರಪ್ರದೇಶದ ತಿರುಪತಿಗೆ ನಂದಿನಿ ತುಪ್ಪ ಪೂರೈಕೆ ಸ್ಥಗಿತಗೊಂಡಿರುವುದು ಇಂದು, ನಿನ್ನೆಯ ವಿಚಾರವಲ್ಲ. ಕಳೆದ ಒಂದೂವರೆ ವರ್ಷದ ಹಿಂದೆಯೇ ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ತಿರುಪತಿಗೆ ತುಪ್ಪ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಟ್ವೀಟ್ ಮಾಡಿದ್ದಾರೆ.

ಮತ್ತೊಂದು ಟ್ವೀಟ್‌ನಲ್ಲಿ ಮಾನ್ಯ ಸಂಸದ ನಳೀನ್ ಕುಮಾರ್ ಕಟೀಲ್ ಅವರೇ ಈಗ ಹೇಳಿ, ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಹಿಂದೂ ಧಾರ್ಮಿಕ ಶ್ರದ್ಧಾ ಭಕ್ತಿಯ ವಿರೋಧಿಯೋ? ಅಥವಾ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಮಾತ್ರ ಹಿಂದೂ ವಿರೋಧಿಯೋ? ನಮಗೆ ಜನರ ಧಾರ್ಮಿಕ ನಂಬಿಕೆಯ ಜೊತೆಗೆ ಹೈನುಗಾರರ ಬದುಕು ಮುಖ್ಯ. ಹೀಗಾಗಿ ನಾಡಿನ ರೈತರ ಹಿತದೃಷ್ಟಿಯಿಂದ ನಾವು ಕೇಳುವ ದರ ನೀಡಲು ತಿರುಪತಿ ದೇವಾಲಯದವರು ಒಪ್ಪುವುದಾದರೆ ತುಪ್ಪ ಪೂರೈಸಲು ಯಾವ ಸಮಸ್ಯೆಗಳಿಲ್ಲ ಎಂದು ಹೇಳಿದ್ದಾರೆ.

ಕರ್ನಾಟಕದ ಹೆಮ್ಮೆಯ ನಂದಿನಿ ಉತ್ಪನ್ನಗಳಿಗೆ ಶಿವಣ್ಣ ನೂತನ ರಾಯಭಾರಿ

ಬೆಂಗಳೂರು: ಕರ್ನಾಟಕದ ಹೆಮ್ಮೆ ನಂದಿನಿ ಬ್ರ್ಯಾಂಡ್ ಉತ್ಪನ್ನಗಳಿಗೆ ನೂತನ ರಾಯಭಾರಿಯಾಗಿ ಡಾ. ಶಿವರಾಜ್‌ಕುಮಾರ್ ನೇಮಕವಾಗಿದ್ದಾರೆ. ಸುಮಾರು ವರ್ಷಗಳ ಕಾಲ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ರಾಯಭಾರಿಯಾಗುವ ಮೂಲಕ ನಂದಿನಿ ಉತ್ಪನ್ನಗಳಿಗೆ ಪ್ರಚಾರ ಮಾಡಿದ್ದರು. ಇದೀಗ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ ಅವರಿಂದು ಶಿವರಾಜ್‌ಕುಮಾರ್ ಅವರನ್ನು ಭೇಟಿ ಮಾಡಿ ರಾಯಭಾರಿಯಾಗುವಂತೆ ಕೋರಿದ್ದು, ಅದಕ್ಕೆ ಶಿವಣ್ಣ ಅನುಮತಿ ನೀಡಿದ್ದಾರೆ ಎಂದು ವರದಿಯಾಗಿದೆ.ಕೆಎಂಎಫ್‌ನ ನಂದಿನಿ ಹಾಲು ಹಾಗೂ ಅದರ ಉತ್ಪನ್ನಗಳನ್ನು ಪ್ರಚಾರ ಮಾಡುವುದಕ್ಕೆ ಶಿವಣ್ಣ ಒಪ್ಪಿರುವುದಕ್ಕೆ ಅವರಿಗೆ ಹಾಲು ಒಕ್ಕೂಟ ಅಭಿನಂದನೆ ಸಲ್ಲಿಸಿದೆ. ಈ ಹಿಂದೆ ಪುನೀತ್ ರಾಜ್‌ಕುಮಾರ್ ಅಷ್ಟೇ ಅಲ್ಲದೇ, ಡಾ. ರಾಜ್‌ಕುಮಾರ್ ಕೂಡಾ ನಂದಿನಿ ಹಾಲಿಗೆ ರಾಯಬಾರಿಯಾಗಿ ಪ್ರಚಾರ ಮಾಡಿದ್ದರು.



ಮಂಡ್ಯದಲ್ಲಿ ಮುಂದುವರೆದ ಕಾಡಾನೆಗಳ ಹಾವಳಿ

ಹೆಬ್ಬಕವಾಡಿಯಲ್ಲಿ ಬೀಡುಬಿಟ್ಟ ಗಜಪಡೆ: ಕಾಡಿಗೆ ಓಡಿಸಲು ಅರಣ್ಯ ಸಿಬ್ಬಂದಿ ಹರಸಾಹಸ



ಮಂಡ್ಯ, ಆ.1– ಜಿಲ್ಲೆಯ ವಿವಿಧೆಡೆ ಕಾಡಾನೆ ಹಾವಳಿ ಮುಂದುವರೆದಿದ್ದು, ಮಂಡ್ಯದಿಂದ ಏಳೆಂಟು ಕಿಮೀ ದೂರದಲ್ಲಿರುವ ಹೆಬ್ಬಕವಾಡಿಯಲ್ಲಿ ಹತ್ತಕ್ಕೂ ಹೆಚ್ಚು ಕಾಡಾನೆಗಳು ವಾಸ್ತವ್ಯ ಹೂಡಿವೆ. ಇದು ಸುತ್ತಮುತ್ತಲ ಗ್ರಾಮಸ್ಥರನ್ನು ಆತಂಕಕ್ಕೀಡು ಮಾಡಿದ್ದು, ಗಜಪಡೆಯನ್ನು ಕಾಡಿಗೋಡಿಸಲು ಅರಣ್ಯ ಇಲಾಖೆ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ.

ಕಳೆದೊಂದು ವಾರದಿಂದ ಮಂಡ್ಯ ಜಿಲ್ಲೆಯಲ್ಲಿ ಆನೆಗಳ ಹಾವಳಿ ಹೆಚ್ಚಾಗಿದೆ. ಮಳವಳ್ಳಿ ತಾಲೂಕಿನಲ್ಲಿ ಹೆಚ್ಚಾಗಿದ್ದ ಕಾಡಾನೆ ಹಾವಳಿ ಇದೀಗ ಜಿಲ್ಲೆಯ ವಿವಿಧ ಭಾಗಗಳಲ್ಲೂ ಹೆಚ್ಚಾಗಿದೆ. ಮದ್ದೂರಿನ ಕೊಪ್ಪ ಭಾಗದಲ್ಲಿ ಕಾಣಿಸಿಕೊಂಡಿದ್ದ ಕಾಡಾನೆಗಳನ್ನು ಅರಣ್ಯ ಇಲಾಖೆ ಯಶಸ್ವಿ ಯಾಗಿ, ಕಾಡಿಗಟ್ಟಿದ್ದಾರೆ. ಆದರೆ ಮುತ್ತತ್ತಿ ಹಾಗೂ ಬಸವನಬೆಟ್ಟ ಅರಣ್ಯ ಪ್ರದೇಶದಿಂದ ಬಂದಿರುವ ಹತ್ತಕ್ಕೂ ಹೆಚ್ಚು ಆನೆಗಳು ಕೆ.ಎಂ.ದೊಡ್ಡಿ ಭಾಗದ ಹಲವು ಗ್ರಾಮಗಳಲ್ಲಿ ಕಾಣಿಸಿಕೊಂಡು ಇದೀಗ ಮಂಡ್ಯದವರೆಗೂ ಬಂದಿದ್ದು, ಹೆಬ್ಬಕವಾಡಿ ಗ್ರಾಮದಲ್ಲಿ ವಾಸ್ತವ್ಯ ಹೂಡಿವೆ.

ಮಂಡ್ಯ ತಾಲೂಕಿನ ಹೆಬ್ಬಕವಾಡಿ, ಮಳವಳ್ಳಿ ಭಾಗದ ಚಿಕ್ಕಮಲಗೂಡು, ರಾಮಂದೂರು, ಮೈಸೂರು ಜಿಲ್ಲೆ ನರಸೀಪುರ ತಾಲೂಕಿನ ದೊಡ್ಡಮುಲಗೂಡು ಸೇರಿದಂತೆ ಸುತ್ತಮುತ್ತ ಈ ಆನೆಗಳು ಓಡಾಡುತ್ತಿದ್ದು, ಜನರಲ್ಲಿ ಆತಂಕ ಹೆಚ್ಚುವಂತೆ ಮಾಡಿವೆ.

ಹೆಬ್ಬಕವಾಡಿ ಕಬ್ಬಿನ ಗದ್ದೆಯಲ್ಲಿ ವಾಸ್ತವ್ಯ ಹೂಡಿರುವ 10ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಕಬ್ಬಿನ ಗದ್ದೆ ನಾಶಪಡಿಸುತ್ತಿವೆ. ಗಜಪಡೆ ಕಂಡು ರೈತರು ಆತಂಕಗೊಂಡಿದ್ದು, ಆನೆಗಳನ್ನು ಕಾಡಿಗೆ ಅಟ್ಟಲು ಅರಣ್ಯ ಇಲಾಖೆ ಅಧಿಕಾರಿಗಳು ಹರಸಾಹಸ ಪಡುತ್ತಿದ್ದಾರೆ. ಅಲ್ಲದೇ ಕಳೆದ 15 ದಿನ ದಿಂದಲೂ ಕಾರ್ಯಾಚರಣೆ ನಡೆಸುತ್ತಿರುವ ಅರಣ್ಯ ಇಲಾಖೆ ಸಿಬ್ಬಂದಿ ಆನೆಗಳನ್ನು ಕಾಡಿಗೆ ಅಟ್ಟಲು ಶತಪ್ರಯತ್ನ ನಡೆಸುತ್ತಿದ್ದಾರೆ.

ಮಂಡ್ಯ–ಮಳವಳ್ಳಿ ರಸ್ತೆ ಸಂಚಾರ ಬಂದ್: ಕಾಡಾನೆಗಳು ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳು ಸಾಕಾನೆ ಕರೆತಂದು ಕಾರ್ಯಾಚರಣೆ ಚುರುಕುಗೊಳಿಸಲು ನಿರ್ಧರಿಸಿದ್ದು, ಕಬ್ಬಿನ ಗದ್ದೆಯಲ್ಲಿ ಆನೆಗಳು ಬೀಡು ಬಿಟ್ಟಿರುವುದರಿಂದ ಹನಿಯಂಬಾಡಿ ಮಾರ್ಗದ ಮಂಡ್ಯ–ಮಳವಳ್ಳಿ ರಸ್ತೆ ಸಂಚಾರ ಬಂದ್ ಮಾಡಲಾಗಿದೆ. ಅಲ್ಲದೇ ಅರಣ್ಯ ಇಲಾಖೆ ಸಿಬ್ಬಂದಿ, ಬೇರೆ ಮಾರ್ಗದಲ್ಲಿ ಓಡಾಡುವಂತೆ ಜನರಿಗೆ ಸೂಚಿಸುತ್ತಿದ್ದಾರೆ. ಕಾಡಾನೆ ಹಿಂಡು ಬೀಡು ಬಿಟ್ಟಿರುವುದರಿಂದ ಗ್ರಾಮಸ್ಥರಲ್ಲೂ ಆತಂಕ ಮೂಡಿದೆ.

ಹೆಬ್ಬಕವಾಡಿಯಲ್ಲಿ ಮಾತನಾಡಿದ ಡಿಎಫ್‌ಓ ರುದ್ರನ್, ಕಳೆದ 10 ದಿನಗಳಿಂದ ಜಿಲ್ಲಾ ವ್ಯಾಪ್ತಿಯಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಂಡಿವೆ. ಅರಣ್ಯ ಇಲಾಖೆ ಆನೆಗಳ ಚಲನವಲನ ವೀಕ್ಷಿಸುತ್ತಿದ್ದು, ಆನೆಗಳು ಜನಪ್ರದೇಶಕ್ಕೆ ನುಗ್ಗದಂತೆ ಎಚ್ಚರಿಕೆ ವಹಿಸಲಾಗಿದೆ. ಇಂದು ಸಹ 100ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ ಎಂದರು.

ಈ ಆನೆಗಳನ್ನು ಕಾವೇರಿ ವನ್ಯಜೀವಿ ಪ್ರದೇಶಕ್ಕೆ ಓಡಿಸಲು ಪ್ರಯತ್ನಿಸಲಾಗುತ್ತಿದ್ದು, ರೈತರು ಕಾಡಾನೆಗಳನ್ನು ಕಂಡು ಗಾಬರಿಯಾಗುವ ಅವಶ್ಯಕತೆ ಇಲ್ಲ. ಆನೆಗಳು ಮಾಡಿರುವ ಬೆಳೆ ಹಾನಿಗೆ ಪರಿಹಾರ ನೀಡುತ್ತೇವೆ. ಕಾರ್ಯಾಚರಣೆಯಲ್ಲಿ ದಸರಾದ 4 ಕುಂಕಿ ಆನೆಗಳನ್ನು ಬಳಸಿಕೊಳ್ಳುತ್ತಿದ್ದೇವೆ. ಈ ಆನೆಗಳ ಮೂಲಕ ಕಾಡಾನೆಗಳನ್ನು ಕಾಡಿಗೆ ಅಟ್ಟುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇವಲ ಈ ಭಾಗದಲ್ಲಿ ಮಾತ್ರವಲ್ಲದೇ ಮಳವಳ್ಳಿ ತಾಲೂಕಿನ ಹಲಗೂರು, ಬಸವನ ಬೆಟ್ಟ, ಶ್ರೀರಂಗಪಟ್ಟಣ ತಾಲೂಕಿನ ವಿವಿಧೆಡೆ ಆನೆಗಳ ಹಾವಳಿ ಹೆಚ್ಚಿದ್ದು, ರೈತರ ಬೆಳೆಗಳನ್ನು ನಾಶಪಡಿಸುತ್ತಿವೆ ಎಂದರು.

ಗಗನಚುಕ್ಕಿಯಲ್ಲಿ ಹಾಲ್ನೊರೆಯಂತೆ ಹರಿಯುತ್ತಿರುವ ಕಾವೇರಿ



ಮಳವಳ್ಳಿ, ಆ.1– ಕರ್ನಾಟಕದ ನಯಾಗರಾ ಎಂದೇ ಕರೆಯಲ್ಪಡುವ ತಾಲೂಕಿನ ಗಗನಚುಕ್ಕಿ ಜಲಪಾತದಲ್ಲಿ ಕಾವೇರಿ ಹಾಲ್ನೊರೆಯಂತೆ ಮೈದುಂಬಿ ಹರಿಯುತ್ತಿದ್ದು, ಜಲಪಾತ ವೀಕ್ಷಿಸಲು ಪ್ರವಾಸಿಗರ ದಂಡೇ ಹರಿದು ಬರುತ್ತಿದೆ.

ಬೆಂಗಳೂರು, ಮೈಸೂರು, ಚಾಮರಾಜನಗರ, ರಾಮನಗರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ನಿತ್ಯ ಸಾವಿರಾರು ಪ್ರವಾಸಿಗರು ಕುಟುಂಬ ಸಮೇತರಾಗಿ ಆಗಮಿಸಿ ಜಲಪಾತ ವೀಕ್ಷಿಸಿ ಸಂಭ್ರಮಿಸುತ್ತಿದ್ದಾರೆ. ಕಬಿನಿ ಹಾಗೂ ಕೆಆರ್‌ಎಸ್ ಅಣೆಕಟ್ಟೆಗೆ ವ್ಯಾಪಕವಾಗಿ ನೀರು ಹರಿದು ಬರುತ್ತಿರುವುದರಿಂದ ಜಲಾಶಯಗಳಿಂದ ನದಿಗೆ ನೀರು ಹರಿಸುತ್ತಿರುವ ಪರಿಣಾಮ ಗಗನಚುಕ್ಕಿ ಜಲಪಾತ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ. ದಟ್ಟ ಅರಣ್ಯ ಪ್ರದೇಶದಲ್ಲಿ ಹಕ್ಕಿಗಳ ಕಲವರವದೊಂದಿಗೆ ರುದ್ರ ರಮಣೀಯವಾಗಿ ಭೋರ್ಗರೆಯುತ್ತಿರುವ ಗಗನಚುಕ್ಕಿ ಜಲಪಾತವು ಹಾಲಿನ ನೊರೆಯಂತೆ ಹುಕ್ಕಿ ಹರಿದು ನೋಡುಗರ ಹೃದಯ ಹಾಗೂ ಕಂಗಳನ್ನು ತಲ್ಲಣಗೊಳಿಸುತ್ತಿದೆ.

ಈ ಬಾರಿ ನಡೆಯುತ್ತ ಉತ್ಸವ: ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿ ಗಗನಚುಕ್ಕಿ ಜಲಪಾತದಲ್ಲಿ ನೀರು ಹೆಚ್ಚಾದಾಗ ಗಗನಚುಕ್ಕಿ ಜಲಪಾತೋತ್ಸವ ನಡೆಸುವುದು ವಾಡಿಕೆ. ಆದರೆ ಕೊರೊನಾ ಕಾರಣದಿಂದ ಉತ್ಸವವನ್ನು ಕಳೆದ 4 ವರ್ಷಗಳಿಂದ ನಡೆಸಿರಲಿಲ್ಲ. ಕಳೆದ ವರ್ಷ ಅಣೆಕಟ್ಟೆ ಭರ್ತಿಯಾಗಿದ್ದರೂ, ಉತ್ಸವ ನಡೆಸಲಾಗಿರಲಿಲ್ಲ. ಆದರೆ ಈ ವರ್ಷ ಉತ್ಸವ ನಡೆಸುವ ಸಾಧ್ಯತೆ ಇದೆ.

ನೂತನ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಈಗಾಗಲೇ ಗಗನಚುಕ್ಕಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬರುತ್ತಿರುವುದರಿಂದ ನೋಡಲು ಆಕರ್ಷಣೀಯವಾಗಿದೆ. ಈ ನಿಟ್ಟಿನಲ್ಲಿ ಗಗನಚುಕ್ಕಿ ಹಾಗೂ ಪಕ್ಕದ ಕೊಳ್ಳೇಗಾಲ ತಾಲೂಕಿನ ಭರಚುಕ್ಕಿ ಎರಡು ಉತ್ಸವವನ್ನು ರಾಜ್ಯ ಸರ್ಕಾರ ನಡೆಸಲು ಉತ್ಸಾಹ ತೋರುತ್ತದೆಯೇ ಎಂಬ ಪ್ರಶ್ನೆ ಇದೀಗ ಉದ್ಭವವಾಗಿದೆ.

ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ ಸೇರಿದಂತೆ ಇತರ ವಾಹನ ನಿರ್ಬಂಧ ಹಿನ್ನಲೆ

ಎಂಟ್ರಿ, ಎಗ್ಸಿಟ್ ಪಾಯಿಂಟ್‌ಗಳಲ್ಲಿ ಪೊಲೀಸರ ತಪಾಸಣೆ

ಮಂಡ್ಯ, ಆ.1– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಹೆಚ್ಚಳ ಹಿನ್ನೆಲೆಯಲ್ಲಿ ಮೋಟಾರ್ ವಾಹನ ಕಾಯ್ದೆ ಅನ್ವಯ ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ, ತ್ರಿಚಕ್ರ, ಎತ್ತಿನಗಾಡಿ, ಹೈಡ್ರಾಲಿಕ್ ಹಾಗೂ ಮಲ್ಟಿ ಆಕ್ಸೆಲ್ ವಾಹನಗಳಿಗೆ ಆ.1ರಿಂದ ನಿರ್ಬಂಧ ವಿಧಿಸಿರುವ ಕಾರಣ ಜಿಲ್ಲಾ ವ್ಯಾಪ್ತಿಯ ಹೆದ್ದಾರಿಯಲ್ಲಿರುವ ಎಂಟ್ರಿ ಹಾಗೂ ಎಗ್ಸಿಟ್ ಪಾಯಿಂಟ್‌ಗಳಲ್ಲಿ ಪೊಲೀಸರು ತಪಾಸಣೆ ನಡೆಸಿದರು.

ಮಂಗಳವಾರ ಬೆಳಗ್ಗೆ 9 ಗಂಟೆವರೆಗೂ ಸಿಬ್ಬಂದಿ ನಿಯೋಜಿಸದ ಹಿನ್ನೆಲೆಯಲ್ಲಿ ಬೈಕ್ ಹಾಗೂ ತ್ರಿಚಕ್ರ ವಾಹನ ಸವಾರರು ನಿಯಮ ಪಾಲನೆ ಮಾಡದ ಕಾರಣ ಪೊಲೀಸರು ಎಂಟ್ರಿ ಹಾಗೂ ಎಗ್ಸಿಟ್ ಪಾಯಿಂಟ್‌ಗಳಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನಗಳನ್ನು ತಡೆದು ಸರ್ವೀಸ್ ರಸ್ತೆಯಲ್ಲಿ ಹೋಗುವಂತೆ ಸೂಚಿಸುತ್ತಿದ್ದರು.

ಹೊಸ ನಿಯಮಗಳ ಬಗ್ಗೆ ಕೆಲವರಿಗೆ ಇನ್ನು ತಿಳಿಯದ ಕಾರಣ ಮೊದಲ ದಿನವಾದ ಇಂದು ದಂಡ ವಿಧಿಸದೇ ಸೂಚನೆ ನೀಡಿ ಸರ್ವೀಸ್ ರಸ್ತೆಗೆ ಪೊಲೀಸರು ಕಳುಹಿಸುತ್ತಿದ್ದರು. ಆ ಮೂಲಕ ಎಕ್ಸ್‌ಪ್ರೆಸ್ ವೇನಲ್ಲಿ ನಿರ್ಬಂಧಿತ ವಾಹನ ಸಂಚಾರಕ್ಕೆ ಪೊಲೀಸರು ಬ್ರೇಕ್ ಹಾಕಿದರು. ಎಕ್ಸ್‌ಪ್ರೆಸ್ ವೇನಲ್ಲಿ ಕಳೆದ 6 ತಿಂಗಳಿಂದ ಅತೀ ಹೆಚ್ಚು ಅಪಘಾತ ಸಂಭವಿಸಿ, ಬೈಕ್ ಸವಾರರೇ ಹೆಚ್ಚಾಗಿ ಸಾವನ್ನಪ್ಪುತ್ತಿದ್ದರಿಂದ ಈ ನಿಯಮ ಜಾರಿಗೆ ತರಲಾಗಿದೆ.

ಜಿಲ್ಲೆಯ ಎಕ್ಸ್‌ಪ್ರೆಸ್ ವೇನ ಮದ್ದೂರು ಟೌನ್ ಎಂಟ್ರಿ, ಗೆಜ್ಜಲಗೆರೆ ಬಳಿಯ ಎಗ್ಸಿಟ್ ಪಾಯಿಂಟ್, ಮಂಡ್ಯ ನಗರದ ಶಶಿಕಿರಣ ಕನ್ವೆನ್ಷನ್ ಹಾಲ್ ಎಂಟ್ರಿ, ಇಂಡುವಾಳು ಬಳಿಯ ಎಗ್ಸಿಟ್ ಪಾಯಿಂಟ್, ಯಲಿಯೂರು ಪಾಯಿಂಟ್ ಎಂಟ್ರಿ, ಪಾಂಡವಪುರ ಗೇಟ್ ಎಂಟ್ರಿ, ಶ್ರೀರಂಗಪಟ್ಟಣ ಟೌನ್ ಎಂಟ್ರಿ ಹಾಗೂ ಎಗ್ಸಿಟ್‌ಗಳಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

ಅಲ್ಲದೇ ರಾಮನಗರ ಜಿಲ್ಲೆಯ ಕೆಂಗೇರಿಯಿಂದ ಹಿಡಿದು ರಾಮನಗರ ಮತ್ತು ಚನ್ನಪಟ್ಟಣ ನಗರಗಳ ಎಂಟ್ರಿ ಹಾಗೂ ಎಗ್ಸಿಟ್‌ಗಳಲ್ಲೂ ಪೊಲೀಸ್ ಸಿಬ್ಬಂದಿ ಹಾಕಿ, ಸವಾರರಿಗೆ ಅರಿವು ಮೂಡಿಸುವ ಕಾರ್ಯ ಮಾಡಲಾಯಿತು.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಒತ್ತು: ಹೆಚ್.ಟಿ.ಮಂಜು



ಮಂಡ್ಯ, ಆ.1– ಕೆ.ಆರ್.ಪೇಟೆ ತಾಲೂಕಿನಲ್ಲಿ ಉದ್ಯೋಗಕ್ಕಾಗಿ ಹೊರ ರಾಜ್ಯ ಹಾಗೂ ಜಿಲ್ಲೆಗೆ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ತಾಲೂಕಿನ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಒತ್ತು ನೀಡಲಾಗುವುದು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನಲ್ಲಿ ಉದ್ಯೋಗ ಸಮಸ್ಯೆ ನಿವಾರಣೆಗೆ ಫುಡ್‌ಪಾರ್ಕ್ ಸ್ಥಾಪನೆಗೆ ಈ ಹಿಂದೆ ಚಾಲನೆ ನೀಡಲಾಗಿತ್ತು. ಕಾರಣಾಂತರಗಳಿಂದ ಅದು ನೆನೆಗುದಿಗೆ ಬಿದ್ದಿದೆ. ಫುಡ್‌ಪಾರ್ಕ್‌ನಲ್ಲಿ ಕೇವಲ ಆಹಾರೋತ್ಪನ್ನಗಳಿಗೆ ಆದ್ಯತೆ ಸಿಗುವುದರಿಂದ ತಾಲೂಕಿನ ಜನರಿಗೆ ಹೆಚ್ಚಿನ ಉದ್ಯೋಗ ಸಿಗುವುದಿಲ್ಲ. ಹೀಗಾಗಿ ಕನಿಷ್ಟ 4 ಕೈಗಾರಿಕೆ ಮತ್ತು ಗಾರ್ಮೆಂಟ್ಸ್‌ಗಳ ಸ್ಥಾಪನೆಗೆ ಕ್ರಮ ಕೈಗೊಂಡು, ಕನಿಷ್ಟ 4ರಿಂದ 5 ಸಾವಿರ ಮಂದಿಗೆ ಉದ್ಯೋಗ ನೀಡುವ ಗುರಿ ಹೊಂದಲಾಗಿದೆ ಎಂದರು.

ಪ್ರಸ್ತುತ ರಾಜ್ಯ ಸರ್ಕಾರದಲ್ಲಿ ಆಡಳಿತ ಪಕ್ಷದ ಶಾಸಕರಿಗೆ ಸಿಗಬೇಕಾದ ಸೌಲಭ್ಯಗಳು ಸಿಗುತ್ತಿಲ್ಲ. ಹೀಗಾಗಿ ಸರ್ಕಾರದ ವಿರುದ್ಧ ಸ್ವಪಕ್ಷೀಯ ಶಾಸಕರು ಬಂಡೆದ್ದಿದ್ದಾರೆ. ಇನ್ನು ಪ್ರತಿಪಕ್ಷ ಶಾಸಕರಾದ ನಮಗೆಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡುತ್ತಾರೆ ಎಂದು ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆಗಳಿಗಾಗಿ ಹಣ ಬಳಕೆ ಮಾಡಿಕೊಳ್ಳುತ್ತಿದ್ದು, ಶಾಸಕರು ಯಾರು ಅನುದಾನ ಕೇಳಬೇಡಿ ಎಂದು ಸ್ವತಃ ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಸರ್ಕಾರದ ಅನವಶ್ಯಕ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗುತ್ತಿದೆ. ಗೃಹಲಕ್ಷ್ಮಿ, ಪಡಿತರ ಬದಲು ಖಾತೆಗೆ ಹಣ ಹಾಕುವ ಯೋಜನೆಗಳಿಂದ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚಾಗಿ ಒಳ್ಳೆಯ ಉದ್ದೇಶಕ್ಕೆ ಕೊಡುವ ಹಣ ದುರ್ಬಳಕೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆ.ಆರ್.ಪೇಟೆ ಅಭಿವೃದ್ಧಿಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು, ಅಭಿವೃದ್ಧಿಗೆ ರಾಜ್ಯ ಸರ್ಕಾರ ಒತ್ತು ಕೊಡುತ್ತಿಲ್ಲ. ಸರ್ಕಾರ ಅಧಿಕಾರಕ್ಕೆ ಬಂದು 3 ತಿಂಗಳಾದರೂ ಗ್ಯಾರಂಟಿಗಳನ್ನು ಬಿಟ್ಟರೇ ಯಾವುದೇ ಹೊಸ ಯೋಜನೆಗಳನ್ನು ಘೋಷಿಸಿಲ್ಲ. ಸರ್ಕಾರ ಅಭಿವೃದ್ಧಿಗೆ ಸ್ಪಂದಿಸದಿದ್ದರೂ ನನ್ನ ಕೈಲಾದ ಕೆಲಸ ಮಾಡಿ ಕ್ಷೇತ್ರದ ಅಭಿವೃದ್ಧಿ ಮಾಡುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆ.ಆರ್.ಪೇಟೆ ಕೃಷಿ ಪ್ರಧಾನ ಪ್ರದೇಶವಾಗಿದ್ದು, ನೀರಾವರಿಗೆ ಹೆಚ್ಚಿನ ಒತ್ತು ಕೊಡಬೇಕಿದೆ. ಈ ಹಿಂದೆ ಕುಮಾರಸ್ವಾಮಿ ಜಾರಿಗೊಳಿಸಿದ್ದ ಜಲಧಾರೆ ಯೋಜನೆಯಿಂದ ತಾಲೂಕಿನ ನೀರಾವರಿ ಪ್ರದೇಶಕ್ಕೆ ಅನುಕೂಲವಾಗಿದ್ದು, ಪ್ರಸ್ತುತ ಅದು ಜಲಜೀವನ್ ಆಗಿ ಬದಲಾವಣೆಯಾಗಿದೆ. ಕುಡಿಯುವ ನೀರು, ಕೃಷಿ ಪ್ರದೇಶಕ್ಕೆ ನೀರು ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಸಭೆ ಮಾಡಿದ್ದೇನೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೇಮಾವತಿ ನೀರನ್ನು ತಾಲೂಕಿಗೆ ಸಮರ್ಪಕವಾಗಿ ಕೊಡಲು ನಾನು ಸರ್ಕಾರವನ್ನು ಒತ್ತಾಯಿಸಿದ್ದೇನೆ ಎಂದರು.

ಮಳೆ ಬಂದಾಗ ಕೆ.ಆರ್.ಪೇಟೆ ಬಸ್ ನಿಲ್ದಾಣದಲ್ಲಿ ನೀರು ತುಂಬಿಕೊಳ್ಳುವ ಬಗ್ಗೆ ಈಗಾಗಲೇ ಸಾರಿಗೆ ಸಚಿವರ ಗಮನಕ್ಕೆ ತಂದಿದ್ದು, ಶಾಶ್ವತ ಪರಿಹಾರ ಒದಗಿಸಿಕೊಡಿ ಎಂದು ಮನವಿ ಮಾಡಲಾಗಿದೆ. ಜೊತೆಗೆ ತಾಲೂಕಿನ ಹಲವು ಕಡೆ ಹಳ್ಳಿಗಳಿಗೆ ಬಸ್ ಸಮಸ್ಯೆ ಇದ್ದು, ಇದರಿಂದ ಶಾಲಾ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ. ಇದನ್ನು ಸಹ ಪರಿಹರಿಸಿ ಹೆಚ್ಚಿನ ಬಸ್ ವ್ಯವಸ್ಥೆಗೆ ಸಾರಿಗೆ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ ಎಂದು ಹೇಳಿದರು.

ಹಾಲಿನ ದರ ಹೆಚ್ಚಳ



ಮಂಡ್ಯ, ಆ.1– ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ನಿ., ಬೆಂಗಳೂರು ಆ.1 ರಿಂದ ಅನ್ವಯವಾಗುವಂತೆ ನಂದಿನಿ ಹಾಲು ಮತ್ತು ಮೊಸರಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ 3 ರೂ. ಹೆಚ್ಚಿಸಿ, ಅದರ ಸಂಪೂರ್ಣ ಮೊತ್ತವನ್ನು ಹಾಲು ಉತ್ಪಾದಕರಿಗೆ ವರ್ಗಾಯಿಸಲು ಸೂಚಿಸಿದೆ

ಮನ್‌ಮುಲ್‌ನಲ್ಲಿ ಪ್ರಸ್ತುತ ನಿತ್ಯ 9.82 ಲಕ್ಷ ಲೀ. ಹಾಲು ಸಂಗ್ರಹಿಸಲಾಗುತ್ತಿದ್ದು, ಈ ಪೈಕಿ 3.5 ಲಕ್ಷ ಲೀ. ಹಾಲು ಹಾಗೂ 68,000 ಕೆಜಿ ಮೊಸರು ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ 3 ರೂ. ಮಾರಾಟ ದರ ಹೆಚ್ಚಿಸಿ, ನಿಗದಿಪಡಿಸಿರುವ ದರದಲ್ಲಿ ಮಾರಾಟ ಮಾಡುತ್ತಿರುವ ಹಾಲು ಮತ್ತು ಮೊಸರಿಗೆ ಮಾತ್ರ ಒಕ್ಕೂಟಕ್ಕೆ ಲಾಭ ಲಭಿಸುತ್ತದೆ. ಆದರೂ ಉತ್ಪಾದಕರನ್ನು ಗಮನದಲ್ಲಿಟ್ಟುಕೊಂಡು ಜು.31 ರಂದು ನಡೆದ ಒಕ್ಕೂಟದ 445ನೇ ಆಡಳಿತ ಮಂಡಳಿ ಸಭೆಯಲ್ಲಿ ರೈತರಿಂದ ಖರೀದಿಸುವ ಪ್ರತಿ ಲೀ. ಹಾಲಿಗೆ 3 ರೂ. ಹೆಚ್ಚಳ ಮಾಡಿ, ಹಾಲು ಉತ್ಪಾದಕರ ಖರೀದಿ ದರವನ್ನು ಆ.1ರಿಂದ ಶೇ.4.0 ಜಿಡ್ಡು ಮತ್ತು ಶೇ.8.5 ಜಿಡ್ಡೇತರ ಘನಾಂಶ ಇರುವ ಪ್ರತಿ ಲೀ. ಹಾಲಿಗೆ 30.50 ರೂ. ಬದಲಾಗಿ 33.50 ರೂ. ನಿಗದಿಪಡಿಸಲು ತೀರ್ಮಾನಿಸಲಾಗಿದೆ ಎಂದು ಮನ್‌ಮುಲ್ ಪ್ರಕಟಣೆ ತಿಳಿಸಿದೆ.

ಜನನ, ಮರಣ ನೋಂದಣಿ ತಿದ್ದುಪಡಿ ಕಾಯ್ದೆಗೆ ಲೋಕಸಭೆ ಅನುಮೋದನೆ

ನವದೆಹಲಿ: ಜನನ ಮತ್ತು ಮರಣಗಳ ನೋಂದಣಿ ಕಾಯ್ದೆ–1969ಕ್ಕೆ ತಿದ್ದುಪಡಿ ತರುವ ಮಸೂದೆಗೆ ಲೋಕಸಭೆಯಲ್ಲಿ ಮಂಗಳವಾರ ಅನುಮೋದನೆ ದೊರೆತಿದೆ.

ಶಾಲಾ–ಕಾಲೇಜು ಪ್ರವೇಶಕ್ಕೆ, ಚಾಲನಾ ಪರವಾನಗಿ ಪಡೆಯಲು, ಸರ್ಕಾರಿ ನೌಕರಿಯ ನೇಮಕಾತಿಗೆ, ಮತದಾರರ ಪಟ್ಟಿ ಸಿದ್ಧಪಡಿಸಲು, ಆಧಾರ್ ಸಂಖ್ಯೆ ನೀಡಲು ಹಾಗೂ ವಿವಾಹ ನೋಂದಣಿ ಸಂದರ್ಭದಲ್ಲಿ ಜನನ ಪ್ರಮಾಣಪತ್ರವನ್ನು ಏಕೈಕ ದಾಖಲೆಯಾಗಿ ಬಳಸಲು ಈ ತಿದ್ದುಪಡಿ ಅವಕಾಶ ಮಾಡಿಕೊಡಲಿದೆ. ಕಾಯ್ದೆ ಪರಿಣಾಮವಾಗಿ ಜನನ ಮತ್ತು ಮರಣಗಳ ಕುರಿತು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ದತ್ತಾಂಶ ಸಂಗ್ರಹವಾಗಲಿದೆ. ಇದರ ಆಧಾರದಲ್ಲಿ ನಾಗರಿಕ ಸೇವೆ, ಸಾಮಾಜಿಕ ಸವಲತ್ತು, ಡಿಜಿಟಲ್ ನೋಂದಣಿಯ ಸಮರ್ಪಕ, ಪಾರದರ್ಶಕ ಜಾರಿ ಸಾಧ್ಯವಾಗಲಿದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಕಾಯ್ದೆ ಕುರಿತ ಚರ್ಚೆಯ ವೇಳೆ ವಿವರಿಸಿದರು. ಈ ಕಾಯ್ದೆ ಜಾರಿಗೆ ಬಂದಾಗಿನಿಂದ ಈವರೆಗೆ ತಿದ್ದುಪಡಿಯಾಗಿರಲೇ ಇಲ್ಲ. ಈ ಅವಧಿಯಲ್ಲಿ ಆಗಿರುವ ಸಾಮಾಜಿಕ ಬದಲಾವಣೆ, ತಾಂತ್ರಿಕ ಬೆಳವಣಿಗೆಯೊಂದಿಗೆ ಹೆಜ್ಜೆ ಹಾಕಲು ಮತ್ತು ಕಾಯ್ದೆಯನ್ನು ಇನ್ನಷ್ಟು ನಾಗರಿಕ ಸ್ನೇಹಿಯಾಗಿಸಲು ತಿದ್ದುಪಡಿ ಅಗತ್ಯವಾಗಿತ್ತು ಎಂದು ರಾಯ್ ಹೇಳಿದರು.

ದಕ್ಷಿಣ ಕನ್ನಡ: 16 ವರ್ಷದ ಬಾಲಕಿ ಮೇಲೆ ಹಲವು ಬಾರಿ ಅತ್ಯಾಚಾರ; ಐವರ ಪೈಕಿ ನಾಲ್ವರ ಬಂಧನ

ಕಾಸರಗೋಡು: ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 16 ವರ್ಷದ ದಲಿತ ಬಾಲಕಿಯ ಮೇಲೆ ಐವರು ಆರೋಪಿಗಳು ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಪೋಕ್ಸೊ ಕಾಯ್ದೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ(ದೌರ್ಜನ್ಯ ತಡೆ) ಕಾಯ್ದೆಯಡಿ ಐವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಮುಖ್ಯಸ್ಥ ಸಿ.ಬಿ. ರಿಶ್ಯಂತ್ ಹೇಳಿದ್ದಾರೆ. ಇವರಲ್ಲಿ ನಾಲ್ವರು ವಿಟ್ಲ ನಿವಾಸಿಗಳು ಮತ್ತು ಒಬ್ಬರು ಕಾಸರಗೋಡಿನವರಾಗಿದ್ದು, ಅವರ ಮನೆಗಳು ಕರ್ನಾಟಕ ಮತ್ತು ಕೇರಳದ ಗಡಿಯಲ್ಲಿವೆ ಎಂದು ರಿಷ್ಯಂತ್ ಹೇಳಿದರು. ಮೂಲಗಳ ಪ್ರಕಾರ, ಪೊಲೀಸರು ಐದು ಆರೋಪಿಗಳಲ್ಲಿ ನಾಲ್ವರನ್ನು ಬಂಧಿಸಿದ್ದಾರೆ. ಆರೋಪಿಗಳು ಸುಕುಮಾರ್ ಬೆಲ್ಚಡ (28), ಬಾಯಾರ ಗ್ರಾಮದ ಕೋಜಪ್ಪ ನಿವಾಸಿ ಕಮಲಾಕ್ಷ ಬೆಳ್ಚಡ (30, ಮೂಡುಬಿದಿರೆ ಮೂಲದ ಬೇರಿಪದವು ನಿವಾಸಿ ಅಕ್ಷಯ್ ದೇವಾಡಿಗ (24) ಮತ್ತು ಜಯಪ್ರಕಾಶ್ ಬಂಧಿತರು. ಅಕ್ಷಯ್ ಪೇಂಟರ್ ಆಗಿ ಕೆಲಸ ಮಾಡುತ್ತಿದ್ದು, ತನ್ನ ಅಣ್ಣನೊಂದಿಗೆ ಬೇರಿಪದವುನಲ್ಲಿ ನೆಲೆಸಿದ್ದಾನೆ. ಕಮಲಾಕ್ಷ ಮೇಸ್ತ್ರಿ, ಮತ್ತು ಸುಕುಮಾರ್ ವಾಹನ ಚಾಲಕ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕಿಯ ದೂರಿನ ಪ್ರಕಾರ, ಜುಲೈ 28ರ ಶುಕ್ರವಾರದಂದು ಕೊನೆಯದಾಗಿ ವಿವಿಧ ಸ್ಥಳಗಳಲ್ಲಿ ಅನೇಕ ಬಾರಿ ಅತ್ಯಾಚಾರ ನಡೆಸಲಾಗಿದೆ. ವೈದ್ಯಕೀಯ ಪರೀಕ್ಷೆಯಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ದೃಢಪಟ್ಟಿದೆ ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಸಂಪುಟದಲ್ಲಿ ಸ್ಥಾನ

ಕರ್ನಾಟಕ ಭಾಗದಲ್ಲಿ ಲಾಭವಾಗಿದೆ. ಇದನ್ನು ಲೋಕಸಭಾ ಚುನಾವಣೆಗೂ ಮುಂದುವರೆಸಬೇಕು. ಇವರ ಸೇವೆಯನ್ನು ಸರ್ಕಾರ ಮತ್ತು ಪಕ್ಷದಲ್ಲಿ ಬಳಸಿಕೊಳ್ಳಬೇಕು. ಪ್ರಸಕ್ತ ಸನ್ನಿವೇಶದಲ್ಲಿ ಸಿದ್ದರಾಮಯ್ಯ ಸಂಪುಟ ಸಂಪೂರ್ಣ ಭರ್ತಿಯಾಗಿದೆ. ಇವರಿಗಾಗಿ ಕೆಲವರು ತಮ್ಮ ಅಧಿಕಾರ ತ್ಯಜಿಸಿ ಅವಕಾಶ ಮಾಡಿಕೊಡಬೇಕು. ನಿಮಗೆ ಮುಂದಿನ ದಿನಗಳಲ್ಲಿ ಪಕ್ಷ ಒಳ್ಳೆಯ ಅವಕಾಶ ನೀಡಲಿದೆ ಎಂಬ ಸಂದೇಶವನ್ನು ನೀಡಲಾಗುತ್ತದೆ. ಯಾರು ಸಂಪುಟದಿಂದ ಹೊರ ಹೋಗಬೇಕು ಎಂಬುದನ್ನು ಬಹಿರಂಗಗೊಳಿಸುವುದಿಲ್ಲ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಇದರ ಜತೆಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಹಾಗೂ ಅಭಿವೃದ್ಧಿ ವಿಚಾರ ಕುರಿತ ವಿಚಾರಗಳು ಚರ್ಚೆಯಾಗಲಿವೆ ಎಂದು ಇದೇ ಮೂಲಗಳು ಹೇಳಿವೆ.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ 36 ಮಂದಿಗೆ ಸಭೆಯಲ್ಲಿ ಭಾಗವಹಿಸಲು ಆಹ್ವಾನ ನೀಡಿದ್ದಾರೆ. ಸಚಿವರಾದ ಡಾ.ಜಿ.ಪರಮೇಶ್ವರ್, ಎಂ.ಬಿ. ಪಾಟೀಲ್, ಸತೀಶ್ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಈಶ್ವರ್ ಖಂಡ್ರೆ, ಹೆಚ್.ಕೆ. ಪಾಟೀಲ್, ಕೆ.ಎಚ್.ಮುನಿಯಪ್ಪ, ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಜಮೀರ್ ಅಹಮದ್ ಖಾನ್, ಚಲುವರಾಯಸ್ವಾಮಿ, ಹೆಚ್.ಸಿ.ಮಹದೇವಪ್ಪ, ಶಿವಾನಂದ ಪಾಟೀಲ್, ಎಸ್.ಎಸ್.ಮಲ್ಲಿಕಾರ್ಜುನ್, ಮಧು ಬಂಗಾರಪ್ಪ, ಬೋಸರಾಜ್, ಪ್ರಿಯಾಂಕ ಖರ್ಗೆ, ಶಾಸಕರಾದ ರಾಘವೇಂದ್ರ ಹಿಟ್ನಾಳ್, ತುಕಾರಾಂ, ಸಲೀಂ ಅಹ್ಮದ್, ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿ, ಬಿ.ಕೆ.ಹರಿಪ್ರಸಾದ್, ಆರ್.ವಿ.ದೇಶಪಾಂಡೆ, ವಿನಯ್ ಕುಲಕರ್ಣಿ, ಚಂದ್ರಪ್ಪ, ರಮೇಶ್ ಕುಮಾರ್, ಬಿ.ಎಲ್. ಶಂಕರ್, ಸಂಸದರಾದ ಡಿ.ಕೆ.ಸುರೇಶ್, ಎಲ್. ಹನುಮಂತಯ್ಯ, ಶ್ರೀಧರ್ ಬಾಬು, ಮಯೂರ ಜೈಕುಮಾರ್, ರೋಜಿ ಜಾನ್, ಅಭಿಷೇಕ್ ದತ್ ಅವರನ್ನು ಸಭೆಗೆ ಆಹ್ವಾನಿಸಲಾಗಿದೆ.

ಸಬ್‌ಇನ್ಸ್‌ಪೆಕ್ಟರ್ ಸೇರಿ ಪೊಲೀಸ್ ಇಲಾಖೆಯ 20 ಸಾವಿರ ಹುದ್ದೆ ಭರ್ತಿ

• ಇದೇ ವೇಳೆ 700 ರವರೆಗೆ ಎಎಸ್‌ಐಗಳಿಗೆ ಎಸ್‌ಐಗಳಾಗಿ ಬಡ್ತಿ • ಗೃಹ ಸಚಿವ ಡಾ. ಜಿ. ಪರಮೇಶ್ವರ್ ಮಾಹಿತಿ



ಬೆಂಗಳೂರು, ಆ.1(ಕೆಎಂಶಿ)–ಪೊಲೀಸ್ ಇಲಾಖೆಯನ್ನು ಬಲಪಡಿಸಲು ಸರ್ಕಾರ ಮುಂದಾಗಿದ್ದು ಸಬ್ ಇನ್ಸ್‌ಪೆಕ್ಟರ್, ಕಾನ್ಸ್‌ಸ್ಟೇಬಲ್ ಸೇರಿದಂತೆ 20 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಪ್ರಕಟಿಸಿದ್ದಾರೆ.

600ರಿಂದ 700 ಎಎಸ್‌ಐಗಳನ್ನು ಸೇವಾ ಹಿರಿತನದ ಆಧಾರದ ಮೇಲೆ ಪಿಎಸ್‌ಐ ಹುದ್ದೆಗೆ ಬಡ್ತಿ ನೀಡುವುದಾಗಿ ತಿಳಿಸಿದ್ದಾರೆ. ಸಿಬಿಐಗಿರುವ ಮುಕ್ತಾವಕಾಶವನ್ನು ಹಿಂದಕ್ಕೆ ಪಡೆಯಲು ಸರ್ಕಾರದ ಮೇಲೆ ಒತ್ತಡವಿದೆ. ಆದರೆ, ಇದುವರೆಗೆ ನಾವು ಯಾವುದೇ ತೀರ್ಮಾನ ಕೈಗೊಂಡಿಲ್ಲ. ಸಮಯ ಸಂದರ್ಭ ನೋಡಿ ಮುಂದಿನ ದಿನಗಳಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗಾಗಲೇ ಬೆಂಗಳೂರು ನಗರಕ್ಕೆ 2500 ಹಾಗೂ ರಾಜ್ಯದ ವಿವಿಧ ಭಾಗಗಳಿಗೆ 3500 ಕಾನ್ಸ್‌ಸ್ಟೇಬಲ್ ಹುದ್ದೆಗಳ ನೇಮಕಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿದ್ದು, ಪ್ರಕ್ರಿಯೆ ಆರಂಭಗೊಂಡಿದೆ.

1000 ಪಿಎಸ್‌ಐ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಿದ್ದೇವೆ. ಹಿಂದಿನ ಸರ್ಕಾರದಲ್ಲಿ 540 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿ ಪ್ರಕರಣ ನ್ಯಾಯಾಲಯದಲ್ಲಿದೆ. ಅದು ಇತ್ಯರ್ಥವಾಗದೇ ಈ ಹುದ್ದೆಗಳ ನೇಮಕಾತಿ ಕಷ್ಟಕರವಾಗಿದೆ. ನೇಮಕಾತಿಗೆ ಸಂಬಂಧಿಸಿದಂತೆ ಮರು ಪರೀಕ್ಷೆ ಮಾಡಬೇಕೇ ಇಲ್ಲವೆ, ಆರೋಪಿಗಳನ್ನು ಹೊರಗಿಟ್ಟು ಉಳಿದವರಿಗೆ ನೇಮಕಾತಿ ಆದೇಶ ನೀಡಬೇಕೇ ಎಂಬ ಬಗ್ಗೆ ರಾಜ್ಯದ ಅಡ್ವೋಕೇಟ್ ಜನರಲ್ ಮೂಲಕ ನ್ಯಾಯಾಲಯದ ನಿರ್ದೇಶನ ಕೋರಲಾಗಿದೆ ಎಂದರು.

ಇದಾದ ನಂತರ ಉಳಿದ 400 ಪಿಎಸ್‌ಐ ಹುದ್ದೆಗಳನ್ನು ನೇಮಕ ಮಾಡುತ್ತೇವೆ. ಈ ಮಧ್ಯೆ ಪಿಎಸ್‌ಐ ಹುದ್ದೆಗಳ ಕೊರತೆ ಹೆಚ್ಚಾಗುತ್ತಿರುವುದರಿಂದ ಪೊಲೀಸ್ ಕಾಯ್ದೆಯ 32ನೇ ನಿಯಮದ ಪ್ರಕಾರ ಸಹಾಯಕ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಬಡ್ತಿ ನೀಡಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹರಡುವವರನ್ನು ನಿಯಂತ್ರಿಸಲು ನೂತನ ಸೈಬರ್ ಕಾಯ್ದೆಯನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ. ಈಗ ಅಸ್ತಿತ್ವದಲ್ಲಿರುವ ಕೇಂದ್ರದ ಸೈಬರ್ ಕಾಯ್ದೆಯ ಜತೆ ರಾಜ್ಯದ ಸೈಬರ್ ಕಾಯ್ದೆಯೂ ಜಾರಿಗೆ ಬರಲಿದೆ ಎಂದರು.

ಈ ಸಂಬಂಧ ಗೃಹ ಇಲಾಖೆ, ಐಟಿ ಇಲಾಖೆ ಮತ್ತು ಸೈಬರ್ ಕಾನೂನಿನ ತಜ್ಞರು ಸೇರಿದಂತೆ ಹಲವರು ಇರುವ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಗಿದ್ದು, ನೂತನ ಸೈಬರ್ ಕಾಯ್ದೆಯ ಸ್ವರೂಪ ಹೇಗಿರಬೇಕು ಎಂಬ ಕುರಿತು ಈ ಸಮಿತಿ ವರದಿ ನೀಡಲಿದೆ ಎಂದರು.

ಸೈಬರ್ ಅಪರಾಧಗಳಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸುವುದು ಕಠಿಣ. ಯಾಕೆಂದರೆ ಫೇಸ್‌ಬುಕ್‌ನಲ್ಲೋ, ವಾಟ್ಸಾಪ್‌ನಲ್ಲೋ, ಟ್ವಿಟರ್‌ನಲ್ಲೋ ಸುಳ್ಳು ಸುದ್ದಿ ಹರಡುವವರು ದೂರದ ದುಬೈಯಿಂದ, ಮಧ್ಯಪ್ರಾಚ್ಯ ದೇಶಗಳಿಂದ ಪೋಸ್ಟ್ ಮಾಡಿರುತ್ತಾರೆ.

ಇಂತಹವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಫೇಸ್ ಬುಕ್, ವಾಟ್ಸಾಪ್, ಟ್ವಿಟರ್ ಮುಖ್ಯಸ್ಥರಿಗೆ ಪತ್ರ ಬರೆದರೆ ಅವರು ನಿರ್ಲಕ್ಷ್ಯ ತೋರುತ್ತಾರೆ. ದೂರದ ಅಮೆರಿಕದಲ್ಲಿ ಅವುಗಳ ಸರ್ವರ್ ಇರುವುದರಿಂದ ಇಲ್ಲಿನ ಕಾನೂನಿಗೆ ಅವರು ಸ್ಪಂದಿಸುತ್ತಿಲ್ಲ.

ಆದರೆ ಹೊಸ ಕಾಯ್ದೆಯನ್ನು ರಾಜ್ಯವೇ ರೂಪಿಸಿ ಫೇಸ್‌ಬುಕ್, ವಾಟ್ಸಾಪ್ ಮತ್ತು ಟ್ವಿಟರ್‌ಗಳ ಭಾರತೀಯ ಮುಖ್ಯಸ್ಥರನ್ನು ವಿಚಾರಣೆಗೆ ಕರೆಸಿದರೆ ಸೈಬರ್ ಅಪರಾಧಗಳನ್ನು ಗಣನೀಯ ಪ್ರಮಾಣದಲ್ಲಿ ನಿಯಂತ್ರಿಸಬಹುದು ಎಂದರು.

ಮೈಸೂರು ನಗರ, ಜಿಲ್ಲೆಯ ಹಲವು ಇನ್ಸ್‌ಪೆಕ್ಟರ್‌ಗಳ ವರ್ಗಾವರ್ಗಿ




ಮೈಸೂರು, ಆ.1(ಎಂಕೆ)– ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 211 ಮಂದಿ ಪೊಲೀಸ್ ಇನ್ಸ್‌ಪೆಕ್ಟರ್(ಸಿವಿಲ್)ಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಪೊಲೀಸ್ ಇಲಾಖೆ ಆದೇಶ ಹೊರಡಿಸಿದೆ.

ಮೈಸೂರು ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಕುಮಾರ್ ಅವರನ್ನು ನಗರದ ಸಿಇಎನ್(ಸೆನ್) ಠಾಣೆಗೆ, ಮೈಸೂರು ನಗರ ಸಿಸಿಆರ್‌ಬಿ ಯಲ್ಲಿದ್ದ ಮೊಹಮ್ಮದ್ ಇರ್ಷಾದ್ ಅವರನ್ನು ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆಗೆ, ಹೆಬ್ಬಾಳ ಠಾಣೆಯಲ್ಲಿದ್ದ ಕೆ.ಆರ್.ಪ್ರಸಾದ್ ಅವರನ್ನು ಲಷ್ಕರ್ ಪೊಲೀಸ್ ಠಾಣೆಗೆ ಹಾಗೂ ಸ್ಥಳ ನಿರೀಕ್ಷೆಯಲ್ಲಿದ್ದ ಕುಮಾರ ಅವರನ್ನು ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ. ಹಾಗೆಯೇ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿದ್ದ ಎಂ.ಆರ್. ಲವ ಅವರನ್ನು ವಿವಿಪುರಂ ಸಂಚಾರ ಪೊಲೀಸ್ ಠಾಣೆಗೆ, ಮೈಸೂರು ನಗರ ಸಿಸಿಬಿ–2 ನಲ್ಲಿದ್ದ ಎ.ಮಲ್ಲೇಶ ಅವರನ್ನು ಹೆಬ್ಬಾಳ ಪೊಲೀಸ್ ಠಾಣೆಗೆ, ಸಿಟಿ ಎಸ್‌ಬಿಯಲ್ಲಿದ್ದ ಎನ್.ಸಿ. ನಾಗೇಗೌಡ ಅವರನ್ನು ಕೃಷ್ಣರಾಜ ಪೊಲೀಸ್ ಠಾಣೆಗೆ, ಲಕ್ಷ್ಮಿಪುರಂ ಠಾಣೆಯಲ್ಲಿದ್ದ ಮೋಹಿತ್ ಸಹದೇವ್ ಅವರನ್ನು ವಿದ್ಯಾರಣ್ಯಪುರಂ ಠಾಣೆಗೆ ಹಾಗೂ ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿದ್ದ ಹೆಚ್.ಎಂ. ರೇಖಾಬಾಯಿ ಅವರನ್ನು ನರಸಿಂಹರಾಜ ಸಂಚಾರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ.

ಬಿಳಿಕೆರೆ ಪೊಲೀಸ್ ಠಾಣೆಯಲ್ಲಿದ್ದ ಚಿಕ್ಕಸ್ವಾಮಿ ಅವರನ್ನು ಬೆಂಗಳೂರಿನ ಬಸವೇಶ್ವರ ನಗರ ಠಾಣೆಗೆ, ಸ್ಥಳ ನಿರೀಕ್ಷೆಯಲ್ಲಿದ್ದ ಎಸ್.ಎಂ.ದೇವೇಂದ್ರ ಅವರನ್ನು ಹುಣಸೂರು ನಗರ ಪೊಲೀಸ್ ಠಾಣೆಗೆ, ಬನ್ನೂರು ಠಾಣೆಯಲ್ಲಿದ್ದ ಟಿ.ಎಸ್. ಲೋಲಾಕ್ಷಿ ಅವರನ್ನು ಬಿಳಿಕೆರೆ ಠಾಣೆಗೆ, ಮೈಸೂರಿನ ವಿದ್ಯಾರಣ್ಯಪುರಂ ಠಾಣೆಯಲ್ಲಿದ್ದ ಇನ್ಸ್‌ಪೆಕ್ಟರ್ ಜಿ.ಸಿ.ರಾಜ ಅವರನ್ನು ಎಸ್‌ಐಡಿ ಗೆ, ಕರ್ನಾಟಕ ಲೋಕಾಯುಕ್ತದಲ್ಲಿದ್ದ ಕೆ.ರಾಜೇಶ್ ಅವರನ್ನು ಕುಶಾಲನಗರ ವೃತ್ತ, ಸ್ಥಳ ನಿರೀಕ್ಷೆಯಲ್ಲಿದ್ದ ಕೆ.ಸಂತೋಷ್ ಅವರನ್ನು ಮಂಡ್ಯ ಸಂಚಾರ ಪೊಲೀಸ್ ಠಾಣೆ ವರ್ಗಾಯಿಸಲಾಗಿದೆ.

ಪ್ರಧಾನಿಗೆ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ; ಗಂಗೆಗೆ ಅರ್ಪಿಸಿದ ಮೋದಿ




ಪುಣೆ: ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪುಣೆಯಲ್ಲಿ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ವೀಕರಿಸಿದರು. ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಈ ಪ್ರಶಸ್ತಿ ಜೊತೆಗೆ ಬಂದ ಹಣವನ್ನು ನಮಾಮಿ ಗಂಗೆ ಯೋಜನೆಗೆ ನೀಡುವುದಾಗಿ ಹೇಳಿದ ಅವರು ಇದು ಇಡೀ ದೇಶದ ಜನರಿಗೆ ಸಿಕ್ಕ ಪ್ರಶಸ್ತಿ ಎಂದಿದ್ದಾರೆ.

ಮಂಗಳವಾರ ಬೆಳಗ್ಗೆ 11 ಗಂಟೆಯ ವೇಳೆಗೆ ಪುಣೆಗೆ ಆಗಮಿಸಿದ ಅವರು ಮೊದಲು ದಗ್ದುಶೇತ್ ಹಲ್ವಾಯಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಇದಾದ ಬಳಿಕ ಎಸ್‌ಪಿ ಕಾಲೇಜು ಮೈದಾನಕ್ಕೆ ಆಗಮಿಸಿದ ಅವರು ತಿಲಕ್ ಸ್ಮಾರಕ ಮಂದಿರ ಟ್ರಸ್ಟ್ ವತಿಯಿಂದ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಉಪಸ್ಥಿತರಿದ್ದರು. ಶರದ್ ಪವಾರ್ ಅವರು ಪ್ರಧಾನಿ ಮೋದಿಯವರ ಒಂದು ಬದಿಯಲ್ಲಿ ಕುಳಿತಿದ್ದರು ಮತ್ತು ಇನ್ನೊಂದು ಬದಿಯಲ್ಲಿ ಅವರ ಸೋದರಳಿಯ ಅಜಿತ್ ಪವಾರ್ ವೇದಿಕೆಯಲ್ಲಿ ಕುಳಿತಿದ್ದರು. ಪುಣೆಯ ನೆಲದಲ್ಲಿ ಈ ಪ್ರಶಸ್ತಿ ಸ್ವೀಕರಿಸಿದ್ದು ನನಗೆ ಮರೆಯಲಾಗದ ಅನುಭವ ಎಂದು ಈ ಸಂದರ್ಭದಲ್ಲಿ ಪ್ರಧಾನಿ ಹೇಳಿದರು.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರಿಂದ ಪ್ರಧಾನಿ ಮೋದಿ ಪ್ರಶಸ್ತಿಯನ್ನು ಸ್ವೀಕರಿಸಿದರು. 'ಈ ಪ್ರಶಸ್ತಿ ನೀಡಿದ್ದಕ್ಕೆ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು. ಈ ದಿನ ನನಗೆ ಬಹಳ ಮುಖ್ಯವಾದ ಹಾಗೂ ನೆನಪಿನಲ್ಲಿರುವ ದಿನ. ಸ್ವಾತಂತ್ರ್ಯ ಹೋರಾಟದಲ್ಲಿ ತಿಲಕರ ಪಾತ್ರ, ಪದಗಳಲ್ಲಿ ಅಥವಾ ಕೆಲವು ಘಟನೆಗಳ ಮೂಲಕ ಹೇಳಲು ಸಾಧ್ಯವಿಲ್ಲ. ಈ ಪ್ರಶಸ್ತಿಯನ್ನು ದೇಶದ 140 ಕೋಟಿ ಜನರಿಗೆ ಅರ್ಪಿಸುತ್ತೇನೆ. ಈ ಪ್ರಶಸ್ತಿಯ ಹಣವನ್ನು ನಮಾಮಿ ಗಂಗೆ ಯೋಜನೆಗೆ ನೀಡಲು ನಿರ್ಣಯಿಸಿದ್ದೇನೆ ಎಂದು ಲೋಕಮಾನ್ಯ ತಿಲಕ ಪ್ರಶಸ್ತಿ ಪಡೆದ ಬಳಿಕ ಮೋದಿ ಹೇಳಿದ್ದಾರೆ.

ಭೂಮಿಯ ಕಕ್ಷೆ ತೊರೆದು ಚಂದ್ರನತ್ತ ಪಯಣ ಆರಂಭಿಸಿದ ಚಂದ್ರಯಾನ–3



ಶ್ರೀಹರಿಕೋಟಾ: ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಮಹತ್ವಾಕಾಂಕ್ಷೆಯ ಚಂದ್ರಯಾನ–3 ನೌಕೆಯು ಭೂಮಿಯ ಕಕ್ಷೆ ತೊರೆದು ಚಂದ್ರನತ್ತ ಪಯಣ ಆರಂಭಿಸಿದೆ.

ಈ ಬಗ್ಗೆ ಸ್ವತಃ ಇಸ್ರೋ ಮಾಹಿತಿ ನೀಡಿದ್ದು, ಚಂದ್ರಯಾನ–3 'ಬಾಹ್ಯಾಕಾಶ ನೌಕೆ'ಯನ್ನು ಟ್ರಾನ್ಸ್‌ಲೂನಾರ್ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿದ್ದೇವೆ. 'ಚಂದ್ರಯಾನ–3 ಬಾಹ್ಯಾಕಾಶ ನೌಕೆ ಭೂಮಿಯ ಸುತ್ತಲಿನ ಕಕ್ಷೆಯನ್ನು ಪೂರ್ಣಗೊಳಿಸಿದ್ದು, ಚಂದ್ರನ ಕಕ್ಷೆಯತ್ತ ಸಾಗಿದೆ. ಇದೀಗ 'ಲೂನಾರ್ ಟ್ರಾನ್ಸ್‌ಫರ್ ಟ್ರಾಜೆಕ್ಟರಿ' ಪಥದಲ್ಲಿ ನೌಕೆ ಸಾಗುತ್ತಿದೆ' ಎಂದು ಇಸ್ರೊ ತಿಳಿಸಿದೆ.

'ಸೋಮವಾರ ಮಧ್ಯರಾತ್ರಿ ಭೂಮಿಯ ಕಕ್ಷೆಯಿಂದ ಬೇರ್ಪಟ್ಟ ನೌಕೆ ಚಂದ್ರನೆಡೆಗೆ ಸಾಗಿದ್ದು, ನೌಕೆ ಚಂದ್ರನತ್ತ ಆಗಮಿಸುತ್ತಿದ್ದಂತೆ ಲೂನಾರ್–ಆರ್ಬಿಟ್ ಇನ್‌ಸರ್ಶನ್ (ಎಲ್‌ಓಐ) ಕಾರ್ಯ ಪ್ರಾರಂಭವಾಗುತ್ತದೆ. ಆಗಸ್ಟ್ 5ಕ್ಕೆ ಎಲ್‌ಓಐ ಮಾಡಲು ಯೋಜಿಸಲಾಗಿದೆ. ಆಗಸ್ಟ್ 17ರಂದು ಪ್ರೊಪಲ್ಷನ್ ಮಾಡ್ಯೂಲ್ ಮತ್ತು ಲ್ಯಾಂಡರ್ ಮಾಡ್ಯೂಲ್ ಅನ್ನು ಬೇರ್ಪಡಿಸುವ ಪ್ರಕ್ರಿಯೆ ನಡೆಯಲಿದೆ. ಆಗಸ್ಟ್ 23ರ ಸಂಜೆ 5.47ಕ್ಕೆ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ಚಂದ್ರನ ಮೇಲೆ ಲ್ಯಾಂಡ್ ಮಾಡಲಾಗುತ್ತದೆ ಎಂದು ಇಸ್ರೋ ತಿಳಿಸಿದೆ.


ಸೋಮವಾರ ನಸುಕಿನ 12 ಗಂಟೆಯಿಂದ 12.30ರ ನಡುವೆ ಚಂದ್ರನ ಕಕ್ಷೆಗೆ ಸೇರಿಸುವ ಕಾರ್ಯಾಚರಣೆ ನಡೆದಿದೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಚಂದ್ರಯಾನ–3 ಮಿಷನ್ ವೇಳಾಪಟ್ಟಿಗೆ ಅನುಗುಣವಾಗಿ ನಡೆದಿದ್ದು, ಬಾಹ್ಯಾಕಾಶ ನೌಕೆಯ ಸ್ಥಿತಿ ಸಹಜವಾಗಿದೆ ಎಂದು ಇಸ್ರೋ ಅಧಿಕಾರಿಗಳು ಹೇಳಿದ್ದಾರೆ.

ಚಂದ್ರಯಾನ–3 ಲ್ಯಾಂಡರ್, ರೋವರ್ ಮತ್ತು ಪ್ರೊಪಲ್ಷನ್ ಮಾಡ್ಯೂಲ್ ಅನ್ನು ಹೊಂದಿದೆ. ಲ್ಯಾಂಡರ್ ಮತ್ತು ರೋವರ್ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದು 14 ದಿನಗಳ ಕಾಲ ಅಲ್ಲಿ ಪ್ರಯೋಗಗಳನ್ನು ನಡೆಸುತ್ತದೆ. ಈ ಕಾರ್ಯಾಚರಣೆಯ ಮೂಲಕ, ಇಸ್ರೋ ಚಂದ್ರನ ಮೇಲ್ಮೈಯಲ್ಲಿ ಭೂಕಂಪಗಳು ಹೇಗೆ ಸಂಭವಿಸುತ್ತವೆ ಮತ್ತು ಚಂದ್ರನ ಮಣ್ಣನ್ನು ಅಧ್ಯಯನ ಮಾಡುತ್ತದೆ ಎಂಬುದನ್ನು ಕಂಡುಹಿಡಿಯುತ್ತದೆ. ಇಸ್ರೋ ಆಗಸ್ಟ್ 23 ರಂದು ಚಂದ್ರನ ಮೇಲ್ಮೈಯಲ್ಲಿ ಲ್ಯಾಂಡರ್ ಅನ್ನು ಮೃದುವಾಗಿ ಇಳಿಸಲು ಪ್ರಯತ್ನಿಸುತ್ತದೆ. ಜುಲೈ 14ರಂದು ಇಸ್ರೊ ಚಂದ್ರಯಾನ–3 ಯೋಜನೆಯ ಭಾಗವಾಗಿ ಬಾಹ್ಯಾಕಾಶ ನೌಕೆಯನ್ನು ಉಡ್ಡಯನ ಮಾಡಿತ್ತು.



ಆಟಕ್ಕುಂಟು ಲೆಕ್ಕಕ್ಕಿಲ್ಲ ಚಿಕ್ಲಿಹೊಳೆ ಜಲಾಶಯ

ಭತ್ತ ಬೆಳೆ ಬೆಳೆಯಲು ಸರಿಯಾದ ಸಮಯಕ್ಕೆ ನೀರು ಬಿಡದ ನೀರಾವರಿ ಇಲಾಖೆ



ಗುಡ್ಡೆಹೊಸೂರು, ಆ.1– ಕೊಡಗಿನ ಎರಡು ಪ್ರಮುಖ ಜಲಾಶಯಗಳ ಪೈಕಿ ಒಂದು ಹಾರಂಗಿ ಮತ್ತೊಂದು ಚಿಕ್ಲಿ ಹೊಳೆ. ರಂಗಸಮುದ್ರ, ಕಂಬಿಬಾಣೆ ವ್ಯಾಪ್ತಿಯಲ್ಲಿರುವ ಹಲವಾರು ಗ್ರಾಮ ಗಳಿಗೆ ನೀರಾವರಿ ಸೌಲಭ್ಯ ಹಾಗೂ ಮುಖ್ಯವಾಗಿ ಭತ್ತ ಬೇಸಾಯ ಮಾಡುವ ಉದ್ದೇಶದಿಂದ ಈ ಜಲಾಶಯ ನಿರ್ಮಿಸಿ ಎಡದಂಡೆ, ಬಲದಂಡೆ ನಾಲೆಯನ್ನು ನಿರ್ಮಿಸಲಾಗಿದೆ.

1980–82ರಲ್ಲಿ ಈ ಜಲಾಶಯವನ್ನು ನಿರ್ಮಿಸಲಾಯಿತು. ಈ ಜಲಾಶಯಕ್ಕೆ ಎಡದಂಡೆ ಮತ್ತು ಬಲದಂಡೆ ಎರಡು ವಿಭಾಗಕ್ಕೆ ಕಾಲುವೆ ನಿರ್ಮಿಸಿ ನೀರನ್ನು ಒದಗಿಸಲಾಗುತ್ತಿತ್ತು. ನಂತರ ಹೊಸದಾಗಿ ನೂರಾರು ಕೋಟಿ ರೂ. ವೆಚ್ಚ ಮಾಡಿ ಹೊಸ ನಾಲೆಯನ್ನು ನಿರ್ಮಿಸಲಾಯಿತು. ಈ ಕಾಲುವೆಗಾಗಿ ಈ ವಿಭಾಗದ ಸಾವಿರಾರು ಎಕರೆ ಪ್ರದೇಶದ ಕೃಷಿಭೂಮಿಯನ್ನು ರೈತರು ಕಳೆದುಕೊಂಡಿದ್ದಾರೆ. ಹಳೆಯ ಎಡದಂಡೆ ನಾಲೆಯು ನಂಜರಾಯ ಪಟ್ಟಣ ವ್ಯಾಪ್ತಿಗೆ ಒಳಪಟ್ಟರೆ, ಬಲ ದಂಡೆಯ ಹಳೆಯ ನಾಲೆ ಜೊತೆಯಲ್ಲಿ ಹೊಸದಾಗಿ ನಾಲೆಯನ್ನು ನಿರ್ಮಿಸಲಾಗಿದೆ.

ಈ ಹೊಸ ಕಾಲುವೆಯು ರಂಗ ಸಮುದ್ರ, ಬಾಳುಗೋಡು, ರಸಲ್‌ಪುರ, ಬೆಟ್ಟಗೇರಿ, ಗುಡ್ಡೆಹೊಸೂರು, ಮುಂದೆ ಸುಂದರ ನಗರ ತನಕ ನಿರ್ಮಿಸಲಾಗಿದೆ. ಇದರ ಮುಖ್ಯ ಉದ್ದೇಶ ರೈತರ ಭತ್ತದ ಗದ್ದೆಗಳಿಗೆ ನೀರು ಕೊಡುವುದಾಗಿದೆ. ಆದರೆ ಹಲವು ಕಾರಣಗಳಿಂದ ರೈತರು ತಮ್ಮ ಭತ್ತದ ಗದ್ದೆಗಳನ್ನು ತೋಟಗಳಾಗಿ ಮಾರ್ಪಾಟು ಮಾಡಿಕೊಂಡಿದ್ದಾರೆ. ನೂರಾರು ಎಕರೆ ಪ್ರದೇಶದ ಗದ್ದೆಗಳು ಪಾಳುಬಿದ್ದಿವೆ. ಅದಕ್ಕೆ ಮುಖ್ಯ ಕಾರಣ ಕಾಡುಪ್ರಾಣಿಗಳ ಉಪದ್ರವ, ಜೊತೆಗೆ ಜಲಾಶಯ ಇದ್ದರೂ ಸರಿಯಾದ ಸಮಯಕ್ಕೆ ದೊರೆಯದ ನೀರು.

ವಿವಿಧ ಜಲಮೂಲಗಳಿಂದ ಮತ್ತು ಕೊಳವೆ ಬಾವಿಗಳ ನೀರನ್ನು ಬಳಸಿ ಹಲವು ರೈತರು ಇತ್ತೀಚಿನ ದಿನಗಳಲ್ಲಿ ನಾಟಿ ಮಾಡುತ್ತಿದ್ದರು. ಅನೇಕ ವರ್ಷಗಳಿಂದ ಜೂನ್ ತಿಂಗಳ ಮೊದಲ ವಾರ ನೀರನ್ನು ಕಾಲುವೆಗಳಿಗೆ ಹರಿಬಿಡಲಾಗು ತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಜುಲೈ ತಿಂಗಳು ಮುಗಿದು ಆಗಸ್ಟ್ ತಿಂಗಳು ಬಂದರೂ ನಾಲೆಗಳಿಗೆ ನೀರು ಬಿಡುತ್ತಿಲ್ಲ. ಈ ಬಾರಿ ಉತ್ತಮ ಮಳೆಯಾಗಿದೆ, ಜಲಾಶಯ ತುಂಬಿದೆ. ಆದರೆ ರೈತರ ಗದ್ದೆಗಳಿಗೆ ಮಾತ್ರ ನೀರು ಬರುತ್ತಿಲ್ಲ.

ಅದರ ಬದಲು ಜಲಾಶಯದ ನೀರು ಕೆಆರ್‌ಎಸ್ ಮತ್ತು ತಮಿಳುನಾಡಿನ ಜಲಾಶಯಕ್ಕೆ ಸೇರುತ್ತಿದೆ. ಮತ್ತೊಂದು ದುರಂತ ಕತೆಯೆಂದರೆ ನಾಲೆಯ ಹೊಳೆತ್ತುವ ಕಾರ್ಯಕ್ಕೆ ಟೆಂಡರ್ ಪಡೆದವರು ಕಾಟಾ ಚಾರಕ್ಕೆ ಹಿಟಾಚಿ ಯಂತ್ರ ಬಳಸಿ ಕಾಲುವೆಯ ಮೇಲ್ಭಾಗದಲ್ಲಿರುವ ಗಿಡಗಂಟೆಗಳನ್ನು ಮಾತ್ರ ಸ್ವಚ್ಛಮಾಡಿ ಕೈತೊಳೆದುಕೊಂಡಿದ್ದಾರೆ.

ಪ್ರತಿವರ್ಷ ಇದೇ ಪರಿಸ್ಥಿತಿಯಾಗಿದೆ, "ಕೆರೆಯ ನೀರನ್ನೂ ಕೆರೆಗೆ ಚೆಲ್ಲಿ" ಎಂಬ ಗಾದೆಯಂತೆ, ನದಿಯ ನೀರನ್ನೂ ನದಿಗೆ ಚೆಲ್ಲಿ ಎಂಬಾಂತಾಗಿದೆ. ಕೆರೆಯ ನೀರನ್ನು ಬಳಸಿ ರೈತರು ಕೃಷಿಗೆ ಮುಂದಾಗಿದ್ದಾರೆ. ಆದರೆ 25 ದಿನಗಳಲ್ಲಿ ನಾಟಿಕಾರ್ಯ ಮುಗಿಸಬೇಕು. ಜಲಾಶಯದ ನೀರನ್ನೇ ನಂಬಿಕೊಂಡು ತಿಂಗಳಾದರು ನಾಟಿ ಮಾಡಲು ಸಾಧ್ಯವಾಗುತ್ತಿಲ್ಲ. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಇತ್ತ ಗಮನ ಹರಿಸಲಿ ಎಂದು ಈ ವಿಭಾಗದ ರೈತರು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕೊಡಗಿನಲ್ಲಿ ಹುಟ್ಟಿದ ಕಾವೇರಿ ನದಿಯಿಂದ ನಮಗೆಷ್ಟು ಲಾಭ? ಅದೇ ರೀತಿ ಕೊಡಗಿನ ಎರಡು ಪ್ರಮುಖ ಜಲಾಶಯಗಳಿಂದ ಎಷ್ಟು ಲಾಭ ಎಂದು ಇಂದು ಕೊಡಗಿನ ಮಂದಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ನದಿ ಪ್ರವಾಹ ದಿಂದ ತೋಟಗಳು ಮುಳುಗಡೆಯಾ ದರೆ. ಮತ್ತೊಂದು ಕಡೆ ಬೆಟ್ಟಗಳು ಕುಸಿಯುತ್ತವೆ. ಬೇಸಿಗೆ ಬಂದರೆ ಕಾವೇರಿ ಹುಟ್ಟುವ ಕೊಡಗಿನ ಮಡಿಕೇರಿ ಸೇರಿದಂತೆ ಕುಶಾಲನಗರ ಮುಂತಾದ ಭಾಗಗಳಲ್ಲಿ ಕುಡಿಯಲು ನೀರಿಲ್ಲ. ಆದರೆ ರಾಜ್ಯದ ರಾಜಧಾನಿಯಲ್ಲಿ ಮನೆಮನೆಗೂ ಕಾವೇರಿ ನೀರು. ಎಂಥಾ ದುರಂತ!

ಚಿಕ್ಲಿಹೊಳೆ ಜಲಾಶಯವು ಪ್ರವಾಸಿಗರಿಗೆ ಮೋಜುಮಸ್ತಿ ಮಾಡಲು ಮಾತ್ರ ಸೀಮಿತವೇ? ಇಲಾಖೆ ವತಿಯಿಂದ ಕೇವಲ ಪ್ರವಾಸಿಗರಿಗೆ ಅನುಕೂಲ ಮಾಡಿದರೆ ಸಾಕೇ? ಎಂಬುದು ಈ ವಿಭಾಗದ ರೈತರ ಪ್ರಶ್ನೆಯಾಗಿದೆ.

ಹಾರಂಗಿ, ಚಿಕ್ಲಿಹೊಳೆ ಭರ್ತಿಯಾದರೆ ಮಾತ್ರ ಕೆಆರ್‌ಎಸ್ ಜಲಾಶಯ ತುಂಬುತ್ತೆ ಆದರೆ ಜಲಾಶಯ ತುಂಬಿದ್ದರೂ ಕೊಡಗಿನ ರೈತರ ಭತ್ತದ ನಾಟಿ ಕಾರ್ಯಕ್ಕೆ ನೀರಿಲ್ಲ. ತಕ್ಷಣದಿಂದಲೆ ನಾಲೆಗಳಿಗೆ ನೀರು ಬಿಡುವಂತೆ ಅನ್ನದಾತರು ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಓದುತ್ತಿದ್ದ ವಿದ್ಯಾರ್ಥಿನಿ ಕೊಡಗಿನ ಮನೆಯಲ್ಲಿ ನೇಣಿಗೆ ಶರಣು

ವಿರಾಜಪೇಟೆ, ಆ.1– ಕಾಲೇಜು ವಿದ್ಯಾರ್ಥಿನಿಯೊಬ್ಬರು ಮನೆಯಲ್ಲಿ ಯಾರು ಇಲ್ಲದ ವೇಳೆ ವೇಲ್‌ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ವಿರಾಜ ಪೇಟೆ ನಗರ ಪೊಲೀಸ್ ವಸತಿ ಗೃಹದಲ್ಲಿ ಸಂಭವಿಸಿದೆ. ವಿರಾಜಪೇಟೆ ಪೊಲೀಸ್ ಠಾಣೆಗಳ ಸಮುಚ್ಛಯದಲ್ಲಿ ಡಿ.ಗ್ರೂಪ್ ನೌಕರರಾಗಿರುವ ಹೆಚ್.ಪಿ. ಕುಮಾರ ಮತ್ತು ತೇಜಾವತಿ ದಂಪತಿಯ ಕೊನೆಯ ಪುತ್ರಿ ಹೆಚ್.ಕೆ. ಮಧುಮಿತ (22) ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿನಿ.



ಮೈಸೂರಿನ ಪಿಜಿಯೊಂದರಲ್ಲಿ ವಾಸವಿದ್ದು, ಮಹಾರಾಣಿ ಕಾಲೇಜಿನಲ್ಲಿ ದ್ವಿತಿಯ ಬಿಎಸ್‌ಸಿ ವ್ಯಾಸಂಗ ಮಾಡುತ್ತಿದ್ದ ಈಕೆ ಕೆಲವು ತಿಂಗಳುಗಳಿಂದ ಪಿಜಿಯನ್ನು ಬಿಟ್ಟು ವಿರಾಜಪೇಟೆ ಪೊಲೀಸ್ ವಸತಿ ಗೃಹ ಮನೆಯಿಂದ ಮೈಸೂರು ಕಾಲೇಜಿಗೆ ಹೋಗಿಬರುತ್ತಿದ್ದಳು ಎನ್ನಲಾಗಿದೆ. ಮಂಗಳವಾರ ಮುಂಜಾನೆ 7 ಗಂಟೆ ಸಮಯದಲ್ಲಿ ತಾಯಿ ನಿತ್ಯದ ಕಾಯಕದಲ್ಲಿ ತೊಡಗಿದ್ದರು. ತಂದೆ ಕುಮಾರ ಕರ್ತವ್ಯ ನಿಮಿತ್ತ ಹೊರ ಹೋಗಿದ್ದರು ಎನ್ನಲಾಗಿದೆ. ನಂತರ ಬಂದು ನೋಡಿದಾಗ ಮಗಳು ಇದ್ದ ಕೋಣೆಯಲ್ಲಿ ಯಾವುದೇ ಪ್ರತಿಕ್ರಿಯೆ ಬಾರದಿದ್ದರಿಂದ ಮಗಳನ್ನು ಕೂಗಿದರಲ್ಲದೆ ಬಂದು ನೋಡಿದಾಗ ಮೇಲ್ಛಾವಣಿಗೆ ತನ್ನ ವೇಲ್‌ನಿಂದ ಮಗಳು ಮಧುಮಿತ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂದಿದೆ. ಮೃತಳ ತಾಯಿ ತೇಜಾವತಿ ನೀಡಿರುವ ದೂರಿನನ್ವಯ ವಿರಾಜಪೇಟೆ ನಗರ ಠಾಣೆ ಪೊಲೀಸರು ಆತ್ಮಹತ್ಯೆ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಮಾಹಿತಿ ತಿಳಿದು ಬಂದಿಲ್ಲ.

ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನದ ಪ್ರಯುಕ್ತ 'ವ್ಯಸನ ಮುಕ್ತ ದಿನಾಚರಣೆ'

ಜಿಲ್ಲೆಯಲ್ಲಿ 61 ಗಾಂಜಾ ಪ್ರಕರಣ ದಾಖಲು, 157 ಜನರ ಮೇಲೆ ಮೊಕದ್ದಮೆ; ಎಸ್ಪಿ



ಮಡಿಕೇರಿ, ಆ.1– ಜಿಲ್ಲೆಯಲ್ಲಿ ಕಳೆದ ಏಳು ತಿಂಗಳಲ್ಲಿ ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ 61 ಪ್ರಕರಣಗಳು ದಾಖಲಾಗಿದ್ದು, 157 ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಪೊಲೀಸ್ ಇಲಾಖೆ, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ನಗರದ ಸರ್ಕಾರಿ ಜೂನಿಯರ್ ಕಾಲೇಜು ಸಭಾಂಗಣದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನದ ಪ್ರಯುಕ್ತ ಮಂಗಳವಾರ ನಡೆದ 'ವ್ಯಸನ ಮುಕ್ತ ದಿನಾಚರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೊಡಗು ಜಿಲ್ಲೆಯಲ್ಲಿ 36 ಕೆ.ಜಿ.ಯಷ್ಟು ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಸುಮಾರು 6 ಕಡೆಗಳಲ್ಲಿ ಗಾಂಜಾ ಬೆಳೆಯುತ್ತಿರುವುದನ್ನು ಪತ್ತೆ ಹಚ್ಚಲಾಗಿದೆ. ಹಾಗೆಯೇ 99 ಗ್ರಾಂ ಎಂಡಿಎಂಎ(ಮೀಥೈಲ್ ಎಡಿಯಾಕ್ಸಿ ಮೆಥಾಂಫೆಟಮೈನ್) ಮತ್ತು 9 ಬ್ಲಾಕ್‌ಗಳಲ್ಲಿ ಸ್ಟ್ರಿಪ್ಸ್ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಯುವಜನರು ಮದ್ಯ ಅಥವಾ ಮಾದಕ ವಸ್ತುಗಳಿಗೆ ತುತ್ತಾಗದೆ ವಿದ್ಯಾರ್ಜನೆಯತ್ತ ಗಮನ ಹರಿಸಬೇಕು. ಲಭ್ಯವಿರುವ ಸಮಯವನ್ನು ಸರಿಯಾಗಿ ಬಳಸಿಕೊಂಡಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ಸಲಹೆ ನೀಡಿದರು.

ಡಾ.ಮಹಾಂತ ಶಿವಯೋಗಿಗಳು ಮದ್ಯ ಹಾಗೂ ಮಾದಕ ವಸ್ತುಗಳ ವಿರುದ್ಧ 70ರ ದಶಕದಲ್ಲಿಯೇ ಜಾಗೃತಿ ಮೂಡಿಸಿದರು. ಡಾ.ಮಹಾಂತ ಶಿವಯೋಗಿಗಳ ಆದರ್ಶಗಳನ್ನು ತಿಳಿದುಕೊಂಡು ಮುನ್ನಡೆಯಬೇಕು ಎಂದರು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಿ, ಉದ್ಯೋಗ ಪಡೆಯುವತ್ತ ಗಮನಹರಿಸಬೇಕು. ಸಂಗೀತ, ಸಾಹಿತ್ಯ, ಕ್ರೀಡೆ ಹೀಗೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದಾಗಿದೆ ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮನೋವೈದ್ಯರಾದ ಡಾ.ಡೆವಿನ್ ಕರ್ಕಡ ಅವರು ಮಾತನಾಡಿ ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ನೆನಪಿನ ಶಕ್ತಿ ಕಡಿಮೆಯಾಗುತ್ತದೆ. ಜೊತೆಗೆ ದೈಹಿಕ ಮತ್ತು ಮಾನಸಿಕವಾಗಿ ಕುಗ್ಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವಿಜಯ, ಮುಕ್ತ ವಿವಿ ಪ್ರಾದೇಶಿಕ ನಿರ್ದೇಶಕ ಸ್ಮಿತಾ ಸುಬ್ಬಯ್ಯ, ಉಪನ್ಯಾಸಕರಾದ ಚಿದಾನಂದ, ರಾಜಸುಂದರಂ ಇತರರು ಇದ್ದರು.

ರಸ್ತೆ ಅಂಚಿಗೆ ಜಾರಿದ ಪಿಕಪ್ ವಾಹನ

ತಪ್ಪಿದ ಅನಾಹುತ, ಸಣ್ಣ–ಪುಟ್ಟ ಗಾಯಗಳೊಂದಿಗೆ ಪಾರು



ನಾಪೋಕ್ಲು, ಆ.1– ಸಮೀಪದ ಮರಂದೋಡ ಗ್ರಾಮದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಿಕಪ್ ವಾಹನವೊಂದು ರಸ್ತೆಯಂಚಿಗೆ ಜಾರಿ ಪಲ್ಟಿಯಾದ ಘಟನೆ ಮಂಗಳವಾರ ಸಂಜೆ ನಡೆದಿದೆ.

ನಾಪೋಕ್ಲುವಿನಿಂದ ವಿರಾಜಪೇಟೆಗೆ ಸಿಲ್ವರ್ ಮರಗಳನ್ನು ಸಾಗಿಸುತ್ತಿದ್ದ ಪಿಕಪ್ ವಾಹನ ಚಾಲಕನ ನಿಯಂತ್ರಣ ತಪ್ಪಿ ಬಿದ್ದಿದ್ದು, ಸ್ಥಳೀಯರ ನೆರವಿನಿಂದ ವಾಹನವನ್ನು ಇನ್ನೊಂದು ವಾಹನಕ್ಕೆ ಹಗ್ಗ ಕಟ್ಟಿ ಎಳೆದು ಮೇಲಕ್ಕೆತ್ತಲಾಯಿತು. ಪಿಕಪ್‌ನಲ್ಲಿ ಚಾಲಕ ಸೇರಿದಂತೆ ಮೂರು ಜನರಿದ್ದರು. ಕಡಂಗಕ್ಕೆ ತೆರಳುತ್ತಿದ್ದ ಗ್ರಾಮ ಪಂಚಾಯಿತಿ ಸದಸ್ಯ ಚೋಯಮಾದಂಡ ಹರೀಶ್ ಪಿಕಪ್ ಒಳಗಿದ್ದವರನ್ನು ರಕ್ಷಿಸಿದ್ದಾರೆ. ಬಳಿಕ ಸ್ಥಳೀಯರ ಪಿಕಪ್ ವಾಹನವೊಂದರ ಸಹಾಯದಿಂದ ಪಲ್ಟಿಯಾಗಿದ್ದ ಪಿಕಪ್ ವಾಹನವನ್ನು ಮೇಲಕ್ಕೆ ಕೆತ್ತಲಾಯಿತು. ಪಿಕಪ್ ವಾಹನದ ಒಳಗಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿ, ಅಪಾಯದಿಂದ ಪಾರಾಗಿದ್ದಾರೆ.

ಕಳೆದ ವಾರ ಇದೇ ಮರಂದೋಡ ಗ್ರಾಮದಲ್ಲಿ ಮಳೆಯಿಂದಾಗಿ ಮರಗಳು ಬಿದ್ದು ರಸ್ತೆ ಸಂಚಾರಕ್ಕೆ ತೊಂದರೆಯಾಗಿತ್ತು ಕಿರಿದಾದ ರಸ್ತೆಯಲ್ಲಿ ವಾಹನಗಳು ಸಂಚರಿಸುವಾಗ ಅಪಘಾತಕ್ಕೆ ಈಡಾಗುತ್ತಿವೆ. ಸುಗಮ ಸಂಚಾರಕ್ಕೆ ರಸ್ತೆಯನ್ನು ವಿಸ್ತರಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸಾರ್ವಜನಿಕರು, ಸಂಘ–ಸಂಸ್ಥೆಗಳ ಗಮನಕ್ಕೆ

ಮಡಿಕೇರಿ, ಆ.1– ಮೊಗೇರ್ ಜಾತಿಯು ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿರುವ ಹಿನ್ನೆಲೆ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರ್ಕಾರದ ಆದೇಶದಂತೆ ಪ್ರವರ್ಗ–1 ಅನುಕ್ರಮ ಸಂಖ್ಯೆ:6(ae)ರಲ್ಲಿ 'ಮೊಗೇರ್' (MOGER) ಜಾತಿಯನ್ನು ಕೈ ಬಿಡುವ ಬಗ್ಗೆ ಸಾರ್ವಜನಿಕರು/ ಸಂಘ ಸಂಸ್ಥೆಗಳಿಂದ ಆಕ್ಷೇಪಣೆ/ ತಕರಾರುಗಳನ್ನು ಆಹ್ವಾನಿಸಲಾಗಿದೆ. ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಆಗಸ್ಟ್, 10 ರೊಳಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿ, ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ ಹತ್ತಿರ, ಮಡಿಕೇರಿ ಇಲ್ಲಿಗೆ ಸಲ್ಲಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎನ್.ಮಂಜುನಾಥ್ ಅವರು ತಿಳಿಸಿದ್ದಾರೆ.

ಚಾ.ನಗರ ಅಭಿವೃದ್ಧಿಗೆ ಧ್ರುವನಾರಾಯಣ್ ಕೊಡುಗೆ ಅಪಾರ

• ಭಂತೆ ಬೋಧಿದತ್ತ ಭಂತೇಜಿ ಅಭಿಪ್ರಾಯ • 45 ಮಂದಿ ರಕ್ತದಾನ, 350ಕ್ಕೂ ಹೆಚ್ಚು ಮಂದಿಗೆ ಕಣ್ಣಿನ ತಪಾಸಣೆ



ಚಾಮರಾಜನಗರ, ಆ.31– ಚಾಮರಾಜನಗರ ಅಭಿವೃದ್ಧಿಗೆ ಮಾಜಿ ಸಂಸದ ದಿ.ಆರ್.ಧ್ರುವ ನಾರಾಯಣ್ ಕೊಡುಗೆ ಅಪಾರ ಎಂದು ನಳಂದ ಬೌದ್ಧ ವಿಶ್ವವಿದ್ಯಾನಿಲಯ ಪ್ರಧಾನ ಕಾರ್ಯದರ್ಶಿ ಭಂತೆ ಭೋಧಿದತ್ತ ಭಂತೇಜಿ ಅಭಿಪ್ರಾಯಪಟ್ಟರು.

ನಗರದ ರೋಟರಿ ಭವನದಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್ 62ನೇ ಹುಟ್ಟುಹಬ್ಬ ಅಂಗವಾಗಿ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗ, ರೋಟರಿ ಸಂಸ್ಥೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ರಕ್ತನಿಧಿ ಕೇಂದ್ರ, ಜಿಲ್ಲಾಸ್ಪತ್ರೆ, ಕೊಯಮತ್ತೂರು ಅರವಿಂದ ಕಣ್ಣಾಸ್ಪತ್ರೆ ಸಹಯೋಗದಲ್ಲಿ ನಡೆದ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಇತರ ಸೇವಾ ಕಾರ್ಯಕ್ರಮದಲ್ಲಿ ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಸ್ವತಃ ರಕ್ತದಾನ ಮಾಡಿ ಅವರು ಮಾತನಾಡಿದರು.

ಧ್ರುವನಾರಾಯಣ್ ಅವರು ಮಾಡಿರುವ ಜನಪರ ಕಾರ್ಯಗಳು ಜಿಲ್ಲೆ, ಕರ್ನಾಟಕದಲ್ಲಿ ಜನಜನಿತವಾಗಿವೆ. ಅವರು ಜನಾನುರಾಗಿ ಸಹೃದಯವಂತರಾಗಿ ಬಡವರಿಗೆ ಸ್ಪಂದಿಸುತ್ತಿದ್ದರು. ಅವರ ಜನಪರ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕಿದೆ ಎಂದರು.

ಇದೇ ವೇಳೆ 45 ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು. 350ಕ್ಕೂ ಹೆಚ್ಚು ಮಂದಿಗೆ ಕಣ್ಣಿನ ತಪಾಸಣೆ ಮಾಡಲಾಯಿತು. ಈ ವೇಳೆ ಆಂಧ್ರ ಪ್ರದೇಶದ ಗೌತಮಿ ಬುದ್ಧ ವಿಹಾರದ ಬಂತೇ ಸಿದ್ದಾರ್ಥ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಸಂಸದರಾದ ಎಂ.ಶಿವಣ್ಣ, ಎ.ಸಿದ್ದರಾಜು, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಎಸ್‌ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸ ನಾಯಕ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್.ಮಹದೇವು, ಅಭಿಮಾನಿ ಬಳಗದ ಅಧ್ಯಕ್ಷ ಚಂದ್ರು, ಪ್ರಧಾನ ಕಾರ್ಯದರ್ಶಿ ಎಲ್‌ಐಸಿ ಹೊಮ್ಮ ನಾಯಕ, ತಾಪಂ ಮಾಜಿ ಸದಸ್ಯ ಪ್ರಕಾಶ್, ಶಿವಸ್ವಾಮಿ, ರಾಜು, ಶ್ರೀಕಾಂತ್, ವಕೀಲ ಅರುಣ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಮಹಮದ್ ಅಸ್ಗರ್, ನಗರಸಭಾ ಮಾಜಿ ಸದಸ್ಯ ಪದ್ಮಪುರುಷೋತ್ತಮ್, ಜಿಲ್ಲಾ ಕಾಂಗ್ರೆಸ್ ಎಸ್‌ಸಿ ವಿಭಾಗದ ಅಧ್ಯಕ್ಷ ಸೋಮೇಶ್ ಸೇರಿದಂತೆ ಇನ್ನಿತರರಿದ್ದರು.

ಜಿಲ್ಲೆಗಳ ಅಭಿವೃದ್ಧಿಗೆ ನಾನು, ಗಣೇಶ್‌ಪ್ರಸಾದ್ ಶ್ರಮಿಸುತ್ತೇವೆ

ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್



ಚಾಮರಾಜನಗರ, ಆ.1– ನನ್ನ ತಂದೆ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹಾಗೂ ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಜೋಡೆತ್ತುಗಳಾಗಿ ಜಿಲ್ಲೆ ಅಭಿವೃದ್ಧಿಗೆ ಶ್ರಮಿಸಿದರು. ಅದೇ ರೀತಿ ನಾನು, ಹೆಚ್.ಎಸ್.ಗಣೇಶ್‌ಪ್ರಸಾದ್ ಜೋಡೆತ್ತುಗಳಾಗಿ ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಪಕ್ಷ ಸಂಘಟಿಸಿ, ಜಿಲ್ಲೆಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ರೋಟರಿ ಭವನದಲ್ಲಿ ಚೇತನ ಕಲಾವಾಹಿನಿ, ಆರ್.ಧ್ರುವನಾರಾಯಣ್ ಅಭಿಮಾನಿ ಬಳಗ, ರೋಟರಿ ಸಂಸ್ಥೆ ವತಿಯಿಂದ ನಡೆದ ಆರ್.ಧ್ರುವನಾರಾಯಣ್ 62ನೇ ಹುಟ್ಟುಹಬ್ಬದಲ್ಲಿ ಮಾತನಾಡಿದ ಅವರು, ನನ್ನ ತಂದೆ ಧ್ರುವನಾರಾಯಣ್ ಅವರು ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದರು. ಅದೇ ರೀತಿ ಅವರ ಹುಟ್ಟುಹಬ್ಬದ ಅಂಗವಾಗಿ ವಿವಿಧ ಸಮಾಜಮುಖಿ ಸೇವಾ ಕಾರ್ಯ ಹಮ್ಮಿಕೊಂಡಿರುವುದು ಬಹಳ ಅರ್ಥಪೂರ್ಣವಾಗಿದೆ. ಅದರಲ್ಲೂ ಶಿಕ್ಷಣ, ಆರೋಗ್ಯ ಸೇವೆ, ರಕ್ತದಾನ, ಕಣ್ಣಿನ ತಪಾಸಣಾ ಶಿಬಿರ ಉತ್ತಮ ಕಾರ್ಯವಾಗಿದೆ. ನಿಮಗೆಲ್ಲರಿಗೂ ನಮ್ಮ ಹಾಗೂ ಕುಟುಂಬದ ಪರವಾಗಿ ಧನ್ಯವಾದ ಸಲ್ಲಿಸಲಾಗುವುದು ಎಂದರು.


ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಧ್ರುವನಾರಾಯಣ್ ಸದಾ ಪಕ್ಷ ಸಂಘಟನೆ, ಜಿಲ್ಲೆ ಅಭಿವೃದ್ಧಿ ಬಗ್ಗೆ ಚಿಂತಿಸುತ್ತಿದ್ದರು. ರಾಜ್ಯದಲ್ಲೇ ನಂಬರ್ ಒನ್ ಸಂಸದರಾಗಿ ಕೆಲಸ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಜಿಲ್ಲೆ, ರಾಜ್ಯಕ್ಕೆ ಅವರ ಕೊಡುಗೆ ಅಪಾರ. ಅವರು ನಮ್ಮಿಂದ ದೂರವಾಗಿರುವುದು ತುಂಬಾ ಬೇಸರ ತಂದಿದೆ ಎಂದರು.

ಕಾಂಗ್ರೆಸ್ ಮುಖಂಡ ಕಾವೇರಪ್ಪ, ಕೆಪಿಸಿಸಿ ಮಹಿಳಾ ಅಧ್ಯಕ್ಷೆ ಪುಷ್ಪಾ ಅಮರನಾಥ್, ಚೇತನ ಕಲಾವಾಹಿನಿ ಸಂಸ್ಥೆ ಅಧ್ಯಕ್ಷ ಜಿ.ರಾಜಪ್ಪ ಮಾತನಾಡಿದರು. ಇದೇ ವೇಳೆ 62 ಮಂದಿ ಸೋಬಾನೆ ಕಲಾವಿದರಿಗೆ ಸಮವಸ್ತ್ರ ವಿತರಣೆ, ತಾಲೂಕಿನ ವಿವಿಧ ಸರ್ಕಾರಿ ಶಾಲೆಗಳಿಗೆ ತಟ್ಟೆ, ಲೋಟ ವಿತರಣೆ, ನೋಟ್‌ಬುಕ್ ವಿತರಣೆ, ಟೈ ಮತ್ತು ಬೆಲ್ಟ್ ವಿತರಿಸಲಾಯಿತು.

ಮಾಜಿ ಶಾಸಕ ಕೇಶವ ಮೂರ್ತಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಚಂದ್ರು, ರೋಟರಿ ಸಂಸ್ಥೆ ಕಾರ್ಯದರ್ಶಿ ದೀನಾ, ಆರ್.ಎಂ.ಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಚಂದ್ರು ಡಾ.ಅನಿಲ್‌ಕುಮಾರ್ ಶೆಟ್ಟಿ, ಚೇತನ ಕಲಾವಾಹಿನಿ ಕಾರ್ಯದರ್ಶಿ ಎಂ.ಮಂಜುನಾಥ್, ಗಾಯಕಿ ಲತಾಪುಟ್ಟಸ್ವಾಮಿ ಇತರರಿದ್ದರು.

ಬದನಗುಪ್ಪೆ ಗ್ರಾಪಂ 'ಕೈ', 'ಕಮಲ'ದ ಪಾಲು

ಎಂ.ಕುಮಾರ್ ಅಧ್ಯಕ್ಷ, ರಾಜಮ್ಮ ಉಪಾಧ್ಯಕ್ಷೆ



ಬದನಗುಪ್ಪೆ, ಆ.1– ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಪಂ ನೂತನ ಅಧ್ಯಕ್ಷರಾಗಿ ಎಂ.ಕುಮಾರ, ಉಪಾಧ್ಯಕ್ಷೆಯಾಗಿ ರಾಜಮ್ಮ ಆಯ್ಕೆಯಾಗಿದ್ದಾರೆ.

ಗ್ರಾಮದ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯ ಎಂ.ಕುಮಾರ್, ಬಿಜೆಪಿ ಬೆಂಬಲಿತ ಸದಸ್ಯ ಮಲ್ಲೇಶ್ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಸದಸ್ಯೆ ರಾಜಮ್ಮ, ಕಾಂಗ್ರೆಸ್ ಬೆಂಬಲಿತ ಸದಸ್ಯೆ ದೇವಮ್ಮ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ತಲಾ 11 ಮತಗಳನ್ನು ಪಡೆದ ಎಂ.ಕುಮಾರ್ ಅಧ್ಯಕ್ಷರಾದರೇ, ರಾಜಮ್ಮ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು. ತಲಾ 10 ಮತ ಪಡೆದ ಮಲ್ಲೇಶ್ ಹಾಗೂ ದೇವಮ್ಮ ಪರಾಭವಗೊಂಡರು. ಚುನಾವಣೆಯಲ್ಲಿ ಗ್ರಾಪಂನ ಎಲ್ಲಾ 21 ಮಂದಿ ಸದಸ್ಯರು ಭಾಗವಹಿಸಿದ್ದರು. ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ 'ಕೈ' ಪಾಲಾದರೆ, ಉಪಾಧ್ಯಕ್ಷ ಸ್ಥಾನ ಬಿಜೆಪಿ ಪಾಲಾಗಿದ್ದು ವಿಶೇಷವಾಗಿತ್ತು. ಚುನಾವಣಾಧಿಕಾರಿಯಾಗಿ ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕಿ ರೇಣುಕಾ ಕಾರ್ಯ ನಿರ್ವಹಿಸಿದರು.

ಈ ವೇಳೆ ಪಿಡಿಓ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಲೋಕೇಶ್ ಹಾಜರಿದ್ದರು. ನೂತನ ಅಧ್ಯಕ್ಷ ಕುಮಾರ್ ಅವರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಮುಖಂಡರಾದ ಸೋಮಲಿಂಗಪ್ಪ, ಮಹೇಶ್‌ಕುಮಾರ್, ಬಿ.ಪಿ. ನಾಗರಾಜ ಮೂರ್ತಿ ಹಾಗೂ ಇತರರು ಸನ್ಮಾನಿಸಿದರು.

ಬೇಗೂರು ಸಮೀಪದ ಹೊರೆಯಾಲ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಲೀಲಾವತಿ ಹಾಗೂ ಉಪಾಧ್ಯಕ್ಷೆಯಾಗಿ ಚನ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಆಸ್ಪತ್ರೆ, ಇಂದಿರಾ ಕ್ಯಾಂಟೀನ್, ಹಾಸ್ಟೆಲ್‌ಗೆ ಡಿಸಿ ದಿಢೀರ್ ಭೇಟಿ



ಚಾಮರಾಜನಗರ, ಆ.1– ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಮಂಗಳವಾರ ರಾತ್ರಿ ನಗರದ ಇಂದಿರಾ ಕ್ಯಾಂಟೀನ್, ಆಸ್ಪತ್ರೆ, ಹಾಸ್ಟೆಲ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೊದಲು ಜಿಲ್ಲಾಧಿಕಾರಿ ಕಚೇರಿ ಗೇಟ್ ಪಕ್ಕದ ಇಂದಿರಾ ಕ್ಯಾಂಟೀನ್‌ಗೆ ಅನಿರೀಕ್ಷಿತ ಭೇಟಿ ನೀಡಿ, ಅಡುಗೆ ಸಾಮಾಗ್ರಿಗಳು, ದಿನಸಿ ದಾಸ್ತಾನು ವೀಕ್ಷಣೆ ಮಾಡಿದರು. ಶುಚಿತ್ವ, ಆಹಾರ ವಿತರಣೆ, ಮೆನು ಪರಿಶೀಲಿಸಿದರು. ಅಲ್ಲದೇ ರಾತ್ರಿ ಗ್ರಾಹಕರಿಗೆ ವಿತರಿಸಲು ಸಿದ್ಧಪಡಿಸಿದ್ದ ರೈಸ್ ಬಾತ್ ಸೇವಿಸಿ ಗುಣಮಟ್ಟ ಪರಿಶೀಲಿಸಿದರು. ಪ್ರತಿದಿನ ಟೋಕನ್ ವಿತರಿಸಬೇಕು. ಆ ಪ್ರಕಾರವೇ ಆಹಾರ ನೀಡಬೇಕು. ಆಹಾರದಲ್ಲಿ ಗುಣಮಟ್ಟ, ನಿಗದಿತ ಪ್ರಮಾಣ, ಶುಚಿತ್ವ ಕಾಪಾಡಿಕೊಳ್ಳಬೇಕು. ಎಲ್ಲಿಯೂ ಲೋಪಗಳಾಗಾದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು. ಅಲ್ಲದೇ ಕ್ಯಾಂಟೀನ್‌ಗೆ ಸಿ.ಸಿ.ಕ್ಯಾಮರಾ ಅಳವಡಿಸಬೇಕು. ನಿತ್ಯ ಎಷ್ಟು ಮಂದಿಗೆ ಆಹಾರ ವಿತರಿಸಲಾಗಿದೆ ಎಂಬ ಪೂರ್ಣ ವರದಿ ಲೆಕ್ಕ ಪತ್ರ ಸಲ್ಲಿಸುವಂತೆ ಕ್ಯಾಂಟೀನ್ ನಿರ್ವಾಹಕರಿಗೆ ತಾಕೀತು ಮಾಡಿದರು.

ಬಳಿಕ ನಗರದ ತಾಯಿ ಮಕ್ಕಳ ಆಸ್ಪತ್ರೆ ಹಾಗೂ ತುರ್ತು ನಿಗಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಮಹಿಳೆಯರ ಆರೋಗ್ಯ ವಿಚಾರಿಸಿದರು. ಚಿಕಿತ್ಸೆ ಹೇಗೆ ನೀಡಲಾಗುತ್ತಿದೆ? ವೈದ್ಯಕೀಯ ಸೇವೆ ಸರಿಯಾಗಿ ಸಿಗುತ್ತಿದೆಯೇ ಎಂದು ಪ್ರಶ್ನಿಸಿದರು. ತೀವ್ರತರ ಮಕ್ಕಳ ನಿಘಾ ಘಟಕ, ಅಪೌಷ್ಟಿಕತೆ ಮಕ್ಕಳ ನಿರ್ವಹಣೆ ವಿಭಾಗಕ್ಕೆ ಭೇಟಿ ಕೊಟ್ಟು ಪರಿಶೀಲಿಸಿದರು. ಅಪೌಷ್ಟಿಕತೆ ನಿವಾರಣೆಗೆ ಅನುಸರಿಸಲಾಗುತ್ತಿರುವ ವಿಧಾನಗಳ ಬಗ್ಗೆ ಮಾಹಿತಿ ಪಡೆದರು.

ನಂತರ ನಗರದ ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ಹಾಸ್ಟೆಲ್‌ಗೆ ಭೇಟಿ ನೀಡಿ ಮೂಲ ಸೌಕರ್ಯ ಪರಿಶೀಲಿಸಿದರು. ಆಹಾರ ಪದಾರ್ಥಗಳ ದಾಸ್ತಾನು ವೀಕ್ಷಿಸಿದರು. ವಿದ್ಯಾರ್ಥಿನಿಯರಿಗೆ ಸಿದ್ದಪಡಿಸಿದ್ದ ಊಟದ ರುಚಿ ನೋಡಿ ಗುಣಮಟ್ಟ ಪರಿಶೀಲಿಸಿದರು. ವಿದ್ಯಾರ್ಥಿನಿಯರ ಅಹವಾಲು ಆಲಿಸಿದರು.

ಈ ವೇಳೆ ಎಡಿಸಿ ಗೀತಾ ಹುಡೇದ, ನಗರಸಭೆ ಆಯುಕ್ತ ಎಸ್.ವಿ.ರಾಮದಾಸ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ವಿಶ್ವೇಶ್ವರಯ್ಯ, ಡಾ.ಮಹೇಶ್, ಡಾ.ಕೃಷ್ಣ ಪ್ರಸಾದ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ಇತರರಿದ್ದರು.

ಫಿಜಿಯೋ ಥೆರಪಿಸ್ಟ್ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ, ಆ.1– ಪ್ರಸಕ್ತ ಸಾಲಿನ ಚಾಮರಾಜನಗರದ ಕ್ಷೇತ್ರ ಸಂಪನ್ಮೂಲ ಕೇಂದ್ರದ ಶಾಲಾ ಪೂರ್ವ ಸಿದ್ಧತಾ ಕೇಂದ್ರಕ್ಕೆ (ಎಸ್‌ಆರ್‌ಪಿ) ಫಿಜಿಯೋ ಥೆರಪಿಸ್ಟ್ ಹುದ್ದೆಗೆ ನೇರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ನಗರದ ಸಮಗ್ರ ಶಿಕ್ಷಣ ಕರ್ನಾಟಕದ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿಗೆ ಆ.7ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಹದೇವಪ್ರಸಾದ್ ನಿಧನ

ಚಾಮರಾಜನಗರ, ಆ.1– ನಗರದ ಕೊಳದ ಬೀದಿ ನಿವಾಸಿ ದಿ.ಹೋಟೆಲ್ ಸುಬ್ಬಣ್ಣ ಅವರ ಪುತ್ರ ಮಹದೇವ ಪ್ರಸಾದ್ ಅಲಿಯಾಸ್ ಶಿವು (50) ಮಂಗಳವಾರ ನಿಧನರಾದರು.



ಮೃತರು ತಾಯಿ, ಪತ್ನಿ, ಇಬ್ಬರು ಪುತ್ರರು, ಸಹೋದರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಬುಧವಾರ 2 ಆಗಸ್ಟ್ 2023

ಒಂದನೇ ಪುಟದಿಂದ

ಚಾಮುಂಡಿಬೆಟ್ಟದಲ್ಲಿ ಉಪ ಪೊಲೀಸ್ ಠಾಣೆ

ಗೃಹಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಿದ್ದರು.

ಸರಹದ್ದಿಗೆ ಸರ್ಜರಿ ಬೇಕು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ನಗರ ಹಾಗೂ ಗ್ರಾಮೀಣ ಪ್ರದೇಶವನ್ನು ಒಳಗೊಂಡಿದೆ. ಕೆಲವೆಡೆ ಅಪರಾಧ ಹಾಗೂ ಅಪಘಾತ ನಡೆದಾಗ ಪೊಲೀಸ್ ಠಾಣೆ ಸರಹದ್ದಿಗೆ ಸಂಬಂಧಪಟ್ಟಂತೆ ಗೊಂದಲ ಸೃಷ್ಟಿಯಾಗುವುದಿದೆ. ಹಾಗಾಗಿ ಕೆಲವು ಪೊಲೀಸ್ ಠಾಣೆಗಳ ಸರಹದ್ದು ಬದಲಾವಣೆ ಹಾಗೂ ಮತ್ತೆ ಕೆಲವು ಠಾಣೆಗಳ ಸರಹದ್ದನ್ನು ವಿಸ್ತರಿಸುವ ಸಂಬಂಧ ಗೃಹಸಚಿವರು ಸೂಕ್ತ ಕ್ರಮ ವಹಿಸಬೇಕು ಎಂದು ಜಿಟಿಡಿ ಮನವಿ ಮಾಡಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಹೂಟಗಳ್ಳಿ ನಗರಸಭೆ, ಶ್ರೀರಾಂಪುರ, ಬೋಗಾದಿ, ರಮ್ಮನಹಳ್ಳಿ ಹಾಗೂ ಕಡಕೊಳ ಪಟ್ಟಣ ಪಂಚಾಯ್ತಿ ಹಾಗೂ 18 ಗ್ರಾಮ ಪಂಚಾಯ್ತಿಗಳು ಕಾರ್ಯನಿರ್ವಹಿಸುತ್ತಿವೆ. ನಗರ ವ್ಯಾಪ್ತಿಯಲ್ಲಿ 17 ಹಾಗೂ ತಾಲೂಕು ವ್ಯಾಪ್ತಿಯಲ್ಲಿ 3 ಪೊಲೀಸ್ ಠಾಣೆಗಳಿವೆ. ಜಯಪುರ ಪೊಲೀಸ್ ಠಾಣೆ ರಿಂಗ್ ರಸ್ತೆಯಿಂದ 15 ಕಿ.ಮೀ. ದೂರದಲ್ಲಿದೆ. ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ ಗ್ರಾಮಗಳಿಂದ ಜಯಪುರ ಪೊಲೀಸ್ ಠಾಣೆಗೆ 20 ಕಿ.ಮೀ. ಕ್ರಮಿಸಬೇಕು. ಈ ಗ್ರಾಮಗಳ ಪಕ್ಕದಲ್ಲಿರುವ ಬೋಗಾದಿ ಗ್ರಾಮ ಮೈಸೂರು ನಗರದ ಸರಸ್ವತಿಪುರಂ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದೆ. ಗ್ರಾಮದ ಪರಿಮಿತಿಯಲ್ಲಿ ಹಲವು ಬಡಾವಣೆಗಳು ನಿರ್ಮಾಣಗೊಂಡಿರುವುದರಿಂದ ಸಮರ್ಪಕ ರೀತಿಯಲ್ಲಿ ಪೊಲೀಸ್ ಗಸ್ತು ಸಾಧ್ಯವಾಗದೆ, ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದೆ. ಆದ್ದರಿಂದ ಜಯಪುರ ಠಾಣೆ ವ್ಯಾಪ್ತಿಯಲ್ಲಿರುವ ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ ಗ್ರಾಮಗಳನ್ನು ಸರಸ್ವತಿಪುರಂ ಠಾಣೆ ಸರಹದ್ದಿಗೆ ಸೇರ್ಪಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಹೀಗೆಯೇ ಆಲನಹಳ್ಳಿ ಪೊಲೀಸ್ ಠಾಣೆಯ ಪಕ್ಕದಲ್ಲಿರುವ ಬಡಾವಣೆಗಳು ಹಾಗೂ ಗ್ರಾಮಗಳು ಮೈಸೂರು ದಕ್ಷಿಣ ಠಾಣೆಯ ವ್ಯಾಪ್ತಿಗೆ ಒಳಪಟ್ಟಿವೆ. ಏನಾದರೂ ಸಮಸ್ಯೆಯಾದರೆ ಸಾರ್ವಜನಿಕರು ಸಮೀಪದ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಸಾಧ್ಯವಾಗುತ್ತಿಲ್ಲ. ಬಡಾವಣೆಗಳು, ಗ್ರಾಮಗಳನ್ನು ಹತ್ತಿರದ ಪೊಲೀಸ್ ಠಾಣೆ ಸರಹದ್ದು ವ್ಯಾಪ್ತಿಗೆ ಸೇರಿಸಿದರೆ ಸಾರ್ವಜನಿಕರಿಗೆ ತುಂಬಾ ಅನುಕೂಲ ವಾಗುತ್ತದೆ. ಬಸವನಹಳ್ಳಿ ಗ್ರಾಮ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದೆ. ಆದರೆ ಇದೇ ಗ್ರಾಮದ ಸರ್ವೆ ನಂಬರ್‌ನಲ್ಲಿರುವ ವಿಜಯನಗರ 4ನೇ ಹಂತ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಗೊಳಪಟ್ಟಿದೆ ಎಂದು ತಿಳಿಸಿದ್ದಾರೆ.

ವಿಜಯನಗರ 4ನೇ ಹಂತದಲ್ಲಿ ಸುಮಾರು 13 ಸಾವಿರ ನಿವೇಶನಗಳಿದ್ದು, 6 ಸಾವಿರಕ್ಕೂ ಹೆಚ್ಚು ಮನೆಗಳ ನಿರ್ಮಾಣವಾಗಿದೆ. ಜೊತೆಗೆ ಇನ್ನೂ 25 ಖಾಸಗಿ ಬಡಾವಣೆಗಳಲ್ಲಿ 2 ಸಾವಿರಕ್ಕೂ ಹೆಚ್ಚು ಮನೆ ನಿರ್ಮಿಸಲಾಗಿದೆ. ಹೂಟಗಳ್ಳಿಯಲ್ಲಿ 25 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ಬೆಳವಾಡಿಯಲ್ಲಿ ಸುಮಾರು 10 ಸಾವಿರ, ಕೂರ್ಗಳ್ಳಿಯಲ್ಲಿ ಸುಮಾರು 12 ಸಾವಿರ, ಹಿನಕಲ್‌ನಲ್ಲಿ ಸುಮಾರು 30 ಸಾವಿರ ಜನಸಂಖ್ಯೆಯಿದೆ. ವಿಜಯನಗರ 1, 2 ಹಾಗೂ 3ನೇ ಹಂತದಲ್ಲಿನ ಕೈಗಾರಿಕಾ ವಲಯವೂ ವಿಜಯನಗರ ಪೊಲೀಸ್ ಠಾಣೆ ಸರಹದ್ದಿಗೆ ಸೇರಿದೆ. ಆದರೆ ವಿಜಯನಗರ 4ನೇ ಹಂತ ಅಥವಾ ಕೈಗಾರಿಕಾ ಪ್ರದೇಶದಲ್ಲಿ ಉಪ ಪೊಲೀಸ್ ಠಾಣೆಗಳಿಲ್ಲ ಎಂದು ಹೇಳಿದ್ದಾರೆ.

ಗೊಂದಲಕ್ಕೆ ತೆರೆ ಎಳೆಯಿರಿ: ಬೆಳವಾಡಿ ಗ್ರಾಮ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದ ಗಡಿಯಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಕಳ್ಳತನವಾಗಿದ್ದಾಗ ವಿಜಯನಗರ ಠಾಣೆ ಹಾಗೂ ಇಲವಾಲ ಠಾಣೆಯಲ್ಲೂ ಪ್ರಕರಣ ದಾಖಲಿಸಿಕೊಳ್ಳಲಿಲ್ಲ. ಇದಕ್ಕೆ ಸರಹದ್ದಿನ ಬಗ್ಗೆ ಗೊಂದಲವಿರುವುದೇ ಕಾರಣ. ಇಂತಹ ಪ್ರಕರಣಗಳು ಸಾಕಷ್ಟಿದ್ದು, ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಮೈಸೂರು ನಗರ ವ್ಯಾಪಕವಾಗಿ ಬೆಳೆಯುತ್ತಿದ್ದು, ಚಾಮುಂಡೇಶ್ವರಿ ಕ್ಷೇತ್ರ ಗ್ರಾಮಗಳು, ಬಡಾವಣೆಗಳು ಹಾಗೂ ಕೈಗಾರಿಕಾ ಪ್ರದೇಶಗಳನ್ನು ಒಳಗೊಂಡಿದೆ. ಪೊಲೀಸ್ ಠಾಣೆಗಳ ಸರಹದ್ದು ಸಂಬಂಧ ಗೊಂದಲಗಳಿರುವುದರಿಂದ ಸಾರ್ವಜನಿಕರಿಗೆ ಹಲವಾರು ರೀತಿಯ ತೊಂದರೆಗಳಾಗುತ್ತಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಅಗತ್ಯವಿರುವ ಕಡೆ ಉಪಪೊಲೀಸ್ ಠಾಣೆಗಳ ಆರಂಭ, ಠಾಣೆಗಳ ಸರಹದ್ದು ವಿಸ್ತರಣೆ ಹಾಗೂ ಬದಲಾವಣೆಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಜಿ.ಟಿ.ದೇವೇಗೌಡರು ಒತ್ತಾಯಿಸಿದ್ದಾರೆ.

'ಗೃಹ ಜ್ಯೋತಿ'ಗೆ ಸಿಎಂ ಚಾಲನೆ

ಕುಟೀರ ಜ್ಯೋತಿ ಮತ್ತು ಅಮೃತ್ ಜ್ಯೋತಿಯಂತಹ ಹಾಲಿ ಯೋಜನೆಗಳ ಫಲಾನುಭವಿಗಳು ಎಂದು ತಿಳಿಸಿದರು. 2.14 ಕೋಟಿ ಗೃಹಬಳಕೆದಾರರ ಮಾಸಿಕ ವಿದ್ಯುತ್ ಬಳಕೆಯ ಅಂದಾಜು ನಿರ್ಧರಿಸಲು ಈಗಾಗಲೇ ಒಂದು ವರ್ಷದ ವಿದ್ಯುತ್ ಬಳಕೆಯ ಸರಾಸರಿ ಲೆಕ್ಕಾಚಾರ ಮಾಡಲಾಗಿದೆ. 2022– 2023 ಹಣಕಾಸು ವರ್ಷದ ಸರಾಸರಿ ಬಳಕೆಯನ್ನು ಪರಿಗಣಿಸಿ, ಪ್ರತಿ ಗ್ರಾಹಕರ ಸರಾಸರಿ ಬಳಕೆಯ ಮೇಲೆ ಹೆಚ್ಚುವರಿ 10 ಪ್ರತಿಶತವನ್ನು ನೀಡುವ ಮೂಲಕ ಮಾಸಿಕ ವಿದ್ಯುತ್ ಬಳಕೆಯ ಅಂದಾಜು ನಿರ್ಧರಿಸಲಾಗುತ್ತದೆ. ಆದಾಗ್ಯೂ, ಗರಿಷ್ಠ ಉಚಿತ ವಿದ್ಯುತ್ ಬಳಕೆಯ ಮಿತಿಯನ್ನು 200 ಯುನಿಟ್‌ಗಳಿಗೆ ನಿರ್ಬಂಧಿಸಲಾಗಿದೆ ಎಂದರು.

ಸರಾಸರಿ ಬಳಸುವ ಯೂನಿಟ್ ವಿದ್ಯುತ್ 200 ಯೂನಿಟ್‌ಗಳಿಗಿಂತ ಕಡಿಮೆಯಿದ್ದರೆ, ಮನೆಯ ಗ್ರಾಹಕರು ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿಲ್ಲ. ಸರಾಸರಿಗಿಂತ ಹೆಚ್ಚಿನ ಯೂನಿಟ್ ಬಳಸಿದರೆ, ಹೆಚ್ಚುವರಿ ಯೂನಿಟ್‌ಗೆ ಮಾತ್ರ ಶುಲ್ಕ ಪಾವತಿಸಬೇಕಾಗುತ್ತದೆ. ಆದರೆ, 200ಕ್ಕೂ ಹೆಚ್ಚು ಯೂನಿಟ್ ಬಳಸಿದರೆ ಪೂರ್ಣ ಶುಲ್ಕ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.

ಗೃಹ ಜ್ಯೋತಿ ಯೋಜನೆಯ ಪ್ರಮುಖ ವಿವರಗಳು: ರಾಜ್ಯದ ಎಲ್ಲಾ ಗೃಹಬಳಕೆದಾರರಿಗೆ 200 ಯೂನಿಟ್‌ಗಳವರೆಗಿನ ವಿದ್ಯುತ್ ಬಳಕೆ ಉಚಿತ.

2023ರ ಆಗಸ್ಟ್‌ನಲ್ಲಿ ಗೃಹ ಜ್ಯೋತಿ ಯೋಜನೆಯಿಂದ 1.42 ಕೋಟಿ ಕುಟುಂಬಗಳಿಗೆ ಲಾಭ. ಈ ಯೋಜನೆಯು ವಾಣಿಜ್ಯ ಗ್ರಾಹಕರಿಗೆ ಅನ್ವಯಿಸುವುದಿಲ್ಲ.

2022– 2023ರ ಹಣಕಾಸು ವರ್ಷದ ಸರಾಸರಿ ವಿದ್ಯುತ್ ಬಳಕೆಯನ್ನು ಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಹಕರ ಸರಾಸರಿ ಬಳಕೆಯ ಮೇಲೆ ಹೆಚ್ಚುವರಿ 10 ಪ್ರತಿಶತವನ್ನು ಮಾಸಿಕ ವಿದ್ಯುತ್ ಬಳಕೆಯ ಅಂದಾಜು ನಿರ್ಧರಿಸಲಾಗುತ್ತದೆ.

ಗರಿಷ್ಠ ಉಚಿತ ವಿದ್ಯುತ್ ಬಳಕೆಯ ಮಿತಿಯನ್ನು 200 ಯುನಿಟ್‌ಗಳಿಗೆ ನಿರ್ಬಂಧಿಸಲಾಗಿದೆ. ಪ್ರತಿ ಬಳಕೆದಾರರಿಗೆ ನಿಗದಿಪಡಿಸಲಾದ ತಿಂಗಳ ಸರಾಸರಿ ಯೂನಿಟ್‌ಗೆ ಅನುಗುಣವಾಗಿ ವಿದ್ಯುತ್ ಬಳಕೆ ಮಾಡುವ ಗ್ರಾಹಕರ ಬಿಲ್ ಮೊತ್ತ ಶೂನ್ಯವಾಗಿರುತ್ತದೆ. ನಿಗದಿತ ಸರಾಸರಿ ಬಳಕೆಯ ಮಿತಿ ಮೀರಿದರೂ 200 ಯೂನಿಟ್ ಒಳಗಿದ್ದರೆ ಹೆಚ್ಚುವರಿ ಯೂನಿಟ್‌ಗೆ ಮಾತ್ರ ಶುಲ್ಕ ಪಾವತಿಸಬೇಕಾಗುತ್ತದೆ.

ಗ್ರಾಹಕರ ಮಾಸಿಕ ಸರಾಸರಿ ಬಳಕೆಯು 200 ಯುನಿಟ್‌ಗಳನ್ನು ಮೀರಿದರೆ ಬಿಲ್‌ನ ಸಂಪೂರ್ಣ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಯೋಜನೆಯ ಲಾಭ ಪಡೆಯಲು ಬಯಸುವ ಗ್ರಾಹಕರು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಾಯಿಸಿಕೊಳ್ಳಬಹುದು. ಗ್ರಾಹಕರು ತಮ್ಮ ಆಧಾರ್ ಸಂಖ್ಯೆಗಳನ್ನು ಬಿಲ್‌ನಲ್ಲಿ ನಮೂದಿಸಲಾದ ಗ್ರಾಹಕ ಐಡಿ ಅಥವಾ ಖಾತೆ ಐಡಿಯೊಂದಿಗೆ ಲಿಂಕ್ ಮಾಡಬೇಕು. ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಮತ್ತು ಅಮೃತ ಜ್ಯೋತಿ ಫಲಾನುಭವಿಗಳನ್ನು ಹೊಸದಾಗಿ ಪ್ರಾರಂಭಿಸಲಾದ ಗೃಹ ಜ್ಯೋತಿ ಯೋಜನೆಗೆ ಜೋಡಣೆ ಮಾಡಲಾಗುತ್ತದೆ. ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರವು ಗೃಹ ಜ್ಯೋತಿ ಸಬ್ಸಿಡಿ ಮೊತ್ತ ಮತ್ತು FPPAC ಮೊತ್ತವನ್ನು ಎಲ್ಲಾ ಎಸ್ಕಾಂಗಳಿಗೆ ಮುಂಚಿತವಾಗಿ ಪಾವತಿಸುತ್ತದೆ. ಇಂಧನ ಇಲಾಖೆಗೆ ಇದರಿಂದ ಆರ್ಥಿಕ ಹೊರೆ ಬೀಳದು.

ಸಿದ್ದರಾಮಯ್ಯರಿಗೆ ಜಿಟಿಡಿ ಮನವಿ

ಸಿಗದಿರುವ ಕಾರಣ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಆಸ್ತಿಗಳ ಮಾರಾಟ ಹಾಗೂ ಖರೀದಿ ಮಾಡಲಾಗುತ್ತಿಲ್ಲ. ಸಾಲಸೌಲಭ್ಯವೂ ಸಿಗುತ್ತಿಲ್ಲ. ಮೈಸೂರು ನಗರಪಾಲಿಕೆ, ನಗರಸಭೆ ಹಾಗೂ ಪಟ್ಟಣ ಪಂಚಾಯ್ತಿಗಳ ವ್ಯಾಪ್ತಿಯ ಬಡಾವಣೆಗಳ ಮೂಲ ಸೌಕರ್ಯಕ್ಕೂ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಾಗುತ್ತಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು. ಬಡಾವಣೆಯ ಆಸ್ತಿಗಳಿಗೆ ಖಾತಾ ಮಾಡಿಕೊಟ್ಟರೆ ಕಂದಾಯ ಮೂಲಕ ಸರ್ಕಾರಕ್ಕೂ ಆದಾಯ ಬರುತ್ತದೆ. ಆ ಹಣವನ್ನೇ ಅನುದಾನ ರೂಪದಲ್ಲಿ ಬಡಾವಣೆಗಳ ಸೌಕರ್ಯ ಹಾಗೂ ಅಭಿವೃದ್ಧಿಗೆ ಬಳಸಿಕೊಳ್ಳಬಹುದು. ಹಾಗಾಗಿ ತಾಂತ್ರಿಕ ದೋಷಗಳನ್ನು ಸರಿಪಡಿಸಿ, ಅನಧಿಕೃತ ಬಡಾವಣೆಗಳ ಆಸ್ತಿಗಳಿಗೆ ನಮೂನೆ–3 ವಿತರಿಸಲು ಅನುವು ಮಾಡಿಕೊಡಬೇಕು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾದರಿಯಲ್ಲಿ ಖಾತಾ–ಎ ಮತ್ತು ಖಾತಾ–ಬಿ ವಿತರಣೆಗೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾನೂನು ಸಚಿವರು, ನಗರಭಿವೃದ್ಧಿ ಸಚಿವರು ಹಾಗೂ ಅಧಿಕಾರಿಗಳನ್ನು ಶಾಸಕ ಜಿ.ಟಿ.ದೇವೇಗೌಡರು ಭೇಟಿ ಮಾಡಿ, ಒತ್ತಾಯಿಸಿದ್ದರ ಪರಿಣಾಮವಾಗಿ ಅನಧಿಕೃತ ಕಟ್ಟಡಗಳಿಗೂ ನಮೂನೆ–3 ವಿತರಿಸಲು ನಗರಾಭಿವೃದ್ಧಿ ಇಲಾಖೆ ಆದೇಶ ನೀಡಿದ್ದನ್ನು ಸ್ಮರಿಸಬಹುದು.

ಮೋದಿ–ಸಿದ್ದರಾಮಯ್ಯ ಭೇಟಿ

ಬೆಳಗ್ಗೆ 11 ಗಂಟೆಗೆ ಮೋದಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ. ಅದೇ ದಿನ ಅವರು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಲಿದ್ದಾರೆ. ಅಲ್ಲದೆ, 2024ರ ಲೋಕಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಆಗಸ್ಟ್ 2ರಂದು ರಾಜ್ಯ ಕಾಂಗ್ರೆಸ್ ನಾಯಕರು ಮತ್ತು ಸಚಿವರೊಂದಿಗೆ ಪಕ್ಷದ ವರಿಷ್ಠರನ್ನು ಸಿದ್ದರಾಮಯ್ಯ ಭೇಟಿ ಮಾಡಲಿದ್ದಾರೆ. ಎಐಸಿಸಿ ಅಧ್ಯಕ್ಷ ಎಂ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೆವಾಲಾ ಸೇರಿದಂತೆ ಇತರರು ರಾಷ್ಟ್ರ ರಾಜಧಾನಿಯಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸುವ ಸಾಧ್ಯತೆಯಿದೆ.

ಭಾರತದಲ್ಲೂ ಪೈಲಟ್ ರಹಿತ ಏರ್‌ಕ್ರಾಫ್ಟ್‌ಗಳ ತಯಾರಿಕೆ ಪ್ರಗತಿಯಲ್ಲಿದೆ

● ಡಿಆರ್‌ಡಿಓ ಮಾಜಿ ಡೈರೆಕ್ಟರ್ ಜನರಲ್ ವಿಜ್ಞಾನಿ ಡಾ. ಟೆಸ್ಸಿ ಥಾಮಸ್ ಮಾಹಿತಿ ● ಸಿವಿಲ್ ಏರ್‌ಕ್ರಾಫ್ಟ್‌ಗಳ ತಯಾರಿಕೆಗೆ ಒತ್ತು ● 20 ವರ್ಷದಲ್ಲಿ ಭಾರತದ ಕನಸು ನನಸು ● ಅಂತಿಮ ಹಂತದಲ್ಲಿ ಸಾರಸ್ ಏರ್‌ಕ್ರಾಫ್ಟ್ ತಯಾರಿಕೆ ● ಅಗ್ನಿ ಕ್ಷಿಪಣಿ ತೂಕದಲ್ಲಿ ಇಳಿಕೆ; ವೇಗದಲ್ಲಿ ಪ್ರಗತಿ



ಮೈಸೂರು, ಆ.1(ಬಿಎಲ್‌ಯು)– ಹೆಚ್‌ಎಎಲ್‌ನಲ್ಲಿ ಪೈಲಟ್ ರಹಿತ ಏರ್‌ಕ್ರಾಫ್ಟ್‌ಗಳನ್ನು ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಅಗ್ನಿ ಮಿಷನ್‌ಗಳ ಯೋಜನಾ ನಿರ್ದೇಶಕರೂ ಆದ ಡಿಆರ್‌ಡಿಓ ಏರೋನಾಟಿಕಲ್ ಸಿಸ್ಟಮ್‌ನ ಮಾಜಿ ಡೈರೆಕ್ಟರ್ ಜನರಲ್ ಡಾ. ಟೆಸ್ಸಿ ಥಾಮಸ್ ಹೇಳಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ 61ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಸರ್ದಾರ್ ಫಣಿಕ್ಕರ್ ಸ್ಮರಣಾರ್ಥ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಮಾತ ನಾಡಿದ ಅವರು, ಪೈಲಟ್ ರಹಿತ ಏರ್‌ಕ್ರಾಫ್ಟ್‌ಗಳು ಯುದ್ಧದ ವೇಳೆಯಲ್ಲಿ ಅತ್ಯವಶ್ಯವಾಗಿರುತ್ತವೆ. ಈ ಹಿನ್ನೆಲೆ ಪೈಲಟ್ ರಹಿತ ಏರ್‌ಕ್ರಾಫ್ಟ್‌ಗಳನ್ನು ಹೆಚ್‌ಎಎಲ್‌ನಲ್ಲಿ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಭಾರತದಲ್ಲಿ ಅವಶ್ಯವಿರುವ ಯುದ್ಧ ವಿಮಾನ ಗಳನ್ನು ತಯಾರು ಮಾಡಲಾಗುತ್ತಿದೆ. ಆದರೆ ಸಿವಿಲ್ ಏವಿಯೇಷನ್‌ಗೆ ಹೆಚ್ಚು ಒತ್ತು ನೀಡಿರಲಿಲ್ಲ. ಆದರೆ ಈಗ ಬೃಹತ್ ಇಂಜಿನ್‌ಗಳನ್ನು ಒಳಗೊಂಡಿರುವ ಸಿವಿಲ್ ಏರ್‌ಕ್ರಾಫ್ಟ್‌ಗಳನ್ನು ಭಾರತದಲ್ಲೇ ತಯಾರು ಮಾಡಲು ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇನ್ನು 20 ವರ್ಷದಲ್ಲಿ ಭಾರತವೇ ತನಗೆ ಅಗತ್ಯವಿರುವ ಸಿವಿಲ್ ಏರ್‌ಕ್ರಾಫ್ಟ್ ಗಳನ್ನು ತಯಾರು ಮಾಡುವ ಸಾಮರ್ಥ್ಯ ಹೊಂದಲಿದೆ ಎಂದು ಡಾ. ಟೆಸ್ಸಿ ಥಾಮಸ್ ವಿಶ್ವಾಸ ವ್ಯಕ್ತಪಡಿಸಿದರು.

ಭಾರತದಲ್ಲಿ ವಿಮಾನ ತಯಾರಿಕೆಗೆ ಅಗತ್ಯ ಮೂಲ ಸೌಕರ್ಯಗಳಿಲ್ಲ. ಜೊತೆಗೆ ಹಣಕಾಸಿನ ತೊಂದರೆ ಕೂಡ ಎದುರಾಗಿದೆ. ಆದರೂ ಇಂಜಿನ್ ತಯಾರಿಕೆಗೆ ಪೂರಕವಾದ ವಾತಾವರಣವಿದ್ದು, ತಜ್ಞರು ಕೂಡ ಇದ್ದಾರೆ. ಆದರೆ ವಿಮಾನದ ಮೇಲ್ಮೈ ಭಾಗದ ಲೋಹ ಸೇರಿದಂತೆ ಇತರೆ ಬಿಡಿ ಭಾಗಗಳನ್ನು ತಯಾರಿಸುವ ಸೌಕರ್ಯ ಭಾರತದಲ್ಲಿ ಇಲ್ಲ. ಈ ಲೋಹಗಳು ದೊರೆತರೆ ಸುಲಭವಾಗಿ ಇಂಜಿನ್‌ಗಳನ್ನು ತಯಾರಿಸಬಹುದು ಎಂದು ಹೇಳಿದರು.

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿಮಾನ ತಯಾರಿಕೆಯ ದೊಡ್ಡ ಯೋಜನೆಗಳನ್ನು ರೂಪಿಸ ಲಾಗುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ಭಾರತದಲ್ಲಿ ಬೃಹತ್ ವಿಮಾನಗಳ ತಯಾರಿಕೆಗೆ ಮೂಲಸೌಕರ್ಯಗಳಿಲ್ಲ. ಜೊತೆಗೆ ಆರ್ಥಿಕ ಬಲವೂ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈಗ ಬೆಂಗಳೂರಿನ ಎನ್‌ಎಎಲ್(National Aerospace Laboratories)ನಲ್ಲಿ 90 ಆಸನಗಳಿರುವ ಸಾರಸ್ ಏರ್‌ಕ್ರಾಫ್ಟ್‌ಗಳನ್ನು ತಯಾರು ಮಾಡಲಾಗುತ್ತಿದೆ. ಇದರಂತೆ ಬೃಹತ್ ಎಂಜಿನ್ ಗಳಿರುವ ಸಿವಿಲ್ ಏರ್‌ಕ್ರಾಫ್ಟ್‌ಗಳನ್ನು ತಯಾರು ಮಾಡಬೇಕಿದೆ. ಈ ಕಾರ್ಯ ಭವಿಷ್ಯತ್ತಿನಲ್ಲಿ ಭಾರತ ದಲ್ಲೇ ನಡೆಯಲಿದೆ ಎಂದು ವಿಶ್ವಾಸದ ನುಡಿಗಳಾಡಿದರು.

ಅಗ್ನಿ ಕ್ಷಿಪಣಿ 1, 2 ಮತ್ತು 3ರ ತಯಾರು ಮಾಡುವ ವೇಳೆ ಅದರ ತೂಕ 50 ಟನ್ ಇತ್ತು. ಇದರಿಂದ ಕ್ಷಿಪಣಿ ವೇಗವಾಗಿ ಸಾಗಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈಗ ಅಗ್ನಿ ಕ್ಷಿಪಣಿಯ ತೂಕವನ್ನು ಶೇ.40ರಷ್ಟು ಕಡಿಮೆ ಮಾಡಲಾಗಿದೆ. ಅಗ್ನಿ ಕ್ಷಿಪಣಿ 4ರ ತೂಕವನ್ನು 22 ಟನ್ ಗೆ ಇಳಿಸಲಾಗಿದೆ. ಇದರಿಂದ ಅಗ್ನಿ ಕ್ಷಿಪಣಿ ಅತೀ ವೇಗ ಪಡೆದುಕೊಂಡಿದೆ. ಇದರ ಉಷ್ಣಾಂಶ 3,000 ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕ್ಷಿಪಣಿಯನ್ನು ಹಾರಿ ಸುವಾಗ ಹತ್ತಾರು ಬಾರಿ ಸೂಕ್ಷ್ಮವಾಗಿ ಪರಿಶೀಲನೆ ಮಾಡಲಾಗುತ್ತದೆ. ಅಂತೂ ಅಗ್ನಿ ಕ್ಷಿಪಣಿ ಹಾರಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

ಹೆಚ್‌ಎಎಲ್‌ನಲ್ಲಿ 123 ಏರ್‌ಕ್ರಾಫ್ಟ್‌ಗಳನ್ನು ತಯಾರು ಮಾಡಲಾಗುತ್ತಿದೆ. ಇದರ ಜೊತೆಗೆ ಮತ್ತೆ 80 ಏರ್‌ಕ್ರಾಫ್ಟ್‌ಗಳ ತಯಾರಿಕೆಯ ಜವಾಬ್ದಾರಿ ಯನ್ನು ನೀಡಲಾಗಿದೆ. ಈ ಮೂಲಕ ಸಂಶೋಧನಾ ಚಟುವಟಿಕೆಗಳು ಮತ್ತಷ್ಟು ಚುರುಕಾಗುತ್ತಿವೆ ಎಂದರು.

ಹೆಚ್ಚಿನ ಜ್ಞಾನಾರ್ಜನೆ ಮಾಡಲು ನಮಗೆ ಪಠ್ಯ ಹೊರತುಪಡಿಸಿ ಬೇರೆ ಯಾವುದೇ ಮೂಲಗಳಿರಲಿಲ್ಲ. ಆದರೆ ಈಗಿನ ಯುವ ಪೀಳಿಗೆಗೆ ಜ್ಞಾನ ಹೊಂದಲು ಬಹಳಷ್ಟು ಪೂರಕ ವಾತಾವರಣವಿದೆ. ಹೆಚ್‌ಎಎಲ್‌ನಲ್ಲಿ ವಿಜ್ಞಾನ ವಸ್ತುಪ್ರದರ್ಶನ, ಸಂಸ್ಥಾಪನಾ ದಿನಾಚರಣೆ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯುತ್ತವೆ. ಜೊತೆಗೆ ಹಲವು ತರಬೇತಿಗಳನ್ನು ಕೂಡ ಆಯೋಜಿಸಲಾಗುತ್ತದೆ. ಆಸಕ್ತ ವಿದ್ಯಾರ್ಥಿ ಗಳು ಹೆಚ್‌ಎಎಲ್‌ಗೆ ಭೇಟಿ ನೀಡಿ ಅಲ್ಲಿನ ಸಂಶೋಧನೆ ಹಾಗೂ ಪ್ರಗತಿಯನ್ನು ಅರಿತುಕೊಳ್ಳ ಬಹುದು. ಈ ಮೂಲಕ ಸಂಶೋಧನೆ ನಡೆಸಲು ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ಡಾ.ಟೆಸ್ಸಿ ಥಾಮಸ್ ಸಲಹೆ ನೀಡಿದರು.

ವಿಜ್ಞಾನಿಯಾಗಲು ನನಗೆ ಬಹಳಷ್ಟು ಅಡೆತಡೆಗಳಿತ್ತು. ಆದರೂ ಅದನ್ನೆಲ್ಲಾ ಸಮರ್ಥವಾಗಿ ಎದುರಿಸಿ ಸಾಧನೆ ಮಾಡಿದ್ದೇನೆ. ಡಿಆರ್‌ಡಿಓದಲ್ಲಿ ದೊರೆತ ಅನುಭವಗಳಿಂದ ಹೊಸ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಯಿತು. ಶ್ರಮ ವಹಿಸಿ ಕೆಲಸ ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಸಾಕ್ಷಿ ಎಂದು ಹೇಳಿದರು.

ಚಿತ್ರನಟಿ ಮಾಳವಿಕ ಅವಿನಾಶ್, ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಿನ್ಸಿಪಾಲ್ ಪ್ರೊ. ವೈ.ಶ್ರೀಕಾಂತ್, ಡೀನ್‌ಗಳಾದ ಪ್ರೊ. ಕಲ್ಪನಾ ವೇಣುಗೋಪಾಲ್, ಪ್ರೊ. ವೆಂಕಟೇಶ್ ಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ. ಕಲಾಂ ಸ್ಫೂರ್ತಿ

ಅಬ್ದುಲ್ ಕಲಾಂ ಅವರು ನನಗೆ ಸ್ಫೂರ್ತಿಯಾಗಿದ್ದು ಅವರೇ ನಮ್ಮ ಗುರುಗಳು ಕೂಡ. 5 ಸಾವಿರಕ್ಕೂ ಹೆಚ್ಚು ಜನರು ಸೇರಿದ್ದ ಕಾರ್ಯಕ್ರಮದಲ್ಲಿ ನನ್ನ ಹಾಗೂ ಮತ್ತೊಬ್ಬ ವಿಜ್ಞಾನಿಯನ್ನು ಅಬ್ದುಲ್ ಕಲಾಂ ಅವರು ಪರಿಚಯಿಸಿದರು. ನಮ್ಮ ಗುರುಗಳು ನಮ್ಮ ಸಾಧನೆ ಗುರುತಿಸುವುದು ನಮಗೆ ಹೆಮ್ಮೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪುನರ್ ವ್ಯಾಖ್ಯಾನಿಸಲಾಗುತ್ತಿದೆ. ಅದರಲ್ಲಿರುವ ಅಂಶಗಳ ಬಗ್ಗೆ ಅಧ್ಯಯನ ಮಾಡಿದರೆ ಉನ್ನತ ಶಿಕ್ಷಣ ಪಡೆಯಬಹುದು.

- ಜನರಲ್ ಡಾ. ಟೆಸ್ಸಿ ಥಾಮಸ್
ಡಿಆರ್‌ಡಿಓ ಏರೋನಾಟಿಕಲ್ ಸಿಸ್ಟಮ್‌ನ ಮಾಜಿ ಡೈರೆಕ್ಟರ್

ಎಸ್‌ಎಸ್‌ಎಲ್‌ಸಿ, ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು, ಆ.1(ಜಿಎ)–ವಿಶ್ವಕರ್ಮ ಸೇವಾ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಮೊದಲನೇ ವಾರ್ಷಿಕೋತ್ಸವ ಕಾರ್ಯಕ್ರಮ ಆ.27 ರಂದು ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ಕೆ. ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಟ್ರಸ್ಟ್‌ನ ವತಿಯಿಂದ ಪ್ರತಿವರ್ಷವೂ ಪ್ರತಿಭಾ ಪುರಸ್ಕಾರ ನೀಡು ತ್ತಿದ್ದು, ಅದರಂತೆ ಈ ಬಾರಿ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.85 ರಷ್ಟು ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದರು.

ಪುರಸ್ಕಾರ ಪಡೆಯಲು ಶೇ.90 ರಷ್ಟು ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ಹಿಂದೆ ಅರ್ಜಿ ಆಹ್ವಾನ ಮಾಡಲಾಗಿತು. ಆದರೆ, ಪೋಷಕರಿಂದ ಒತ್ತಡ ಹೆಚ್ಚಿದ ಹಿನ್ನೆಲೆಯಲ್ಲಿ ಅದನ್ನು ಪರಿಷ್ಕರಿಸಿ ಶೇ.85ಕ್ಕೆ ನಿಗದಿ ಮಾಡಲಾಗಿದೆ. ಮೈಸೂರು, ಚಾಮ ರಾಜ ನಗರ, ಹಾಸನ, ಮಂಡ್ಯ ಜಿಲ್ಲೆಯ ಪ್ರತಿಭಾವಂತ ವಿಶ್ವಕರ್ಮ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಮೂಲ ಅಂಕ ಪಟ್ಟಿ ನಕಲು ಪ್ರತಿ, ಆಧಾರ್ ಕಾರ್ಡ್ ಜೆರಾಕ್ಸ್, ಭಾವಚಿತ್ರ ಪೋಷಕರ ಆಧಾರ್ ಕಾರ್ಡ್ ಅನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 97434 89608, 8618360331, 9008161154 ಸಂಪರ್ಕಿಸಿ ಎಂದು ತಿಳಿಸಿದರು.

ಪ್ರತಿಭಾ ಪುರಸ್ಕಾರ ಮತ್ತು ಮೊದಲನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆ.27ರಂದು ನಗರದ ಮೆಡಿಕಲ್ ಕಾಲೇಜಿನ ಪ್ಲಾಟಿನಂ ಜ್ಯುಬಿಲಿ ಆಡಿಟೋರಿಯಂ ನಲ್ಲಿ ಏರ್ಪಡಿಸಲಾಗಿದ್ದು, ತುಮಕೂರಿನ ನಿಟ್ಟರಹಳ್ಳಿಯ ವಿಶ್ವಕರ್ಮ ಮಹಾಸಂಸ್ಥಾನದ ಶ್ರೀ ನೀಲಕಂಠಾಚಾರ್ಯ ಸ್ವಾಮಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಈಶ್ವರ್ ಖಂಡ್ರೆ ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಸೇರಿ ದಂತೆ ಸ್ಥಳೀಯ ಜನಪ್ರತಿನಿಧಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಪುಟ್ಟ ಸ್ವಾಮಾಚಾರ್, ಉಪಾಧ್ಯಕ್ಷ ರಾಮಚಂದ್ರಾಚಾರ್, ಗೌರವ ಅಧ್ಯಕ್ಷೆ ಶಾಂತಮ್ಮ, ಖಜಾಂಚಿ ನಿಂಗಾಚಾರ್, ಸಂಚಾಲಕ ರವಿಕುಮಾರ್, ಟ್ರಸ್ಟಿಗಳಾದ ಮಹೇಶ್ ಮತ್ತು ಶಂಕರ್ ಉಪಸ್ಥಿತರಿದ್ದರು.

ಆ.5ರಂದು 'ಅಶ್ವತ್ಥಾಮನ್' ನಾಟಕ ಪ್ರದರ್ಶನ



ಮೈಸೂರು, ಆ.1(ಜಿಎ)– ಬೆಂಗಳೂರಿನ ರಂಗಚಕ್ರ ರಂಗತಂಡ ಮತ್ತು ಸಂಚಲನ ಮೈಸೂರಿನಿಂದ ಆ.5ರಂದು 'ಅಶ್ವತ್ಥಾಮನ್' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಚಲನ ಅಧ್ಯಕ್ಷ ದೀಪಕ್ ಮೈಸೂರು ತಿಳಿಸಿದರು.

ನಗರದ ಪತ್ರಕರ್ತ ಭವನದಲ್ಲಿ ಮಂಗಳ ವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6.30ಕ್ಕೆ ನಗರದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ 'ಅಶ್ವತ್ಥಾಮನ್' ನಾಟಕ ಪ್ರದರ್ಶನ ಆಯೋಜಿಸಲಾಗಿದ್ದು, 'ಅಶ್ವತ್ಥಾಮನ್ ನಾಟಕವು ಸಾಫೋಕ್ಲಿಸ್‌ನ ಏಜಾಕ್ಸ್ ನಾಟಕದ ರೂಪಾಂತರ. ಮಹಾ ಭಾರತದ ಅಶ್ವತ್ಥಾಮನ ಜೀವನವೂ ಕಥೆಗೆ ಹೊಂದಿಕೊಂಡಿದ್ದರಿಂದ ಬಿಎಂಶ್ರೀ ಅವರು ಅಶ್ವತ್ಥಾಮನ್‌ನ ರೂಪುಗೊಳಿಸಿದರು. ಇಲ್ಲಿ ಗ್ರೀಕ್ ಮತ್ತು ಭಾರತೀಯ ನಂಬಿಕೆಗಳಲ್ಲಿನ ಸಾಮ್ಯತೆಯನ್ನೂ ಕಾಣಬಹುದು ಎಂದರು.

ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಮಾತನಾಡಿ, ರಂಗಚಕ್ರ ತಂಡ ದಿಂದ ಮೈಸೂರಿನಲ್ಲಿ ನೂತನ ಪ್ರಯೋಗ ವಿದು. ಮಧು ಮಳವಳ್ಳಿ ನಿರ್ದೇಶನ, ಶಶಿಧರ ಅಡಪ ರಂಗವಿನ್ಯಾಸ, ಎಚ್.ಕೆ.ವಿಶ್ವನಾಥ್ ರಂಗ ಪರಿಕರಗಳು, ಆರ್.ಸಿ.ಧನಂಜಯ ಸಂಗೀತ, ಕೃಷ್ಣ ಚೈತನ್ಯ ಸಾಂಗತ್ಯ, ಮಾನಸ ಮುಸ್ತಫಾ ವಸ್ತ್ರ ವಿನ್ಯಾಸ, ಪ್ರತಿಭಾ ನಂದ ಕುಮಾರ್ ಪ್ರಸಾಧನ, ಉಮಾಶ್ರೀ ಮಧು ಮಳವಳ್ಳಿ ಸಹ ನಿರ್ದೇಶನದಲ್ಲಿ ನಾಟಕ ಮೂಡಿಬಂದಿದೆ. ನಗರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹಿಸ ಬೇಕು' ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಆಯಾಮ ಸಂಸ್ಥೆ ನಿರ್ದೇಶಕಿ ಡಾ.ಶಾಂಭವಿ ಸ್ವಾಮಿ, ಸಂಗೀತ ನಿರ್ದೇಶಕ ರವಿ ಮೂರೂರು, ರಂಗಚಕ್ರ ಮುಖ್ಯಸ್ಥ ಮಹೇಶ್‌ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಆ.4ರಂದು ಬೇಸಿಕ್ ಲೈಫ್ ಸೇವಿಂಗ್ ಸ್ಕಿಲ್ಸ್ ತರಬೇತಿ



ಮೈಸೂರು, ಆ.1(ಜಿಎ)– ರಾಷ್ಟ್ರೀಯ ಕೀಲು ಮತ್ತು ಮೂಳೆ ದಿನದ ಅಂಗವಾಗಿ ಆ.4ರಂದು ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ವತಿಯಿಂದ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್‌ನ ಜಂಟಿ ಕಾರ್ಯದರ್ಶಿ ಎಸ್.ರಘುನಂದನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಕೀಲು ಮತ್ತು ಮೂಳೆ ದಿನವನ್ನು 2012 ರಿಂದ ಪ್ರತಿ ವರ್ಷ ಆಗಸ್ಟ್ 4 ರಂದು ಆಚರಿಸಲಾಗುತ್ತಿದ್ದು, ಈ ಬಾರಿ ಇಂಡಿಯನ್ ಆರ್ಥೋಪೆಡಿಕ್ ಅಸೋಸಿಯೇಷನ್ 'each one train one save one' ವಿಷಯವನ್ನು ನಿಗದಿಪಡಿಸಿದ್ದು, ಈ ವಿಷಯದಂತೆ ಈ ವರ್ಷ ಭಾರತದಲ್ಲಿ ಅಪಘಾತದಿಂದ ಆಗಿರುವ ಸಾವುಗಳ ಮೇಲೆ ಕೇಂದ್ರೀಕರಿಸಿದೆ ಎಂದರು.

ಅದರಂತೆ ಆ.4ರಂದು ನಗರದ ಶಾರದಾ ಪಬ್ಲಿಕ್ ಸ್ಕೂಲ್ ಮತ್ತು ಪುಷ್ಕರಿಣಿ ಶಾಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮತ್ತು ಪತ್ರಕರ್ತರು, ಮಾಧ್ಯಮ ಮಿತ್ರರಿಗೆ ಬೇಸಿಕ್ ಲೈಫ್ ಸೇವಿಂಗ್ ಸ್ಕಿಲ್ಸ್ ತರಬೇತಿ ನೀಡಲಾಗುತ್ತಿದೆ. ಆಸ್ಟಿಯೊಪೊರೋಸಿಸ್ ಎಂಬ ಕಾಯಿಲೆ ಬಗ್ಗೆ ಕುರಿತು ಜಾಗೃತಿ ಮೂಡಿಸಲು ಆ.6ರಂದು ಬೆಳಗ್ಗೆ 7 ಗಂಟೆಗೆ ಮಹಾರಾಜ ಮೈದಾನದಿಂದ 3.5 ಕಿ.ಮೀ. 'ಸ್ಟ್ರಾಂಗ್ ಬೋನ್ಸ್ ಸ್ಟ್ರಾಂಗ್ ಇಂಡಿಯಾ' ವಾಕಥಾನ್ ಕಾರ್ಯಕ್ರಮ ವನ್ನು ಆಯೋಜಿಸಲಾಗಿದ್ದು, ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಚಾಲನೆ ನೀಡಲಿದ್ದಾರೆ. ಹಾಗೇ ನಗರದ ಹಲವು ಆಸ್ಪತ್ರೆಗಳ ಎಲ್ಲಾ ಮೂಳೆ ತಜ್ಞರು ಮತ್ತು ಸಿಬ್ಬಂದಿಗಳು ಭಾಗವಹಿಸಲಿದ್ದಾರೆ ಎಂದರು.

2019ರಲ್ಲಿ ಸುಮಾರು 4,49,002 ಅಪಘಾತ ಪ್ರಕರಣಗಳು ಸಂಭವಿಸಿವೆ, ಅದರಲ್ಲಿ 1,51,113 ಜನರು ಪ್ರಾಣ ಕಳೆದುಕೊಂಡಿದ್ದಾರೆ. 4,51,361 ಜನರು ಗಾಯಗೊಂಡಿದ್ದಾರೆ. ಹೆಚ್ಚಿನ ಜನರು ಅಪಘಾತದ ಮೊದಲ ಗಂಟೆಯಲ್ಲಿ ಅಂದರೆ ಗೋಲ್ಡನ್ ಅವರ್‌ನಲ್ಲಿ ಸರಿಯಾದ ಚಿಕಿತ್ಸೆ ಸಿಗದೆ ಸಾವನ್ನಪ್ಪಿದ್ದಾರೆ. ಇಂತಹ ಗಾಯಾಳುಗಳಿಗೆ ಸೂಕ್ತ ಪ್ರಥಮ ಚಿಕಿತ್ಸೆ ನೀಡಿದರೆ ಬಹಳಷ್ಟು ಜೀವಗಳನ್ನು ಉಳಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಡಾ ಶ್ರೇಯಸ್ ಆಳ್ವ ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯರ ದಸರಾ ಉನ್ನತ ಸಭೆಗೆ ಗೃಹ ಸಚಿವರಿಗೇ ಆಹ್ವಾನವಿಲ್ಲ!

ಬೆಂಗಳೂರು, ಆ.1(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಸರಾ ಉತ್ಸವ ಆಚರಣೆಗೆ ಸಂಬಂಧಿಸಿದಂತೆ ಕರೆದ ಉನ್ನತ ಮಟ್ಟದ ಸಭೆಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಆಹ್ವಾನ ಇರಲಿಲ್ಲವಂತೆ.



ಸುದ್ದಿಗಾರರಿಗೆ ನಿನ್ನೆ ನಡೆದ ಸಭೆಯ ಬಗ್ಗೆ ಮಾಹಿತಿ ನೀಡಿದ ಅವರು, ನಾಡಹಬ್ಬದ ಆಚರಣೆಯಲ್ಲಿ ಗೃಹ ಇಲಾಖೆ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ, ನನ್ನನ್ನು ಸಭೆಗೆ ಏಕೆ ಕರೆಯಲಿಲ್ಲ ಎಂಬ ಮಾಹಿತಿ ಇಲ್ಲ. ಜಿಲ್ಲಾಡಳಿತದ ಲೋಪವೋ ಅಥವಾ ನಾಡಹಬ್ಬ ಆಚರಣೆಯ ಉಸ್ತುವಾರಿ ಕಚೇರಿ ಲೋಪವೋ ತಿಳಿಯದು. ನಾನು ಈ ಬಗ್ಗೆ ಯಾರನ್ನು ದೂರುವುದಿಲ್ಲ. ಸಂಬಂಧಪಟ್ಟವರು ಅರ್ಥ ಮಾಡಿಕೊಳ್ಳಬೇಕಿದೆ. ನಮ್ಮ ಇಲಾಖೆ ಹಿರಿಯ ಅಧಿಕಾರಿಗಳು ಭಾಗವಹಿಸಿದಂತೆ ಕಂಡಿಲ್ಲ. ಆದರೆ, ಜಿಲ್ಲಾಮಟ್ಟದ ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದಾರೆ. ಸಭೆಗೆ ಭಾಗವಹಿಸಲೆಂದೇ ಪ್ರವಾಸದಿಂದ ಹಿಂದಿರುಗಿದೆ. ಆದರೆ, ಕಚೇರಿಗೆ ಸಭೆಯ ಬಗ್ಗೆ ಮಾಹಿತಿ ಇಲ್ಲದ ಹಿನ್ನೆಲೆಯಲ್ಲಿ ಸಭೆಗೆ ಹೋಗಲಿಲ್ಲ ಎಂದು ಹೇಳಿದರು.

ಕರ್ನಾಟಕದಲ್ಲಿ ಶ್ವಾಸಕೋಶದ ಕ್ಯಾನ್ಸರ್‌ನಿಂದ ಅಧಿಕ ಸಾವು



ಮೈಸೂರು, ಆ.1(ಜಿಎ)–ಕರ್ನಾಟಕದಲ್ಲಿ ಶ್ವಾಸಕೋಶದ ಕ್ಯಾನ್ಸರ್‌ನಿಂದ ಅಧಿಕ ಸಾವು ಸಂಭವಿಸುತ್ತಿದೆ ಎಂದು ಭಾರತ್ ಆಸ್ಪತ್ರೆ ಮತ್ತು ಅಂಕಾಲಜಿ ಸಂಸ್ಥೆಯ (HCG BHIO) ಹಿರಿಯ ವೈದ್ಯ ಡಾ.ಕೆ.ಜಿ.ಶ್ರೀನಿವಾಸ್ ತಿಳಿಸಿದರು.

ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನದ ಅಂಗವಾಗಿ ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, 2021 ರಲ್ಲಿ ಭಾರತದಲ್ಲಿ ಶ್ವಾಸಕೋಶದ ಕ್ಯಾನ್ಸರ್‌ನ ಅಂದಾಜು ಪ್ರಮಾಣವು ಪುರುಷ ರಲ್ಲಿ 1 ಲಕ್ಷದ 9 ಸಾವಿರ ಪ್ರಕರಣಗಳು ಮತ್ತು ಮಹಿಳೆಯರಲ್ಲಿ 45 ಸಾವಿರ ಪ್ರಕರಣಗಳು ಪತ್ತೆಯಾಗಿದೆ ಎಂದರು.

ಅತಿ ಹೆಚ್ಚು ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳಿರುವ ರಾಜ್ಯಗಳೆಂದರೆ ಮಿಜೋರಾಂ (1 ಲಕ್ಷಕ್ಕೆ ಶೇ.28.3), ಕೇರಳ (1 ಲಕ್ಷಕ್ಕೆ ಶೇ.27.2) ಮತ್ತು ಮಣಿಪುರ (1 ಲಕ್ಷಕ್ಕೆ ಶೇ.26.6). 2021ರಲ್ಲಿ ಕರ್ನಾಟಕ ದಲ್ಲಿ ಅಂದಾಜು ಪ್ರಮಾಣ ಪುರುಷರಲ್ಲಿ 3,614 ಮತ್ತು ಮಹಿಳೆಯರಲ್ಲಿ 2,130 ಪ್ರಕರಣಗಳು ಕಂಡಿವೆ ಎಂದು ತಿಳಿಸಿದರು.

ಕಳೆದ ಕೆಲವು ದಶಕಗಳಿಂದ ಭಾರತ ದಲ್ಲಿ ಶ್ವಾಸಕೋಶದ ಕ್ಯಾನ್ಸರ್ ಹಲವಾರು ಕಾರಣಗಳಿಂದ ಹೆಚ್ಚುತ್ತಿದ್ದು, ತಂಬಾಕು ಸೇವನೆ, ಧೂಮಪಾನ ಮತ್ತು ಕಲುಷಿತ ಗಾಳಿ ಸೇವನೆ ಮುಖ್ಯವಾಗಿದೆ. ಧೂಮ ಪಾನ, ಕಡಿಮೆ ಗಾಳಿ ಇರುವ ಮನೆಗಳಲ್ಲಿ ಅಡುಗೆ ಮತ್ತು ಬಿಸಿ ಮಾಡಲು ಘನ ಇಂಧನಗಳನ್ನು ಸುಡುವುದರಿಂದ ಉಂಟಾಗುವ ಒಳಾಂಗಣ ವಾಯು ಮಾಲಿನ್ಯದಿಂದ ಮಹಿಳೆಯರ ಲ್ಲಿಯೂ ಕ್ಯಾನ್ಸರ್ ಹೆಚ್ಚಾಗುತ್ತಿದೆ ಎಂದರು.

ಭಾರತದಲ್ಲಿ ಶ್ವಾಸಕೋಶದ ಕ್ಯಾನ್ಸರ್ ಅನ್ನು ಎದುರಿಸುವಲ್ಲಿ ಪ್ರಮುಖ ಸವಾಲು ಎಂದರೆ ಆರಂಭಿಕ ಪತ್ತೆ ಮತ್ತು ಅರಿವಿನ ಕೊರತೆ. ಎರಡು ವಾರಕ್ಕೂ ಹೆಚ್ಚು ಕಾಲ ಕೆಮ್ಮು ಕಾಣಿಸಿಕೊಂಡರೆ ತಕ್ಷಣ ವೈದ್ಯ ರನ್ನು ಕಂಡು ಸಲಹೆ ಪಡೆದುಕೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು.

ಈ ಚಿಕಿತ್ಸಾ ವಿಧಾನಗಳು ತುಂಬಾ ದುಬಾರಿಯಾಗಿದೆ. ಆದರೆ ನಮ್ಮ ಭಾರತ್ ಆಸ್ಪತ್ರೆಯಲ್ಲಿ ಪಿಇಟಿ ಸಿಟಿ ಸ್ಕ್ಯಾನ್ ಯಂತ್ರವಿದ್ದು, ಇದರಿಂದ ಶ್ವಾಸಕೋಶದ ಸಮಸ್ಯೆಯನ್ನು ಸುಲಭವಾಗಿ ಕಂಡು ಹಿಡಿಯಬಹುದಾಗಿದೆ. ಆಗಸ್ಟ್ ತಿಂಗಳ ಪ್ರತಿ ಶುಕ್ರವಾರ ಮತ್ತು ಶನಿವಾರ ಶೇ.50ರಷ್ಟು ರಿಯಾಯಿತಿ ದರದಲ್ಲಿ ಪಿಇಟಿ ಸಿಟಿ ಸ್ಕ್ಯಾನ್ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಭಾರತದಲ್ಲಿ ಶ್ವಾಸಕೋಶದ ಕ್ಯಾನ್ಸರ್ ಎದುರಿಸುತ್ತಿರುವ ಸವಾಲುಗಳನ್ನು ನಿಭಾಯಿಸಲು ಸರ್ಕಾರ, ಆರೋಗ್ಯ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಖಾಸಗಿ ವಲಯದ ನಡುವಿನ ಸಹಯೋಗವು ಅತ್ಯಗತ್ಯ. ಸಹಭಾಗಿತ್ವವನ್ನು ಬೆಳೆಸುವುದರಿಂದ ಸಮಗ್ರ ಕ್ಯಾನ್ಸರ್ ನಿಯಂತ್ರಣ ಕಾರ್ಯ ಕ್ರಮಗಳನ್ನು ಅಭಿವೃದ್ಧಿಪಡಿಸಲು ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳನ್ನು ಸುಧಾರಿಸಲು ಮತ್ತು ಸಂಶೋಧನಾ ಉಪಕ್ರಮಗಳನ್ನು ಸುಲಭಗೊಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಹಿರಿಯ ವಿಕಿರಣ ಅಂಕಾಲಜಿಸ್ಟ್ ಮತ್ತು ವೈದ್ಯಕೀಯ ಅಧೀಕ್ಷಕರಾದ ಡಾ.ವೈ.ಎಸ್. ಮಾಧವಿ, ಹಿರಿಯ ಶಸ್ತ್ರಚಿಕಿತ್ಸಾ ಅಂಕಾಲಜಿಸ್ಟ್ ಡಾ.ಎಂ.ವಿಜಯ್ ಕುಮಾರ್ ಮತ್ತು ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಆರ್.ಪಿ.ಆನಂದ್ ಉಪಸ್ಥಿತರಿದ್ದರು.

> ಶ್ವಾಸಕೋಶದ ಕ್ಯಾನ್ಸರ್‌ಗೆ ಸಂಬಂಧಿಸಿದ ಚಿಕಿತ್ಸಾ ವಿಧಾನಗಳು ಬದಲಾಗಿದ್ದು, ಅದರಂತೆ ಶಸ್ತ್ರಚಿಕಿತ್ಸೆ, ವಿಕಿರಣ ಚಿಕಿತ್ಸೆ, ಕೀಮೋಥೆರಪಿ, ಉದ್ದೇಶಿತ ಚಿಕಿತ್ಸೆಗಳು ಮತ್ತು ಇಮ್ಯುನೊಥೆರಪಿ ಸೇರಿದಂತೆ ಗಮನಾರ್ಹ ಪ್ರಗತಿಯನ್ನು ಕಂಡಿವೆ. ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯಲ್ಲಿ, ಶ್ವಾಸಕೋಶದ ಕ್ಯಾನ್ಸರ್ ಹೊಂದಿರುವ ರೋಗಿಗಳಿಗೆ ನಾವು ಆರಂಭಿಕ ಮತ್ತು ಕೊನೆಯ ಹಂತದ ಶ್ವಾಸಕೋಶದ ಕ್ಯಾನ್ಸರ್‌ಗಳಿಗೆ ಹಲವಾರು ಕ್ಲಿನಿಕಲ್ ಪ್ರಯೋಗಗಳನ್ನು ನಡೆಸುತ್ತೇವೆ. ಇದರಲ್ಲಿ ಟಾರ್ಗೆಟೆಡ್ ಥೆರಪಿಗಳು ಮತ್ತು ಇಮ್ಯುನೊಥೆರಪಿಯನ್ನು ಉಚಿತವಾಗಿ ನೀಡಲಾಗುತ್ತದೆ.
> - ಡಾ.ಕೆ.ಜಿ.ಶ್ರೀನಿವಾಸ್

— ತಿ.ನರಸೀಪುರದಲ್ಲಿ ಹತ್ಯೆಗೀಡಾದ ವೇಣುಗೋಪಾಲ್ ಪ್ರಕರಣ —

ಆರೋಪಿಗಳನ್ನು ರಕ್ಷಿಸಲು ಯತ್ನಿಸಿದರೆ ನರಸೀಪುರ ಚಲೋ ಹೋರಾಟ

ವೇಣುಗೋಪಾಲ್ ನಿವಾಸಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದ ಪ್ರಮೋದ್ ಮುತಾಲಿಕ್ ಎಚ್ಚರಿಕೆ



ತಿ.ನರಸೀಪುರ, ಆ.1 –ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಕೊಲೆ ಕೇಸಿನಲ್ಲಿ ಆರೋಪಿಗಳನ್ನು ರಕ್ಷಿಸಲು ಕಾಂಗ್ರೆಸ್ ರಾಜಕೀಯ ನಾಯಕರು ಪ್ರಯತ್ನಿಸಿದರೆ ಶ್ರೀರಾಮಸೇನೆ ಸಂಘಟನೆಯು ಲಕ್ಷಾಂತರ ಕಾರ್ಯಕರ್ತರೊಂದಿಗೆ ಟಿ.ನರಸೀಪುರ ಚಲೋ ಹೋರಾಟ ನಡೆಸಲಿದೆ ಎಂದು ಶ್ರೀರಾಮ ಸೇನಾ ಸಂಘಟನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಕಾಂಗ್ರೆಸ್ಸಿಗರಿಗೆ ಎಚ್ಚರಿಕೆ ನೀಡಿದ್ದಾರೆ.

ಇತ್ತೀಚಿಗೆ ಪಟ್ಟಣದಲ್ಲಿ ಹತ್ಯೆಯಾದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ನಿವಾಸಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಅವರು ಮಾತನಾಡಿದರು.

ಹಿಂದೂ ಕಾರ್ಯಕರ್ತ ವೇಣುಗೋಪಾಲ್ ಹಿಂದೂ ಸಮಾಜ ಒಟ್ಟಾಗಬೇಕು, ಜಾಗೃತರಾಗಬೇಕು, ಜಾತಿ, ಮತ, ಪ್ರಾಂತ, ಭಾಷೆ, ಪಕ್ಷ ಭೇದ ಇಲ್ಲದೇ ಒಂದಾಗಬೇಕೆಂದು 3 ವರ್ಷಗಳಿಂದ ನಿರಂತರವಾಗಿ ಹನುಮ ಜಯಂತಿ ಮಾಡುತ್ತಾ ಬಂದಿದ್ದ. ಆತನ ಏಳಿಗೆ ಸಹಿಸಲಾರದೇ, ಹಿಂದುತ್ವದ ಬೆಳವಣಿಗೆ ಸಹಿಸಲಾಗದೆ ಆತನನ್ನು ಹತ್ಯೆ ಮಾಡಲಾಗಿದೆ. ಈಗ ಕಾಂಗ್ರೆಸ್ ಪಕ್ಷದವರು ಕೇಸನ್ನು ತಿರುಚಲು ಯತ್ನಿಸುತ್ತಿದ್ದಾರೆಂಬ ಮಾಹಿತಿ ಇದ್ದು, ಹಾಗೇನಾದರೂ ಅವರು ಇದರಲ್ಲಿ ಮೂಗು ತೂರಿಸಿದರೆ ಶ್ರೀರಾಮ ಸೇನೆ ಸಂಘಟನೆ ಬೀದಿಗಿಳಿದು ಹೋರಾಟ ಮಾಡುತ್ತದೆ ಎಂದು ಎಚ್ಚರಿಸಿದರು.

ಪೋಲೀಸರು ಪ್ರಾಮಾಣಿಕವಾಗಿ ಕೆಲಸ ಮಾಡಲಿ!: ವೇಣುಗೋಪಾಲ್ ಕೊಲೆ ಮಕ್ಕಳಾಟ, ಹುಡುಗಾಟಿಕ್ಕೆ ನಡೆದಿದ್ದಲ್ಲ, ವೈಯಕ್ತಿಕ ಜಗಳಕ್ಕಾಗಿ ನಡೆದಿದ್ದೂ ಅಲ್ಲ, ಆತನ ಹಿಂದುತ್ವದ ಬೆಳವಣಿಗೆ ಸಹಿಸಲಾಗದೆ ದುಷ್ಟ ಶಕ್ತಿಗಳು ಮಾಡಿರುವ ಕೃತ್ಯ ಇದು.ಪಾಪಿಗಳಿಗೆ ಶಿಕ್ಷೆಯಾಗಬೇಕು. ಕೇಸು ನ್ಯಾಯಾಲಯದಲ್ಲಿದೆ. ಪೋಲೀಸರು ಯಾವುದೇ ಒತ್ತಡಕ್ಕೆ ಮಣಿಯದೇ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಅವರು ಆಗ್ರಹಿಸಿದರು.

ರಾಜಕೀಯ ವ್ಯಕ್ತಿಗಳು ನೀಚರು!: ರಾಜಕೀಯ ವ್ಯಕ್ತಿಗಳು ನೀಚರು ಮತ್ತು ನಿರ್ಲಜ್ಜರು,ಅವರಿಗೆ ದೇಶ, ಧರ್ಮ, ಹಿಂದುತ್ವ ಎಂಬುದಿಲ್ಲ, ಅವರಿಗೆ ಅಧಿಕಾರ ಬೇಕು, ಹಣಬೇಕು, ಮೆರೆಯಬೇಕು ಅಷ್ಟೇ ಎಂದು ರಾಜಕಾರಣಿಗಳ ಮೇಲೆ ವಾಗ್ದಾಳಿ ನಡೆಸಿದ ಪ್ರಮೋದ್ ಪೋಲೀಸರು ನೀವು ರಕ್ಷಕರಿದ್ದೀರಿ, ಪ್ರಾಮಾಣಿಕವಾಗಿ ಆ ವ್ಯಕ್ತಿಯ ಸಾವಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು.

ಶ್ರೀರಾಮ ಸೇನೆಯ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ, ಬೆಂಗಳೂರು ವಿಭಾಗೀಯ ಅಧ್ಯಕ್ಷ ಅಮರ್‌ನಾಥ್, ನಗರಾಧ್ಯಕ್ಷ ಎಸ್.ಭಾಸ್ಕರ್ ಜಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಸೋಮಶೇಖರ್, ಶಿವಾಜಿ ನಗರ ಅಧ್ಯಕ್ಷ ಲಕ್ಷ್ಮೀಶ, ಸಿದ್ದಲಿಂಗಮೂರ್ತಿ, ಯುವ ಬ್ರಿಗೇಡ್‌ನ ರಾಮನುಜಂ ಮತ್ತಿತರರಿದ್ದರು.

ಹೆಡಿಯಾಲ ಗ್ರಾಪಂ ಕಾಂಗ್ರೆಸ್ ವಶಕ್ಕೆ

ಅಧ್ಯಕ್ಷೆಯಾಗಿ ಮಹಾದೇವಿ, ಉಪಾಧ್ಯಕ್ಷರಾಗಿ ನಾಗೇಶ್ ಆಯ್ಕೆ



ಮಲ್ಲುಂಡಿ, ಆ1– ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಹಾದೇವಿ ಹಾಗೂ ಉಪಾಧ್ಯಕ್ಷರಾಗಿ ನಾಗೇಶ್ ಅವರು ಆಯ್ಕೆಗೊಂಡಿದ್ದಾರೆ.

23 ಸದಸ್ಯರ ಬಲದ ಹೆಡಿಯಾಲ ಗ್ರಾಪಂ ಅಧ್ಯಕ್ಷೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಹಾದೇವಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದು, ಬೇರೆ ಯಾರು ನಾಮಪತ್ರ ಸಲ್ಲಿಸಿದ ಕಾರಣ ಅವರು ಅವಿರೋಧವಾಗಿ ಆಯ್ಕೆಯಾದರು. ನಂತರ ನಡೆದ ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ನಾಗೇಶ್ ಹಾಗೂ ಅಸ್ರಫ್ ಅಲಿ ನಾಮಪತ್ರ ಸಲ್ಲಿಸಿದರು. ಆದರೆ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ನಾಗೇಶ್ ಅವರು ಗೊಂದಲಕ್ಕೊಳಗಾಗಿ ತಮ್ಮ ಮತವನ್ನು ತಮಗೂ ಹಾಕಿಕೊಂಡರಲ್ಲದೆ, ಪ್ರತಿಸ್ಪರ್ಧಿ ಅಭ್ಯರ್ಥಿಗೂ ಮತ ಹಾಕಿದರು. ಇದರಿಂದ ಅವರ ಮತ ತಿರಸ್ಕೃತಗೊಂಡಿತು. ಒಬ್ಬರು ಗೈರು ಹಾಜರಾಗಿದ್ದರಿಂದ 12 ಮತ ಪಡೆದ ನಾಗೇಶ್ ಉಪಾಧ್ಯಕ್ಷ ಸ್ಥಾನವನ್ನು ತಮ್ಮದಾಗಿಸಿಕೊಂಡರು. ಇವರಿಬ್ಬರ ಆಯ್ಕೆಯನ್ನು ಚುನಾವಣಾಧಿಕಾರಿ ಭೀಮ್ ನಾಯಕ್ ಒಡ್ಡರ್ ಅವರು ಘೋಷಣೆ ಮಾಡಿದರು. ಗ್ರಾಪಂ ಸದಸ್ಯರುಗಳಾದ ಗೋವಿಂದರಾಜು, ರಾಣಿ ಪಟೇಲ್, ಚನ್ನಪ್ಪ, ಗುರುಮಲ್ಲಪ್ಪ, ಶಿವರತ್ನ, ಚಿಕ್ಕಮ್ಮ, ರಾಜಮ್ಮ, ಮಂಜಣ್ಣ, ಕೃಷ್ಣ, ಭಾಗ್ಯ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಜಯರಾಂ, ಸುಬ್ರಹ್ಮಣ್ಯ, ನಾಗರಾಜೇಗೌಡ, ಸಾಧಿಕ್, ಪ್ರಕಾಶ, ಹುಚ್ಚೇಗೌಡ, ಅನ್ಸರ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ಸಾರ್ವಜನಿಕರಿಗೆ ಲಕ್ಷಾಂತರ ರೂ. ಪಂಗನಾಮ ಹಾಕಿ ಪರಾರಿಯಾಗಿರುವ ಜ್ಯುವೆಲರಿ ಅಂಗಡಿ ಮಾಲೀಕ

- ಹುಣಸೂರು ಪೊಲೀಸ್ ಠಾಣೆಯಲ್ಲಿ 50ಕ್ಕೂ ಹೆಚ್ಚು ಮಂದಿಯಿಂದ ದೂರು
- ಗಿರವಿ ಇಟ್ಟವರ ಒಡವೆ, ಚಿನ್ನದ ಒಡವೆ ಮಾಡಿಸಲು ಹಣ ಕೊಟ್ಟವರ ಪರದಾಟ



ಹುಣಸೂರು, ಆ.1– ಚಿನ್ನದ ಆಭರಣ ಮಾಡಿಸಲು ನೀಡಿದ್ದ ಹಣ ಹಾಗೂ ಗಿರವಿ ಇಟ್ಟಿದ್ದ ಬಂಗಾರದ ಆಭರಣ ಗಳೊಂದಿಗೆ ಗಿರವಿ ಮತ್ತು ಚಿನ್ನದ ವ್ಯಾಪಾರಿಯೊಬ್ಬ ತಮ್ಮ ಕುಟುಂಬ ದೊಂದಿಗೆ ಪರಾರಿಯಾಗುವ ಮೂಲಕ ಸಾರ್ವಜನಿಕರಿಗೆ ಪಂಗನಾಮ ಹಾಕಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ನಗರದ ಸ್ಟೋರ್ ಬೀದಿಯ ನಿವಾಸಿ, ಬಜಾರ್ ರಸ್ತೆಯ ವಿನಾಯಕ ಜ್ಯುವೆಲ್ಲರ್ಸ್ ಮಾಲಿಕ ರಾಜಸ್ತಾನ ಮೂಲದ ಪ್ರೀತೇಶ್ ಅಲಿಯಾಸ್ ಪಿಂಟು ಸಾರ್ವಜನಿಕರಿಗೆ ವಂಚಿಸಿ ಪರಾರಿಯಾಗಿರುವಾತ.


ನಗರದ ಬಜಾರ್ ರಸ್ತೆಯಲ್ಲಿ ಪ್ರಿತೇಶ್ ಕಳೆದ ಹತ್ತು ವರ್ಷಗಳಿಂದ ವಿನಾಯಕ ಜ್ಯುವೆಲರಿ ಅಂಗಡಿ ನಡೆಸುತ್ತಿದ್ದು, ಗ್ರಾಹಕರ ನಂಬಿಕೆ ಗಳಿಸಿದ್ದ. ಹೀಗಾಗಿ ಹಲವಾರು ಮಂದಿ ಗ್ರಾಹಕರು ಈತನ ಬಳಿ ಚಿನ್ನದ ಒಡವೆ ಮಾಡಿಸಲು ಮುಂಗಡ ಹಣ ನೀಡಿದ್ದರು, ಅಲ್ಲದೆ ಒಡವೆ ಮಾರಾಟದ ಜೊತೆಗೆ ಪಾನ್ ಬ್ರೋಕರ್ ಲೈಸನ್ಸ್ ಪಡೆದು ಗಿರವಿ ವ್ಯವಹಾರ ಕೂಡ ನಡೆಸುತ್ತಿದ್ದ ನೂರಾರು ಮಂದಿ ಒಡವೆಗಳನ್ನು ಗಿರವಿ ಇಟ್ಟಿದ್ದರು. ಕಳೆದ ಶುಕ್ರವಾರದಿಂದ ಅಂಗಡಿಗೆ ಬೀಗ ಜಡಿದು, ಸ್ಟೋರ್ ಬೀದಿಯಲ್ಲಿ ವಾಸವಿದ್ದ ಮನೆಯನ್ನು ಸಹ ಖಾಲಿ ಮಾಡಿಕೊಂಡು ಕುಟುಂಬ ಸಮೇತ ನಾಪತ್ತೆಯಾಗಿದ್ದಾನೆ.

ಒಡವೆ ಮಾಡಿಸಲು ಮುಂಗಡ ಹಣ ಪಾವತಿಸಿರುವವರು, ಗಿರವಿ ಇಟ್ಟವರು ತಮ್ಮ ಒಡವೆ ಬಿಡಿಸಿಕೊಳ್ಳಲು ಹಣ ನೀಡಿದ್ದರು. ಬ್ಯಾಂಕ್ ಲಾಕರ್‌ನಲ್ಲಿ ಒಡವೆ ಇಟ್ಟಿದ್ದು, ತಂದು ಕೊಡುವೆ ಎಂದು ವಾಯಿದೆ ಹೇಳಿ ಇದೀಗ ನಾಪತ್ತೆಯಾಗಿದ್ದಾನೆ. ನಿತ್ಯ ಅಂಗಡಿ ಬಳಿಗೆ ದಾವಿಸುತ್ತಿರುವ ಗ್ರಾಹಕರು ಬೀಗ ಹಾಕಿರುವುದನ್ನು ಕಂಡು ಆತಂಕಕ್ಕೊಳಗಾಗಿದ್ದಾರೆ.

ಈ ಸಂಬಂಧ ಕಟ್ಟೆಮಳಲವಾಡಿಯ ಮಜೀಜ್ ಅಹಮದ್, ನಗರದ ಮಂಜುನಾಥ ಬಡಾವಣೆಯ ದೀಪು, ಸರಸ್ವತಿಪುರಂ ಬಡಾವಣೆಯ ಅರ್ಜುನ್, ಸೀತಾ, ಲಕ್ಷ್ಮಿ, ಸಿದ್ದ, ಯಶೋಧರಪುರದ ಅತೀಬಾ ಬಾನು, ಮಜೀದ್ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ದೂರು ನೀಡಿದ್ದಾರೆ.

ಕೆಲವರು ಒಡವೆ ಮಾಡಿಸಲು ಮುಂಗಡ ಹಣ ನೀಡಿದ್ದೇವೆಂತಲೂ, ಹಲವರು ಒಡವೆ ಬಿಡಿಸಲು ಹಣ ನೀಡಿದ್ದೇವೆಂತಲೂ ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ನಾಪತ್ತೆಯಾಗಿರುವ ಪ್ರಿತೇಶ್‌ನ ಪತ್ತೆಗೆ ಕ್ರಮವಹಿಸಿದ್ದಾರೆ.

ಪಿ.ಪಟ್ಟಣದಲ್ಲಿ ತಂಬಾಕು ಬದಲು ರೇಷ್ಮೆಗೆ ಆದ್ಯತೆ ನೀಡಿ; ಸಚಿವ ಕೆ.ವೆಂಕಟೇಶ್ ಸೂಚನೆ



ಪಿರಿಯಾಪಟ್ಟಣ, ಆ.1– ತಾಲೂಕಿನಲ್ಲಿ ತಂಬಾಕು ಬೆಳೆಗೆ ಪರ್ಯಾಯವಾಗಿ ರೇಷ್ಮೆ ಕೃಷಿಗೆ ಹೆಚ್ಚಿನ ಆದ್ಯತೆ ನೀಡುವುದರೊಂದಿಗೆ ರೈತರಿಗೆ ರೇಷ್ಮೆ ಕೃಷಿ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಮಾದೇಶ್ ಅವರಿಗೆ ರೇಷ್ಮೆ ಮತ್ತು ಪಶು ಸಂಗೋಪನಾ ಸಚಿವ ವೆಂಕಟೇಶ್ ಸೂಚಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ಕುಂದು ಕೊರತೆ ಆಲಿಸಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಮಾತನಾಡುತ್ತಿದ್ದ ಅವರು, ರೇಷ್ಮೆ ತಳಿ, ಮೊಟ್ಟೆ ಮಾಡುವ ಕ್ರಮ ಸೇರಿದಂತೆ ರೇಷ್ಮೆ ಇಲಾಖೆಯಲ್ಲಿನ ಕುಂದು ಕೊರತೆ ಬಗ್ಗೆ ಚರ್ಚಿಸಿ ಸಾರ್ವಜನಿಕರಿಗೆ ಇಲಾಖೆಯಲ್ಲಿ ದೊರೆಯಬಹುದಾದ ಅನುಕೂಲತೆಗಳ ಬಗ್ಗೆ ಮಾಹಿತಿ ಪಡೆದು ತಾಲೂಕಿನಲ್ಲಿ ಇನ್ನು ಮುಂದೆ ರೇಷ್ಮೆ ಕೃಷಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಕರೆ ನೀಡಿದರು.

ಕಗ್ಗುಂಡಿ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ತಾಲೂಕಿನ ರೇಷ್ಮೆ ಬೆಳೆಗಾರರಿಗೆ ಅಗತ್ಯವಾದಷ್ಟು ನರ್ಸರಿ ಸಸಿಗಳನ್ನು ಬೆಳೆದು ರಿಯಾಯಿತಿ ದರದಲ್ಲಿ ಸರಬರಾಜು ಮಾಡುವಂತೆ ಹಾಗೂ ಸರ್ಕಾರದ ಸವಲತ್ತುಗಳಾದ ಹೊಸ ತಳಿ ನಾಟಿಗೆ ಸಹಾಯಧನ, ಹನಿ ನೀರಾವರಿ ಸಹಾಯಧನ, ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ, ಚೌಕಿ ಪ್ರೋತ್ಸಾಹ ಧನ, ದ್ವಿ ತಳಿಯ ಗೂಡುಗಳಿಗೆ ಸಿಗುವ ಪ್ರೋತ್ಸಾಹ ಧನ, ಸಲಕರಣೆಗಳ ಪ್ರೋತ್ಸಾಹ ಧನ ಹಾಗೂ ರೈತರಿಗೆ ತರಬೇತಿ ಅಧ್ಯಯನ ಪ್ರವಾಸ ಸೇರಿದಂತೆ ಕಾರ್ಯಾಗಾರಗಳನ್ನು ನಡೆಸಬೇಕೆಂದು ಸೂಚಿಸಿದರು.

ಇದಕ್ಕೆ ಸಂಬಂಧಿಸಿದಂತೆ ರೇಷ್ಮೆ ಇಲಾಖೆ ಉಪ ನಿರ್ದೇಶಕರಾದ ಮಂಜುಳಾ ಅವರನ್ನು ಸ್ಥಳದಿಂದಲೇ ಮೊಬೈಲ್ ಮೂಲಕ ಸಂಪರ್ಕಿಸಿ ತಾಲೂಕಿನ ರೇಷ್ಮೆ ಬೆಳೆಗಾರರಿಗೆ ಆದಷ್ಟು ನೆರವು ನೀಡುವಂತೆ ಆದೇಶಿಸಿದರು.

ಇದೇ ಸಂದರ್ಭದಲ್ಲಿ ಪಶು ಸಂಗೋಪನ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸೋಮಯ್ಯ ಸಚಿವರಿಗೆ ಇಲಾಖೆಗೆ ಬೇಕಾದ ಹಾಲು ಕರೆಯುವ ಯಂತ್ರ ಮೇವು ಕತ್ತರಿಸುವ ಯಂತ್ರ ಸೇರಿದಂತೆ ರಾವಂದೂರು ಗ್ರಾಮಕ್ಕೆ ನೂತನ ಹೊಸ ಕಟ್ಟಡದ ಪ್ರಸ್ತಾವನೆ ಸಲ್ಲಿಸಿದರು ಹಾಗೂ ಆಸ್ಪತ್ರೆಗೆ ಆರೋಗ್ಯ ಸ್ಥಿತಿ ಇಲ್ಲದೆ ಇದ್ದಾಗ ಚಿಕಿತ್ಸೆಗೆ ಬಂದು ನಿತ್ರಾಣಗೊಂಡು ಕೆಳಗೆ ಬಿದ್ದಿರುವ ಹಸುಗಳನ್ನು ಎತ್ತುವ ಲಿಫ್ಟಿಂಗ್ ಯಂತ್ರಗಳ ಕೊರತೆ ಇರುವುದಾಗಿ ಮಾಹಿತಿ ಪಡೆದರು. ಸಭೆಯಲ್ಲಿ ಮುಖಂಡರಾದ ಹೊಲದಪ್ಪ, ಮೋಹನ್, ತಮ್ಮಣ್ಣಯ್ಯ, ಗಿರೀಶ್ ಸೇರಿದಂತೆ ಅನೇಕ ಮುಖಂಡರುಗಳು ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ಇಟ್ನ ಗ್ರಾಪಂಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಸರಗೂರು, ಆ.1– ತಾಲೂಕಿನ ಇಟ್ನ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜಯರಾಮ, ಉಪಾಧ್ಯಕ್ಷರಾಗಿ ಗೌರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಂಚಾಯಿತಿ ಆವರಣದಲ್ಲಿ ಮಂಗಳವಾರ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಯಾಗಿ ಜಯರಾಮ, ಉಪಾಧ್ಯಕ್ಷ ಸ್ಥಾನಕ್ಕೆ ಗೌರಮ್ಮ ಅವರನ್ನು ಬಿಟ್ಟರೆ ಬೇರೆ ಯಾರು ನಾಮ ಪತ್ರ ಸಲ್ಲಿಸಿದ ಹಿನ್ನೆಲೆ ಅಧ್ಯಕ್ಷರಾಗಿ ಜಯರಾಮ, ಉಪಾಧ್ಯಕ್ಷರಾಗಿ ಗೌರಮ್ಮ ಅವಿರೋಧವಾಗಿ ಆಯ್ಕೆಯಾದರು. ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಎಚ್.ಡಿ. ಶ್ರೀಧರಮೂರ್ತಿ, ಪಿಡಿಒ ಎಚ್.ಎಸ್.ಚಿನ್ನಸ್ವಾಮಿ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು. ಸದಸ್ಯರಾದ ಗೀತಾ, ಸವಿತಾ, ಕಾಳಿಂಗನಾಯಕ, ಎಸ್.ಚನ್ನ ನಾಯಕ, ಶಿವಮ್ಮ, ಗ್ರಾಮದ ಮುಖಂಡರಾದ ವಿ.ಸಿದ್ದರಾಜು, ಬೆಟ್ಟನಾಯಕ, ಈರನಾಯಕ, ಎನ್. ಬಸವನಾಯಕ, ಐ.ಬಿ.ರವಿಕುಮಾರ್, ಚಿಕ್ಕನಾಯಕ ಬಿ.ಬಸವರಾಜು, ಲಿಂಗರಾಜು, ಮಧು ಸೂದನ್, ಚಂದ್ರು ಗ್ರಾಮಸ್ಥರು ಹಾಜರಿದ್ದರು.

ಬ್ಯಾಡರಹಳ್ಳಿ ಗ್ರಾಪಂಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಕೆ.ಆರ್.ನಗರ, ಆ.1– ತಾಲೂಕಿನ ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಈರಮ್ಮ ಸಣ್ಣಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಭಾಗ್ಯ ನಾಗರಾಜು 8 ಮತಗಳನ್ನು ಪಡೆದು ಚುನಾಯಿತರಾದರೆ 7 ಮತಗಳನ್ನ ಪಡೆದ ಛಾಯಕುಮಾರಿ ಪರಾಭಗೊಂಡರು.

ಒಟ್ಟು 15 ಮಂದಿ ಸದಸ್ಯರಿರುವ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿತ್ತು, ಓರ್ವ ಸದಸ್ಯರಾದ ಈರಮ್ಮ ಸಣ್ಣಯ್ಯ ಅವಿರೋಧವಾಗಿ ಆಯ್ಕೆಯಾದರು. ಸಾಮಾನ್ಯ ಮಹಿಳೆಗೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ ಭಾಗ್ಯ ನಾಗರಾಜು ಮತ್ತು ಛಾಯಕುಮಾರಿ ನಾಮಪತ್ರ ಸಲ್ಲಿಸಿದ್ದರು. ಭಾಗ್ಯ ನಾಗರಾಜು 8 ಮತಗಳನ್ನು ಪಡೆದು ಚುನಾಯಿತರಾದರೆ, ಛಾಯ ಕುಮಾರಿ 7 ಮತಗಳನ್ನು ಪಡೆದು ಪರಾಭವಗೊಂಡರು.

ಪಂಚಾಯಿತಿಯ ಆಡಳಿತ ಕಛೇರಿಯಲ್ಲಿ ಮಂಗಳವಾರ ಚುನಾವಣೆ ನಡೆಯಿತು. ಚುನಾವಣಾಧಿಕಾರಿಯಾಗಿ ಲೋಕೋಪಯೋಗಿ ಇಲಾಖೆಯ ಎಇಇ ಸುಮಿತ ಕರ್ತವ್ಯ ನಿರ್ವಹಿಸಿದರು. ಚುನಾವಣಾ ಸಭೆಯಲ್ಲಿ ಸದಸ್ಯರಾದ ಎಸ್.ಎಂ. ರಂಜಿತಾ, ಪುಟ್ಟಲಕ್ಷ್ಮಮ್ಮ, ಬಿ.ಎಲ್. ಪ್ರಾಣೇಶ್, ನಾರಾಯಣಸ್ವಾಮಿ, ಕುಮಾರಿ, ರಾಮಚಂದ್ರೇಗೌಡ, ಆನಂದ, ಮಹದೇವ, ಈಶ್ವರರಾವ್ ಖರಾಡೆ, ರೇಖಾ, ರಮೇಶ್, ಭಾರತಿ, ಪಿಡಿಒ ಮಹೇಶ್ ಇದ್ದರು.

ಮಣಿಪುರ ಘಟನೆ ಖಂಡಿಸಿ ಹೆಚ್.ಡಿ.ಕೋಟೆಯಲ್ಲಿ ಪ್ರತಿಭಟನೆ

ಮಣಿಪುರ, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ



ಹೆಚ್.ಡಿ.ಕೋಟೆ, ಆ.1– ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ ಘಟನೆ ಖಂಡಿಸಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕುಗಳ ಕ್ರೈಸ್ತರ ಹಾಗೂ ಅಲ್ಪಸಂಖ್ಯಾತರ ಘಟಕ ವತಿಯಿಂದ ಪಟ್ಟಣದ ಆಡಳಿತ ಸೌಧದ ಮುಂಭಾಗ ಪ್ರತಿಭಟನೆ ನಡೆಸಿ ತಾಸಿಲ್ದಾರ್ ಸಣ್ಣ ರಾಮಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಇದಕ್ಕೂ ಮುನ್ನ ಪ್ರತಿಭಟನಾಕಾರರು ಪಟ್ಟಣದಲ್ಲಿರುವ ಅಂಬೇಡ್ಕರ್ ಭವನದಿಂದ ಮೆರವಣಿಗೆ ಹೊರಟು, ಮೆರವಣಿಗೆಯಲ್ಲಿ ಘೋಷಣೆ ಕೂಗುವುದರ ಮೂಲಕ ಆಡಳಿತ ಸೌಧ ತಲುಪಿ, ತಹಸೀಲ್ದಾರ್ ಸಣ್ಣ ರಾಮಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನಾಕಾರರನ್ನು ಕುರಿತು ತಾಲೋಕು ಚರ್ಚ್‌ಗಳ ಅಧ್ಯಕ್ಷ ಜೈ ಕುಮಾರ್ ದುಬಾಲ ಮಾತನಾಡಿ, ಸ್ತ್ರೀಯರನ್ನು ಗೌರವಿಸುವ ನಮ್ಮ ಭಾರತ ದೇಶದಲ್ಲಿ ಸ್ತ್ರೀಯರಿಗೆ, ಗೌರವವಿಲ್ಲದೆ ಬೆತ್ತಲೆ ಮಾಡಿ ಮೆರವಣಿಗೆ ಮಾಡಿರುವುದು ನಿಜಕ್ಕೂ ಖಂಡನೀಯ. ಒಬ್ಬ ಯೋಧ ದೇಶವನ್ನು ಕಾಯುತ್ತಾನೆ. ಆದರೆ ಆತನ ಪತ್ನಿಯನ್ನು ರಕ್ಷಿಸಿಕೊಳ್ಳಲು ಆಗುತ್ತಿಲ್ಲ ಎಂದರೆ ಎಂತಹ ದುರ್ವಿಧಿ. ಇಂತ ಘಟನೆಗಳಿಗೆ ಕುಮ್ಮಕ್ಕು ಕೊಡುತ್ತಿರುವ ಎಲ್ಲರನ್ನೂ ಬಂಧಿಸಬೇಕು ಎಂದು ಆಗ್ರಹಿಸಿದರು.

ಮಣಿಪುರ ರಾಜ್ಯದ ಕೊಂಗ್ ಪೋಕ್ಷಿ ಜಿಲ್ಲೆಯಲ್ಲಿ ಬಹು ಸಂಖ್ಯಾತ ಮೈಯಿಥಿ ಜನಾಂಗ ಬುಡಕಟ್ಟು ಕೋಕಿ ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ ಕ್ರೂರ ಅತ್ಯಾಚಾರ ಎಸಗಿದೆ. ಮೈಯಿಥಿ ಹಾಗೂ ಕುಕಿ ಸಮುದಾಯಗಳ ನಡುವಿನ ನಡೆದ ಗಲಭೆಯಿಂದಾಗಿ 160ಕ್ಕೂ ಹೆಚ್ಚು ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಪ್ರಕರಣದ ಬಗ್ಗೆ ಮಣಿಪುರ ರಾಜ್ಯದ ಮುಖ್ಯಮಂತ್ರಿಯೇ ಘಟನೆ ಬಗ್ಗೆ ಪ್ರತ್ಯಕ್ಷವಾಗಿ ಒಪ್ಪಿಕೊಂಡಿದ್ದಾರೆ. ಈಗಲೂ ಸಹ ಮಣಿಪುರ ಹತ್ತಿ ಉರಿಯುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಸಾವಿರಾರು ಮನೆ ಗಳು ಸುಟ್ಟು ಬಸ್ಮವಾಗಿವೆ, ಸಾವಿರಾರು ಜನರು ತಮ್ಮ ಮನೆ ಮಠ ಬಂಧು–ಬಳಗ, ಕಳೆದುಕೊಂಡು ಅನಾಥರಾಗಿದ್ದಾರೆ. ಇಂತಹ ಘನಘೋರ ಘಟನೆಗಳು ಮಣಿಪುರ ರಾಜ್ಯಾದ್ಯಂತ ಹವ್ಯಹತವಾಗಿ ನಡೆಯುತ್ತಿದ್ದರು ದೇಶದ ಪ್ರಧಾನ ಮಂತ್ರಿ ಮೌನಕ್ಕೆ ಶರಣಾಗಿದ್ದು ಖಂಡನೀಯ. ತಮ್ಮದೇ ಸರ್ಕಾರ ಮಣಿಪುರ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದರೂ ಸರ್ಕಾರದ ವಿರುದ್ಧ, ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟದ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಿಪ್ತರಾಗಿದ್ದಾರೆ ಎಂದು ದೂರಿದರು.

ಇದೇ ವೇಳೆ ತಹಶೀಲ್ದಾರ್ ಸಣ್ಣ ರಾಮಪ್ಪ ಅವರು ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಮಲ್ಲಿಕಾರ್ಜುನ್, ಲೋಕೇಶ್, ಚಂದ್ರು, ಡೇವಿಡ್, ಮುನಿರತ್ನ, ಬಸವರಾಜು, ಜೋಸೆಫ್, ಪ್ರೇಮ್ ಕುಮಾರ್, ದಾನಿಯಲ್, ಸುರೇಶ್, ಅನುಷಾ ಶೈಲಾಸುಧಾಮಣಿ ದೇವದಾಸ್ ರೆಬೆಕ, ಮಲ್ಲಿಕಾರ್ಜುನ್, ಜಾಯ್ ಪ್ರಿಯದರ್ಶಿನಿ, ಶಿವಮ್ಮ, ಒಲಿಬಿಂಯಾ ಕ್ರೇಜಿ, ಚಂದ್ರು, ಸಿಮಿಯೋನ್, ಪೀಟರ್, ರವಿಕುಮಾರ್, ಸುರೇಶ್, ಸಿದ್ದು ಸ್ಟೀಫಾನ್, ರಾಯಪ್ಪ, ಇನ್ನು ಮುಂತಾದವರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
- ಸ್ಕ್ರೀನ್ 2 ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
- ಸ್ಕ್ರೀನ್ 3 ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
- ಸ್ಕ್ರೀನ್ 4 ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
- ಸ್ಕ್ರೀನ್ 3 ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
- ಸ್ಕ್ರೀನ್ 4 ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ.
- ಸ್ಕ್ರೀನ್ 2 ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
- ಸ್ಕ್ರೀನ್ 3 ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 4 ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬ್ರೊ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆಚಾರ್ & ಕೋ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರಾಖಿ ಔರ್ ರಾಣಿ ಪ್ರೇಂ ಖಹಾನಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಈಡಂಬ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಬ್ರೋ (ತೆ)	4 ಪ್ರದರ್ಶನಗಳು
ಸಂಗಂ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬ್ರೋ (ತೆ)	4 ಪ್ರದರ್ಶನಗಳು
ಪ್ರಭಾ	
ಡಾನ್ ಕುಮಾರ (ಕ)	4 ಪ್ರದರ್ಶನಗಳು

ತುಂಬಲ ಗ್ರಾಪಂಗೆ ರಾಮನಂಜಯ್ಯ ಅಧ್ಯಕ್ಷ

ಸರಸ್ವತಿ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ



ತಿ.ನರಸೀಪುರ, ಆ.1 –ತಾಲೂಕಿನ ತುಂಬಲ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಬೊಮ್ಮನಾಯಕನಹಳ್ಳಿ ರಾಮ ನಂಜಯ್ಯ, ಉಪಾಧ್ಯಕ್ಷರಾಗಿ ಮುತ್ತತ್ತಿ ಗ್ರಾಮದ ಸರಸ್ವತಿ ಆಯ್ಕೆಯಾದರು.

ಗ್ರಾಮದ ಪಂಚಾಯತಿ ಕಚೇರಿಯಲ್ಲಿ 30 ತಿಂಗಳ ಅವಧಿಗೆ ಅಧ್ಯಕ್ಷ –ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಕರೆಯಲಾಗಿದ್ದ ಚುನಾವಣೆ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ರಾಮನಂಜಯ್ಯ, ಉಪಾಧ್ಯಕ್ಷ ಸ್ಥಾನಕ್ಕೆ ಸರಸ್ವತಿ ಇಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಇವರಿಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣ ಪ್ರಕಟಿಸಿದರು.

ಪಂಚಾಯತಿ ಒಟ್ಟು 13 ಸದಸ್ಯರ ಪೈಕಿ ನಿಕಟಪೂರ್ವ ಅಧ್ಯಕ್ಷೆ ಪಿ.ಎಂ.ಸುಲೋಚನ, ಉಪಾಧ್ಯಕ್ಷ ಚಂದ್ರಶೇಖರ್, ಪದ್ಮ ನಿಂಗಪ್ಪ, ರತ್ನಮ್ಮ ಉಮಾ, ಅನಿತಾ, ಶೇಖರ್, ಕುಬಯ್ಯ ಸತೀಶ ಹಾಗೂ ಮಣಿಯಮ್ಮ ಚುನಾವಣಾ ಸಭೆಗೆ ಹಾಜರಾಗಿ ಪಂಚಾಯ್ತಿ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರೆ ಸದಸ್ಯ ಎಸ್.ಬಸವರಾಜು ಸಭೆಗೆ ಗೈರಾಗಿದ್ದರು. ಅವಿರೋಧ ಆಯ್ಕೆ ಪ್ರಕಟವಾಗುತ್ತಿದ್ದಂತೆ ಪಂಚಾಯ್ತಿ ಮುಂಭಾಗ ಜಮಾಯಿಸಿದ್ದ ನೂರಾರು ಮಂದಿ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಕುರುಬರ ಸಂಘದ ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರೇವಣ್ಣ, ಪುರಸಭೆ ಸದಸ್ಯ ತುಂಬಲಾ ಪ್ರಕಾಶ್, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆರ್.ಪಿ.ಹುಂಡಿ ನಾಗರಾಜು ತುಂಬಲಾ ಅಂದಾನಿ, ಪದ್ಮಾನಿಂಗಪ್ಪ ಗುರು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಧನಂಜಯ, ಲೆಕ್ಕ ಸಹಾಯಕ ಕುಮಾರಸ್ವಾಮಿ, ಕಾರ್ಯದರ್ಶಿ ಪ್ರವೀಣ್ ಇತರರಿದ್ದರು.

ಆ.8 ರಿಂದ ಹಸು ಸಾಕಾಣಿಕೆ ತರಬೇತಿ

ಹುಣಸೂರು, ಆ.1– ಪಶು ಸಂಗೋಪನಾ ಇಲಾಖೆ ಮತ್ತು ಶ್ರೀ ಗಂಗಾ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ಅ.8 ರಿಂದ ಹಸು ಸಾಕಾಣಿಕೆ ತರಬೇತಿ ಕಾರ್ಯಕ್ರಮವನ್ನು ತಾಲೂಕಿನ ಗಾವಡಗೆರೆ ಗ್ರಾಮದಲ್ಲಿ ನಡೆಸಲಾಗುವುದರಿಂದ ಆಸಕ್ತಿ ಇರುವವರು ಕೆಳಕಂಡ ಮೊಬೈಲ್ ನಂಬರ್‌ಗಳಿಗೆ ಸಂಪರ್ಕಿಸಲು ಕೋರಲಾಗಿದೆ.ತರಬೇತಿ ಪೂರ್ಣಗೊಂಡ ನಂತರ ಪ್ರಮಾಣ ಪತ್ರ ವಿತರಣೆ ಮಾಡಲಾಗುವುದು.ಹೆಚ್ಚಿನ ಮಾಹಿತಿಗಾಗಿ ಮೊ.9535136319, 9449083805 ನಂಬರ್ ಗೋಳನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ವೇಣುಗೋಪಾಲ್ ಹತ್ಯೆ ಪ್ರಕರಣ ಮುಚ್ಚಿ ಹಾಕಲು ಕಾಂಗ್ರೆಸ್ ಸರ್ಕಾರದ ಯತ್ನ

ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆರೋಪ



ಮೈಸೂರಿನ ಕೃಷ್ಣಮೂರ್ತಿಪುರಂನ ವ್ಯಾಸರಾಜ ಮಠದಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರಿಗೆ ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಮನವಿ ಸಲ್ಲಿಸಿದರು.

ಮೈಸೂರು,ಆ.1(ಪಿಎಂ)–ತಿ.ನರಸೀಪುರದ ಯುವ ಬ್ರಿಗೇಡ್ ಮುಖಂಡ ವೇಣುಗೋಪಾಲ್ ಹತ್ಯೆ ಪ್ರಕರಣವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದೆ ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆರೋಪಿಸಿದರು.

ಮೈಸೂರಿನ ಕೃಷ್ಣಧಾಮ ಆವರಣದಲ್ಲಿ ಮಂಗಳವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ವೇಣುಗೋಪಾಲ್ ಹತ್ಯೆ ಪೂರ್ವ ಯೋಜಿತವಾಗಿ ನಡೆದಿದೆ. ಇಲ್ಲಿ ಯಾವುದೇ ವೈಯಕ್ತಿಕ ಎನ್ನುವಂಥದ್ದು ಇಲ್ಲ. ಮೂರ್‍ನಾಲ್ಕು ವರ್ಷಗಳಿಂದ ಹಿಂದೂಗಳನ್ನು ಒಗ್ಗೂಡಿಸಿದ ಬೆಳವಣಿಗೆ ಸಹಿಸದ ರಾಜಕಾರಣಿಗಳು ಹಾಗೂ ಹಿಂದೂ ವಿರೋಧಿಗಳು ಈ ಕೊಲೆ ಹಿಂದಿದ್ದಾರೆ. ಪ್ರಕರಣದಲ್ಲಿ ಬಂಧಿತರಾಗಿರುವವರನ್ನು ಬಿಡುಗಡೆ ಮಾಡಿಸುವ ಪ್ರಯತ್ನವನ್ನೂ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಆಪಾದಿಸಿದರು.

ವೇಣುಗೋಪಾಲ್ ಕುಟುಂಬ ಈಗ ಅನಾಥವಾಗಿದೆ. ಬಡತನದಲ್ಲಿರುವ ಆ ಕುಟುಂಬಕ್ಕೆ ಸರ್ಕಾರದಿಂದ 25 ಲಕ್ಷ ರೂ. ಪರಿಹಾರ ನೀಡಬೇಕು. ಜೊತೆಗೆ ವೇಣುಗೋಪಾಲ್ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಈ ಸಂಬಂಧ ಮೈಸೂರು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಉಡುಪಿ ವೀಡಿಯೋ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿ, ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಪ್ರಾರಂಭದಲ್ಲಿ ಗೃಹಮಂತ್ರಿಗಳೇ ಇದೊಂದು ಮಕ್ಕಳ ಆಟ ಎಂಬ ಹೇಳಿಕೆ ನೀಡಿದ್ದರು. ಈ ಪ್ರಕರಣದ ಪೂರ್ವದಲ್ಲಿ ಸಾಕಷ್ಟು ಈ ರೀತಿ ಆಗಿದೆ. ನಿನ್ನೆ ಒಬ್ಬ ವಿದ್ಯಾರ್ಥಿನಿ ತನಗೆ ಕೆಟ್ಟ ಸಂದೇಶಗಳು ಬರುತ್ತಿವೆ ಎಂದು ದೂರು ನೀಡಿದ್ದಾಳೆ. ಇದರ ಹಿಂದೆ ದುಷ್ಟಶಕ್ತಿ ಕೆಲಸ ಮಾಡುತ್ತಿದೆ ಎಂದು ದೂರಿದರು.

ಈ ಪ್ರಕರಣದಲ್ಲಿ ರಾಜ್ಯ ಸರ್ಕಾರದಿಂದ ನ್ಯಾಯ ಸಿಗುತ್ತದೆ ಎಂದು ನನಗೆ ಅನ್ನಿಸುತ್ತಿಲ್ಲ. ಆದರೆ ಶ್ರೀರಾಮ ಸೇನೆ ಸೇರಿದಂತೆ ಹಿಂದೂ ಸಂಘಟನೆಗಳಿಂದ ದೊಡ್ಡಪ್ರಮಾಣದ ಹೋರಾಟ ಮಾಡುತ್ತೇವೆ ಎಂದರು.

ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬು ಕೂಡ ಭೇಟಿ ನೀಡಿ ಇಲ್ಲೇನು ಸಾಕ್ಷ್ಯ ಸಿಕ್ಕಿಲ್ಲ ಎಂದಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಅವರು ವೀಡಿಯೋ ಇಲ್ಲ ಎಂದಿದ್ದಾರಷ್ಟೇ. ಆ ರೀತಿ ಹೇಳಲೂ ಬಾರದಿತ್ತು. ಅವರ ಹೇಳಿಕೆ ಒಪ್ಪುವುದಿಲ್ಲ ಎಂದು ಹೇಳಿದರು.

ಜ್ಞಾನವ್ಯಾಪಿ ಮಸೀದಿ ಎಂದು ಕರೆಯುವುದೇ ತಪ್ಪೆಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿ, ಅವರ ಹೇಳಿಕೆ ಅತ್ಯಂತ ಸ್ವಾಗತಾರ್ಹ. ಮುಸಲ್ಮಾನರು ಸೌಹಾರ್ದತೆಯಿಂದ ಆ ಕಾಶಿವಿಶ್ವನಾಥನ ದೇವಸ್ಥಾನವನ್ನು ಬಿಟ್ಟುಕೊಡಬೇಕು ಎಂದು ಒತ್ತಾಯಿಸಿದರು.

ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣ ಮರು ತನಿಖೆ ಆಗಲೇಬೇಕು

ಮೈಸೂರು,ಆ.1(ಪಿಎಂ)– ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣ ಮರು ತನಿಖೆ ಆಗಲೇಬೇಕು. ಆ ಭಾಗದಲ್ಲಿ ಸುಮಾರು 25 ಪ್ರಕರಣಗಳು ಅದೇ ರೀತಿಯಲ್ಲಿ ಆಗಿದ್ದು, ಹಾಗಾಗಿ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗ ರಚನೆ ಮೂಲಕ ಸಮಗ್ರ ತನಿಖೆ ನಡೆಸಬೇಕು ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆಗ್ರಹಿಸಿದರು.

ಸದರಿ ಪ್ರಕರಣದ ಮರು ತನಿಖೆಗೆ ಒತ್ತಾಯ ಕೇಳಿಬರುತ್ತಿರುವ ಸಂಬಂಧ ಪ್ರತಿಕ್ರಿಯಿಸಿದ ಅವರು, ಇದು ಗಂಭೀರವಾದ ಪ್ರಕರಣ. ಒಬ್ಬ ಅಮಾಯಕನನ್ನು 10 ವರ್ಷ ಜೈಲಿನಲ್ಲಿ ಕೊಳೆಯುವಂತೆ ಮಾಡಿದರು. ಇಲ್ಲಿ ಬಹಳ ದೊಡ್ಡ ಅನ್ಯಾಯ ಆಗಿದೆ. ಜೊತೆಗೆ ಅದೊಂದೇ ಪ್ರಕರಣವಲ್ಲ. ಆ ಭಾಗದಲ್ಲಿ ಸುಮಾರು 25 ಪ್ರಕರಣಗಳು ಅದೇ ರೀತಿಯಲ್ಲಿ ಆಗಿವೆ ಎಂದರು.

ಪೇಜಾವರ ಶ್ರೀಗಳಿಗೆ ಮನವಿ ಸಲ್ಲಿಸಿದ ಮುತಾಲಿಕ್

ಮೈಸೂರು,ಆ.1(ಪಿಎಂ)– ಶ್ರೀ ರಾಮಚಂದ್ರನ ಜನ್ಮಸ್ಥಳ ಅಯೋಧ್ಯೆಯಲ್ಲಿ ಮರು ನಿರ್ಮಾಣವಾಗುತ್ತಿರುವ ರಾಮಮಂದಿರ ನಿರ್ಮಾಣ ಕಾಮಗಾರಿಯಲ್ಲಿ ನೇಮಿಸಿರುವ ಮುಸಲ್ಮಾನ ಗುತ್ತಿಗೆದಾರರು ಹಾಗೂ ಕೆಲಸಗಾರರನ್ನು ಕೈಬಿಡುವಂತೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯರೂ ಆದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರಿಗೆ ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಮಂಗಳವಾರ ಮನವಿ ಸಲ್ಲಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ವ್ಯಾಸರಾಜ ಮಠಕ್ಕೆ ಶ್ರೀಗಳು ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರಿಗೆ ಪ್ರಮೋದ್ ಮುತಾಲಿಕ್ ಮನವಿ ಸಲ್ಲಿಸಿದರು. ಶ್ರೀರಾಮ ಜನ್ಮಸ್ಥಾನ ಮಂದಿರ ಕೇವಲ ಒಂದು ಕಲ್ಲಿನ ಕಟ್ಟಡವಲ್ಲ. ಅದು ಕೋಟ್ಯಂತರ ಹಿಂದೂಗಳ ಭಕ್ತಿ–ಭಾವನೆಯ ಸಂಕೇತ. ಹಿಂದೂ ಶಿಲ್ಪಿಗಳಿಂದಲೇ ಮಂದಿರ ಪೂರ್ಣಗೊಳಿಸಬೇಕೆಂದು ಮನವಿಯಲ್ಲಿ ಅವರು ಕೋರಿದ್ದಾರೆ. ಶ್ರೀರಾಮ ಸೇನೆ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ, ಬೆಂಗಳೂರು ಮಹಾನಗರ ಅಧ್ಯಕ್ಷ ಎಸ್.ಭಾಸ್ಕರ್, ದಕ್ಷಿಣ ವಿಭಾಗದ ಅಧ್ಯಕ್ಷ ಅಮರ್‌ನಾಥ್, ಮೈಸೂರು ನಗರಾಧ್ಯಕ್ಷ ಸಂಜಯ್, ಹಿಂದೂಪರ ಕಾರ್ಯಕರ್ತರಾದ ರಾಕೇಶ್‌ಭಟ್, ವಿಕ್ರಂ ಅಯ್ಯಂಗಾರ್, ಅಜಯ್‌ಶಾಸ್ತ್ರಿ ಮತ್ತಿತರರು ಹಾಜರಿದ್ದರು.

ಮೈಸೂರಲ್ಲೂ ಮದ್ರಾಸ್ ಐ ಬಾಧೆ; 50ಕ್ಕೂ ಅಧಿಕ ವಿದ್ಯಾರ್ಥಿನಿಯರಿಗೆ ಸೋಂಕು



ಮೈಸೂರು, ಆ.1(ಜಿಎ)– ಮದ್ರಾಸ್ ಐ ಭಾದೆ ಮೈಸೂರಿಗೂ ಲಗ್ಗೆ ಇಟ್ಟಿದ್ದು, ವಿದ್ಯಾರ್ಥಿನಿಯರ ಹಾಸ್ಟೆಲ್‌ವೊಂದರಲ್ಲಿ 50ಕ್ಕೂ ಅಧಿಕ ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿದೆ.

ಮೈಸೂರಿನ ಖಾಸಗಿ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ 50ಕ್ಕೂ ಅಧಿಕ ವಿದ್ಯಾರ್ಥಿನಿಯರಿಗೆ ಮದ್ರಾಸ್ ಐ ಸೋಂಕು ಕಾಣಿಸಿಕೊಂಡಿದ್ದು, ಮುಂಜಾಗ್ರತೆ ಕ್ರಮವಾಗಿ ಚಿಕಿತ್ಸೆ ನೀಡಲಾಗಿದ್ದು, ನಂತರ ಪೋಷಕರ ಅನುಮತಿ ಮೇರೆಗೆ ಅವರ ಮನೆಗಳಿಗೆ ಕಳುಹಿಸಲಾಗಿದೆ.

ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಕಣ್ಣು ಕೆಂಪು ಬಣ್ಣಕ್ಕೆ ತಿರುಗಿ, ತುರಿಕೆ ಕಾಣಿಸಿಕೊಂಡಿದೆ. ಸೋಂಕಿತರ ಸಂಖ್ಯೆ ಹೆಚ್ಚಾದ ಹಿನ್ನಲೆಯಲ್ಲಿ ವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಲಾಗಿದ್ದು, ಉಳಿದ ವಿದ್ಯಾರ್ಥಿನಿಯರು ಆತಂಕಗೊಂಡು ತಾವು ಮನೆಗೆ ಹೋಗುತ್ತೇವೆಂದು ಹಾಸ್ಟೆಲ್ ವಾರ್ಡನ್ ಬಳಿ ಮನವಿ ಮಾಡಿದ್ದಾರೆ. ನಂತರ ಆಡಳಿತ ಮಂಡಳಿಯ ಜೊತೆ ಮಾತನಾಡಿ ಅನುಮತಿ ಪತ್ರ ಪಡೆದುಕೊಂಡು ಮನೆಗೆ ಕಳುಹಿಸಿದ್ದಾರೆ.

ಮುಂಜಾಗ್ರತೆ ವಹಿಸಿ: ಮದ್ರಾಸ್ ಐ ಸೋಂಕು ಕಣ್ಣಿನ ಬಿಳಿ ಭಾಗವನ್ನು ಆವರಿಸಿರುವ ಮುಂಭಾಗವನ್ನು ಬಾಧಿಸುತ್ತದೆ. ಆದ್ದರಿಂದ ಪದೇಪದೆ ಕೈಗಳಿಂದ ಕಣ್ಣನ್ನು ಮುಟ್ಟಬಾರದು. ಆಗಾಗ್ಗೆ ಸೋಪು ನೀರಿನಿಂದ ಕೈ ತೊಳೆಯಬೇಕು. ಸೋಂಕು ಕಾಣಿಸಿಕೊಂಡಲ್ಲಿ ಮನೆಮದ್ದು ಬಳಸದೆ ಕೂಡಲೇ ವೈದ್ಯರನ್ನು ಕಾಣಬೇಕು. ಸೋಂಕಿರುವ ತನಕ ಕಪ್ಪು ಕನ್ನಡಕ ಬಳಸುವುದು ಮುಖ್ಯವಾಗಿದ್ದು, ಶಾಲಾ–ಕಾಲೇಜು, ವಸತಿ ನಿಲಯ, ಪಿಜಿ ಸೇರಿದಂತೆ ಜನಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲಿ ಪ್ರತ್ಯೇಕವಾಗಿರಬೇಕು.

ಆರೋಗ್ಯಾಧಿಕಾರಿಗಳಿಂದ ಮುಚ್ಚಿಡುವ ಯತ್ನ.....!

ರಾಜ್ಯದಲ್ಲಿ ಮದ್ರಾಸ್ ಐ ಸೋಂಕು ಹೆಚ್ಚಳ ಹಿನ್ನಲೆ ಸೂಕ್ತ ಕ್ರಮ ವಹಿಸಬೇಕಾದ ಜಿಲ್ಲಾ ಆರೋಗ್ಯಾಧಿಕಾರಿಗಳು ಮಾಹಿತಿ ಮುಚ್ಚಿಡುವ ಪ್ರಯತ್ನ ನಡೆಸಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಸಂಬಂಧ ಜು.31 ರಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಮದ್ರಾಸ್ ಐ ಬಾಧೆ ಕುರಿತು ಹಲವು ದಿನಗಳಿಂದ ನಿರಂತರವಾಗಿ ಜಾಗೃತಿ ಮೂಡಿಸಲಾಗುತ್ತಿದೆ. ಪಿಹೆಚ್‌ಸಿ ಸೇರಿದಂತೆ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಿಂದ ಮಾಹಿತಿ ನಿತ್ಯ ವರದಿ ಪಡೆಯಲಾಗುತ್ತಿದ್ದು, ಇಲ್ಲಿಯವರೆಗೆ ಒಂದೂ ಪ್ರಕರಣವೂ ವರದಿಯಾಗಿಲ್ಲ ಎಂದಿದ್ದರು. ಆದರೆ, ನಗರದಲ್ಲಿರುವ ಖಾಸಗಿ ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಮದ್ರಾಸ್ ಐ ಸೋಂಕು ಕಾಣಿಸಿಕೊಂಡಿರುವುದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ತಿಳಿದಿರಲಿಲ್ಲವೇ ಎಂದು ಕೆಲ ಪ್ರಜ್ಞಾವಂತ ನಾಗರಿಕರು ಪ್ರಶ್ನಿಸಿದ್ದಾರೆ.

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM 10yrs WARRANTY
ISO 9001:2015 Certified Depot
CALL 99012 91267 98454 26862

ಕಾಂಚೀಪುರಂ ರೇಷ್ಮೆ ಸೀರೆಗಳು 50% ರಿಯಾಯಿತಿ
ಮಾರಾಟ ಮತ್ತು ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಹೋಟೆಲ್ ಮಯೂರ ಯಾತ್ರಿನಿವಾಸ್
ಜೆ.ಎಲ್.ಬಿ. ರಸ್ತೆ, ಮೈಸೂರು - 5
ಮೊ. : 9481820079

ಹಸಿರು ನಮ್ಮ ಉಸಿರು

Kumuda Spa
Best price guaranteed in Hair & Salon services.
SPA & Massage packages available in most reasonable price.
10% Discount on all Package
0821-4193567/9632769550

RENT OR LEASE
2BHK Flat available for Rent and Lease Near Vijayanagar 1st Stage Mysore with one Car Parking
3BHK Independent House for Rent in Gravity -1 Prashanth Layout Near Dadadahalli, Mysore
8904804787

MONTESSORI / KINDERGARTEN NURSERY TEACHERS TRAINING
SIX MONTHS COURSE, REGULAR/CORRESPONDENCE
SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD
100 % JOB ASSURED @ ANY PUBLIC OR PRIVATE SCHOOLS
JNANA GANGOTRI CONVENT
Rajendra Nagara Mysore-570 007. CALL: 9243580672

SITES FOR SALE IN MYSURU
MUDA APPROVED
SITES FOR SALE IN KRS ROAD & BANNUR ROAD.
30X40, 30X50 & 50X80
READY TO REGISTER
& BANK LOAN AVAILABLE
CONTACT 8310839079

ಉಬ್ಬಿರುವ ರಕ್ತನಾಳಗಳಿಗೆ ಶಾಶ್ವತ ವಿದಾಯ ಹೇಳಿ ಆಧುನಿಕ ಎಂಡೊ ವೀನಸ್ ಲೇಸರ್ ಅಬಲೇಶನ್ ಮುಖಾಂತರ
03, 10,17,24 & 31 ಆಗಸ್ಟ್ 2023, ಗುರುವಾರ
ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
ಡಾ. ವಿನಯ್ ಸ್ವಾಪತಿ
ನೇಮಕಾತಿಗಳಿಗಾಗಿ 808 883 7000
Avis Vascular Centre
www.avisvascularcentre.com


Commercial Space for Rent
1400 sq.ft at 6th Main Road Vinayaka Nagara, Mysore-12
Call: 9845333286 9449621174

ಮೈಸೂರು ಮಿತ್ರ ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

WANTED
PHARMACIST
with or without experience but with certificate and 2 Wheeler Driving License
PHARMA AID
with experience and 2 Wheeler Driving License
Send your resume to: The Manager
RAGHULAL & CO.,
207, Sayyaji Rao Road, Mysore - 570 001
Ph: 0821-2520733 / 4260733

Vidyavardhaka Sangha (Regd), Mysore
VIDYAVARDHAKA COLLEGE OF ENGINEERING
Autonomous Institute, Accredited by NBA, NAAC with "A" Grade
Gokulam, 3rd Stage, Mysuru-570 002
STAFF REQUIRED
TEACHING
ENGG. DEPT
Professor, Associate Professor in CS&E, IS&E, AI&ML: Ph.D is Compulsory
Assistant Professor in CS&E, IS&E, AI&ML, E&CE, E&EE: First Class in BE & M.Tech & Ph.D is Compulsory.
MBA DEPT.
• Professor in MBA Dept.: Ph.D is Compulsory.
• Assistant Professor in MBA Dept.: BE/B.Tech & MBA, Specialization in Banking & Finance, HR & Business Analytics, Preference will be given to PhDs.
Physical Education Director
First Class in BPEd, MPEd, KSET/NET and preference will be given to PhDs.
NON TEACHING
Instructor / Assistant Instructor : Diploma in CS&E / IS&E / E&EE / Civil Engg. with relevant Experience.
First Division Clerk : Any post graduation with relevant experience, good communication Skill and computing Knowledge.
Placement Executive : Any Master's Degree with experience in relevant field.
GYM Instructor : Relevant experience
For further details and to apply visit https://vvce.ac.in/careers

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಚಂದ್ರಶೇಖರಯ್ಯ
ನಿವೃತ್ತ ಮುಖ್ಯಪೇದೆ

ಇವರು ದಿ: 23.07.23 ... ದಿ: 02.08.23 ಬುಧವಾರ ಮಧ್ಯಾಹ್ನ 1.30 ರಿಂದ 4.30 ಗಂಟೆಗೆ ... ಮೈಸೂರು ... ಕುಟುಂಬವರ್ಗದವರು

10ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಶ್ರೀಮತಿ ಪುಟ್ಟಸಿದ್ದಮ್ಮ ಮಗ ಮತ್ತು ಮಕ್ಕಳು ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಹಳೇ ಕೆಸರೆ ಮೈಸೂರು

ಶ್ರೀ ಆರ್.ವಿ.ರಾಮಯ್ಯ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ನಂಬರ್ 99, ಧನುಗಾಲ ಎಸ್ಟೇಟ್, ಧನುಗಾಲ ಅಂಚೆ ಮತ್ತು ಗ್ರಾಮ, ಕೊಡಗು ಜಿಲ್ಲೆ-571213, ಇಲ್ಲಿ ವಾಸವಾಗಿರುವ ಶ್ರೀ. ಎಮ್. ಎ. ಮೊಣ್ಣಪ್ಪ ಬಿನ್ ಎಂ. ಎಸ್. ಐಯಪ್ಪ ಮತ್ತು ಶ್ರೀಮತಿ. ಎನ್. ಎ. ಬೋಳಮ್ಮ ಕೋಂ. ಎಮ್.ಎ. ಮೊಣ್ಣಪ್ಪ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಉಚಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಐಯ್ಯಜಯ್ಯನಹುಂಡಿ ಗ್ರಾಮ ಇಲ್ಲಿನ ಸರ್ವೆ ನಂಬರ್ 9/4 ರಲ್ಲಿ ಅನ್ಯಕ್ರಾಂತಗೊಂಡಿರುವ ಜಮೀನಿನಲ್ಲಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಸಭೆ ವಿಷಯ ಸಂಖ್ಯೆ 19, ದಿನಾಂಕ 26/05/2007, ರಂತೆ ನಿರ್ಮಿಸಿರುವ ಪೂರ್ವ–ಪಶ್ಚಿಮ: 19 ಮೀಟರ್, ಉತ್ತರ–ದಕ್ಷಿಣ: 12 ಮೀಟರ್, ಒಟ್ಟು ವಿಸ್ತೀರ್ಣ: 228 ಚದರ ಮೀಟರ್ ಅಳತೆಯ ನಿವೇಶನ ಸಂಖ್ಯೆ: 7 ಮತ್ತು ಇದಕ್ಕೆ ಚಕ್ಕುಬಂದಿ;
ಪೂರ್ವಕ್ಕೆ:– ಸರ್ವೆ ನಂಬರ್ 9/1ಪಿ, ಪಶ್ಚಿಮಕ್ಕೆ:– ರಸ್ತೆ, ಉತ್ತರಕ್ಕೆ: – ನಿವೇಶನ ಸಂಖ್ಯೆ 6, ದಕ್ಷಿಣಕ್ಕೆ:– ಸರ್ವೆ ನಂಬರ್ 10.

Sd/- M.N.Prakash kalappa, KAR- 1996-2000, # 2-3, First Floor, PRI Complex, 67/7A, New Sayyajirao Road, Fort Mohalla, Mysore 570004, India. Cell: 93431 12535 E-mail: mnprakashkalappa@gmail.com
ಮೈಸೂರು: 01/08/2023

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ನಗರ, ಗಂಗೋತ್ರಿ ಲೇಔಟ್, 2ನೇ ಹಂತ, ಸಾಹುಕಾರ್ ಚೆನ್ನಯ್ಯ ರಸ್ತೆ, 1ನೇ ಫ್ಲೋರ್, ಮನೆ ನಂ.8 ರಲ್ಲಿ ವಾಸವಾಗಿರುವ ಲೇಟ್.ಸಿಂಗಯ್ಯ ಎಸ್.ಡಿ ರವರ ಮಕ್ಕಳಾದ ಶ್ರೀಮತಿ.ಕುಸುಮ.ಎ, ಶ್ರೀಮತಿ.ನಾಗರತ್ನ, ಶ್ರೀಮತಿ.ಎಸ್.ಎನ್.ಆಶಾ ಹಾಗೂ ಶ್ರೀಮತಿ.ದೀಪಾ ಕಲಾ ರವರಿಂದ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೇ. ಶ್ರೀಮತಿ.ಕುಸುಮ.ಎ, ಶ್ರೀಮತಿ.ನಾಗರತ್ನ, ಶ್ರೀಮತಿ.ಎಸ್.ಎನ್.ಆಶಾ ಹಾಗೂ ಶ್ರೀಮತಿ ದೀಪಾ ಕಲಾ ರವರು ಮಾತ್ರ ಮಾಲೀಕರಾಗಿ ಅನುಸೂಚಿ 'ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಗೂ ಒಳಪಟ್ಟು ಸ್ವಾಧೀನದಲದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ಲೀಜದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ಬಂಧ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ: ಮೈಸೂರು ಸಿಟಿ, ಸರಸ್ವತಿಪುರಂ, ಟಿ.ಕೆ.ಲೇಔಟ್ ಬಡಾವಣೆಯಲ್ಲಿರುವ 363/ಹೆಚ್ ನೇ ನಂಬರ್ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ 45.00 ಅಡಿ, ಉತ್ತರ–ದಕ್ಷಿಣ 40.00 ಅಡಿ ಒಟ್ಟು 1800.00 ಚದರ ಅಡಿಗಳುಳ್ಳ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ : ನಿವೇಶನ ಸಂಖ್ಯೆ–365/ಎ ಮತ್ತು 363/ಜಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 363/ಜಿ.

ಸಹಿ/– ಮೋಹನ್ ಸಿ, ವಕೀಲರು
ನಂ.1164, 1ನೇ ಮಹಡಿ, ನಂಜುಂಡೇಶ್ವರ ಕಾಂಪ್ಲೆಕ್ಸ್, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–04, ಮೊ: 94484 46407.
ದಿನಾಂಕ: 24/07/2023 ಸ್ಥಳ: ಮೈಸೂರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು

ಮೈಸೂರು–ನಂಜನಗೂಡು ರಸ್ತೆ, ಬಂಡೀಪಾಳ್ಯ, ಮೈಸೂರು–570 025.
E-Mail:apmcmysore@rediffmail.com
apmcmys@gmail.com ದೂರವಾಣಿ: 0821–2482389
ಸಂ. ಕೃಉಮಾಸ(ಮೈ)/1280/2023–24 ದಿನಾಂಕ: 31.07.2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ, ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಮಿತಿಯ ಸಗಟು ಹಣ್ಣುಗಳ ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ವಿದ್ಯುತ್ ಸ್ಥಾವರ, ಬೀದಿ ದೀಪಗಳು ಮತ್ತು ವಿವಿಧ ಕಟ್ಟಡಗಳಲ್ಲಿ ವಿದ್ಯುತ್ ನಿರ್ವಹಣೆ, ಉಸ್ತುವಾರಿ ಮತ್ತು ಪ್ರತಿದಿನ ಸಂಜೆ ಪ್ರಾಂಗಣ ಮತ್ತು ಉಪಪ್ರಾಂಗಣದ ಬೀದಿದೀಪಗಳನ್ನು ಬೆಳಗಿಸಿ ಬೆಳಿಗ್ಗೆ ಆರಿಸುವುದನ್ನು ಸೇರಿದಂತೆ ನಿರ್ವಹಿಸಬೇಕಾದ ಕಾಮಗಾರಿ, ಟೆಂಡರ್ ವೇಳಾಪಟ್ಟಿ: ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿ: 16.08.2023 ಖಾಲಿ ಟೆಂಡರ್ ಫಾರಂ ಪಡೆಯುವ ದಿ: 17.08.2023, ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕಡೆಯ ದಿ: 18.08.2023ರ ಸಂಜೆ 4.00 ಗಂಟೆಯೊಳಗೆ, ಟೆಂಡರ್ ತೆರೆಯುವ ದಿ: 18.08.2023ರ ಸಂಜೆ 4.30 ಗಂಟೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು
ಸಹಿ/– ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು
DIPR/DDMYS/KSMCA/161/2023-24

ಚಿರಸ್ಮರಣೆ



ಶ್ರೀ ಎಚ್.ಎಸ್. ನಾಗರಾಜ್

ನಿವೃತ್ತ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ನಿರ್ದೇಶಕರು, ಎಂ.ಐ.ಎಸ್., ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು.
ಜನನ: 08.04.1934 ಮರಣ: 29.07.2023

ಕಾಲನ ಮಡಿಲಲ್ಲಿ ಶಾಶ್ವತ ಅಪ್ಪುಗೆಯಲ್ಲಿರುವ ನಮ್ಮೆಲ್ಲರ ಪ್ರೀತಿಯ
ದಿವ್ಯ ಆತ್ಮ, ನಿಮ್ಮ ಪ್ರೀತಿ, ಕರುಣೆ, ಜ್ಞಾನ ಅಪರಿಮಿತ,
ಹಲವರ ಹೃದಯಗಳನ್ನು ತಟ್ಟಿವೆ. ಎಲ್ಲರ ಮನದಲ್ಲೂ ಇದೆ
ನಿಮ್ಮ ಒಲವಿನ ರೂಪ. ನಿಮ್ಮ ಅಳಿಯದ ನೆನಪು ಇನ್ನು ನಮ್ಮ ಶಾಶ್ವತ ಸಂಗಾತಿ.
ನೀವು ಇರುವಿರಿ ನಮ್ಮೊಳಗೆ,
ಇರುಳಿನಲ್ಲಿ ದಾರಿ ತೋರಿಸುವ ಉಜ್ವಲ ಹಣತೆಯಂತೆ.

ದುಃಖತಪ್ತ: ಕುಟುಂಬವರ್ಗದವರು ಹಾಗೂ ಅಪಾರ ಬಂಧು–ಮಿತ್ರರು

ನಗರಸಭಾ ಕಾರ್ಯಾಲಯ ಚಾಮರಾಜನಗರ

ಸಂಖ್ಯೆ: ನ.ಸ.ಚಾ/ತಾಂ.ವಿ/ಕಿ.ಅ/ಪಿ.ಆರ್/ /2023–24 ದಿನಾಂಕ: 28–07–2023

ಟೆಂಡರ್ ಪ್ರಕಟಣೆ

ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆ 1999ರಂತೆ ಅರ್ಹತೆ ಹೊಂದಿರುವ ಸಿವಿಲ್/ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಸೀಲ್ ಮಾಡಿದ ಏಕ ಲಕೋಟೆ (ಇ.ಎಂ.ಡಿ. ಯೊಂದಿಗೆ) ಟೆಂಡರ್‌ನ್ನು ಸಲ್ಲಿಸಬಹುದಾಗಿದೆ.

ವೇಳಾ ಪಟ್ಟಿ
1. ಖಾಲಿ ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: 03.08.2023 ಸಂಜೆ 5.30 ರವರೆಗೆ
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–08–2023 ಸಂಜೆ 4.00 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ: 07–08–2023 ಬೆಳಿಗ್ಗೆ 11.00 ಗಂಟೆಗೆ

ಕ್ರ.ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ	ಕಾಲಾವಧಿ
1.	ಚಾಮರಾಜನಗರ ನಗರಸಭಾ ವ್ಯಾಪ್ತಿಯ ವಾರ್ಡ್ ನಂ.14ರ ಅಲಾ ಮಸೀದಿ ಹಿಂಭಾಗದ ಷಫೀರ್ ರವರ ಮನೆಯಿಂದ ಇಮ್ರಾನ್ ರವರ ಮನೆವರೆಗೆ ಪೈಪ್‌ಲೈನ್ ಅಳವಡಿಸುವುದು ಮತ್ತು ಗ್ರಾವೆಲ್ ಹಾಕುವುದು. ವಾರ್ಡ್ ನಂ.22ರಲ್ಲಿ 2 ಮತ್ತು 3ನೇ ಕ್ರಾಸ್‌ಗಳ ನಡುವೆ ಇರುವ ಕನ್ಸರ್‌ವೆನ್ಸಿ ಗಲ್ಲಿಗೆ ಗ್ರಾವೆಲ್ ಹಾಕುವುದು ಹಾಗೂ ವಾರ್ಡ್ ನಂ.27ರಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗ ಗ್ರಾವೆಲ್ ಹಾಕುವುದು ಹಾಗೂ ವಾರ್ಡ್ ನಂ.06 ಗಾಳೀಪುರದ ಹಳೇ ಆರ್.ಟಿ.ಓ ಆಫೀಸ್ ಹಿಂಭಾಗ ಆರ್.ಓ.ಪ್ಲಾಂಟ್ ಸುತ್ತ ಕಾಂಪೌಂಡ್ ನಿರ್ಮಾಣ ಕಾಮಗಾರಿ	4.10	10250.00	30 ದಿನಗಳು

ಷರಾ: 1) ಷರತ್ತುಗಳು ಟೆಂಡರ್ ದಸ್ತಾವೇಜಿನಲ್ಲಿ ಲಭ್ಯವಿರುತ್ತವೆ.
2) ಕಾಮಗಾರಿಗೆ ತಗುಲುವ ವೆಚ್ಚವನ್ನು ನಗರಸಭಾ ನಿಧಿಯಲ್ಲಿ ಹಣದ ಲಭ್ಯತೆಯ ಮೇರೆಗೆ ಪಾವತಿಸಲಾಗುವುದು.

ವಾ.ಸಾ.ಸಂ.ಇ/ಚಾ.ನಗರ 81/2023–24 ಸಹಿ/– ಪೌರಾಯುಕ್ತರು, ನಗರಸಭೆ, ಚಾಮರಾಜನಗರ